ಕರ್ನಾಟಕದಲ್ಲಿ ಪುರಾತತ್ವ ಲೇಖನಾಶಾಸ್ತ್ರದ ಬೆಳವಣಿಗೆ

The Development of Archaeological Historiography in Karnataka

(ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಸಂಪ್ರಬಂಧ)

ಸಂಶೋಧಕ

ಎಂ.ಬಿ.ದೀಪಕ್

ಮಾರ್ಗದರ್ಶಕರು

ರಮೇಶ ನಾಯಕ

ಆಯ್ಕೆಶ್ರೇಣಿ ಅಧ್ಯಾಪಕರು

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ-೫೮೩ ೨೭೬

೨೦೦೯-೧೦

ಕರ್ನಾಟಕದಲ್ಲಿ ಪುರಾತತ್ವ ಲೇಖನಾಶಾಸ್ತ್ರದ ಬೆಳವಣಿಗೆ

The Development of Archaeological Historiography in Karnataka

(ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಸಂಪ್ರಬಂಧ)

ಸಂಶೋಧಕ

ಎಂ.ಬಿ.ದೀಪಕ್

ಮಾರ್ಗದರ್ಶಕರು

ರಮೇಶ ನಾಯಕ

ಆಯ್ಕೆಶ್ರೇಣಿ ಅಧ್ಯಾಪಕರು

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ-೫೮೩ ೨೭೬

೨೦೦೯-೧೦

ದೃಢೀಕರಣ ಪತ್ರ

"ಕರ್ನಾಟಕದಲ್ಲಿ ಪುರಾತತ್ವ ಲೇಖನಾಶಾಸ್ತ್ರದ ಬೆಳವಣಿಗೆ" ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ದೀಪಕ್ ಎಂ.ಬಿ.ಇವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತಾರೆ. ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಪ್ರಸ್ತುತ ಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

(ರಮೇಶ ನಾಯಕ)
ಮಾರ್ಗದರ್ಶಕರು
ಪ್ರಾ.ಇ.ಪು.ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩೨೭೬

ದಿನಾಂಕ: ೧೫.೧೦.೨೦೦೯
ಸ್ಥಳ: ವಿದ್ಯಾರಣ್ಯ

ಪ್ರಮಾಣ ಪತ್ರ

"ಕರ್ನಾಟಕದಲ್ಲಿ ಪುರಾತತ್ವ ಲೇಖನಾಶಾಸ್ತ್ರದ ಬೆಳವಣಿಗೆ" ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ರಮೇಶ ನಾಯಕ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

Deepok·MB

(ದೀಪಕ್ ಎಂ.ಬಿ.)

ಎಂ.ಫಿಲ್ ಸಂಶೋಧನಾ ವಿದ್ಯಾರ್ಥಿ
ಪ್ರಾ.ಇ.ಪು.ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩೨೭೬

ದಿನಾಂಕ: ೧೫.೧೦.೨೦೦೯
ಸ್ಥಳ: ವಿದ್ಯಾರಣ್ಯ

ಕೃತಜ್ಞತೆ

ಕನ್ನಡ ವಿಶ್ವವಿದ್ಯಾಲಯದಲ್ಲಿ ಅಧ್ಯಯನಕ್ಕೆ ಅವಕಾಶ ಮಾಡಿಕೊಟ್ಟ ಕುಲಪತಿಗಳಾದ ಡಾ.ಎ.ಮುರಿಗೆಪ್ಪ, ಕುಲಸಚಿವರಾದ ಎಸ್.ಎಸ್.ಪೂಜಾರ್, ಅಧ್ಯಯನಾಂಗದ ಹಿಂದಿನ ನಿರ್ದೇಶಕರಾದ ಡಾ.ಪಾಂಡುರಂಗಬಾಬು ಹಾಗೂ ಇಂದಿನ ನಿರ್ದೇಶಕರಾದ ಡಾ.ವೀರೇಶ ಬಡಿಗೇರ ಅವರುಗಳಿಗೆ ಕೃತಜ್ಞತೆಗಳು.

ಶ್ರೀ ರಮೇಶ ನಾಯಕ ಅವರು ನನ್ನ ಈ ಪ್ರಬಂಧ ರಚನೆಗೆ ಸಲಹೆ-ಸೂಚನೆಗಳನ್ನು ನೀಡಿ ಸಹಕರಿಸಿದ್ದಾರೆ ಅವರಿಗೆ ವಂದನೆಗಳು. ವಿಭಾಗದ ಗುರುಗಳಾದ ಪ್ರೊ.ಸಿ.ಮಹದೇವ ಡಾ.ವಾಸುದೇವ ಬಡಿಗೇರ, ಡಾ.ಸಿ.ಎಸ್.ವಾಸುದೇವನ್, ಡಾ.ಎಸ್.ವೈ.ಸೋಮಶೇಖರ್ ಹಾಗೂ ಸಿಬ್ಬಂದಿವರ್ಗದವರಾದ ದಿಲ್‌ಶಾದಬಾನು, ಶ್ರೀ ರಮೇಶ ಇವರುಗಳಿಗೆ ನನ್ನ ಕತಜ್ಞತೆಗಳು.

ನನ್ನ ಅಧ್ಯಯನ ವಿಷಯದ ಆಯ್ಕೆಗೆ ಹಾಗೂ ನನ್ನ ಬೌದ್ಧಿಕ ಆಲೋಚನೆಗಳು ವಿಸ್ತಾರವಾಗುವುದಕ್ಕೆ ಸಲಹೆ-ಸೂಚನೆ ನೀಡಿ ಮುನ್ನಡಿಸಿದ ಡಾ.ಚಿನ್ನಸ್ವಾಮಿ ಸೋಸಲೆ, ಶ್ರೀಮತಿ ನಾಗವೇಣಿ ಚಿನ್ನಸ್ವಾಮಿ ಸೋಸಲೆ ಅವರಿಗೆ ಪುಟಾಣಿಗಳಾದ ಸ್ಫೂರ್ತಿ ಮತ್ತು ತಾನ್ಯಾಳಿಗೆ ನನ್ನ ಪ್ರೀತಿಯ ನೆನೆಕೆಗಳು. ಸಹಕಾರ ನೀಡಿದ ವಿಭಾಗದ ಗುರು ವೃಂಧ ಹಾಗೂ ನನ್ನ ಸಹಪಾಠಿಗಳಿಗೆ ವಂದನೆಗಳು. ನನ್ನ ಶೈಕ್ಷಣಿಕ ಕಾರ್ಯಚಟುವಟಿಕೆಗಳಿಗೆ ಪ್ರೋತ್ಸಾಹಿಸಿ ಬೆಂಬಲಿಸಿದ ಪೂಜ್ಯ ತಂದೆ ತಾಯಿ ಹಾಗೂ ಸಹೋದರ, ಸಹೋದರಿಯರಿಗೆ ನನ್ನ ವಂದನೆಗಳು.

ಅಧ್ಯಯನ ಸಂದರ್ಭದಲ್ಲಿ ಉಪಯುಕ್ತ ಗ್ರಂಥ, ಪ್ರಬಂಧಗಳನ್ನು ಸಕಾಲಕ್ಕೆ ಒದಗಿಸಿ ಕಾರ್ಯಪೂರ್ಣಗೊಳ್ಳಲು ಸಹಕರಿಸಿದ ಗ್ರಂಥಾಲಯದ ಮುಖ್ಯಸ್ಥರಾದ ಡಾ.ರಾಧಾಕೃಷ್ಣ, ಉಪಗ್ರಂಥಪಾಲಕರಾದ ಡಾ.ಎಚ್.ನಾಗವೇಣಿ ಹಾಗೂ ಸಿಬ್ಬಂದಿ ವರ್ಗಕ್ಕೆ ಕೃತಜ್ಞತೆಗಳು ಸಲ್ಲುತ್ತವೆ.

ಅಚ್ಚುಕಟ್ಟಾಗಿ ಅಕ್ಷರ ಜೋಡಣೆ ಮಾಡಿ ಸಹಕರಿಸಿ ಶ್ರೀಯುತ ವೀರೇಶ ಅವರಿಗೆ ಧನ್ಯವಾದಗಳು.

ಎಂ.ಬಿ.ದೀಪಕ್

ಪರಿವಿಡಿ

ಅಧ್ಯಾಯ ೧

ಅಧ್ಯಯನದ ಉದ್ದೇಶ, ವಿಧಾನ ಮತ್ತು ವ್ಯಾಪ್ತಿ

ಅಧ್ಯಯನದ ವಿಧಿ ವಿಧಾನ ಮತ್ತು ವ್ಯಾಪ್ತಿ

ಜ್ಞಾನವಲಯಗಳು ಗಟ್ಟಿಗೊಂಡ ಪ್ರಸ್ತುತಗೊಳ್ಳಬೇಕಾದರೆ ಅದರಲ್ಲಿ ಕೂಡಿಕೊಳ್ಳುವ ಹಾಗೂ ಕಳೆದುಕೊಳ್ಳುವ ಪ್ರಕ್ರಿಯೆಗಳು ನಿರಂತರವಾಗಿ ನಡೆಯುತ್ತಿರಲೇಬೇಕು. ಇಂಥ ಕ್ರಿಯೆಗಳು ಸೃಜನ-ಸೃಜನೇತರ, ಕಲೆ-ಸಾಹಿತ್ಯ ಹಾಗೂ ಸಮಾಜ-ವಿಜ್ಞಾನ ಎಲ್ಲ ವಿಷಯಗಳಲ್ಲಿ ತೀವ್ರಗತಿಯಲ್ಲಿ ವ್ಯಕ್ತಗೊಳ್ಳುತ್ತಿರುತ್ತವೆ. ಹೊಸ ಶೋಧನೆ, ಆವಿಷ್ಕಾರ, ತರ್ಕಗಳು, ನಿರ್ಬಂಧದ ಚಟುವಟಿಕೆಗಳು ಜ್ಞಾನ ಸೃಷ್ಟಿಸುವ ಕಾರ್ಯಗಳಲ್ಲಿ ಪ್ರತ್ಯಕ್ಷವಾಗಿ ಇಲ್ಲವೆ ಪರೋಕ್ಷವಾಗಿ ಕಾರ್ಯಗತಗೊಳ್ಳುತ್ತಿರುತ್ತವೆ. ಒಂದು ಕ್ಷೇತ್ರವನ್ನು ವಿಸ್ತರಿಸಿ ಗಟ್ಟಿಗೊಳಿಸಬೇಕಾದರೆ ಆ ವಲಯದಲ್ಲಿ ಸಂಶೋಧನೆ ಹಾಗೂ ವಿಮರ್ಶೆಗಳು ಜರುಗಲೇಬೇಕು. ಅಲ್ಲದೇ ನಡೆಯುವ ಸಂಶೋಧನೆಗಳು ಕೇವಲ ಅದೇ ಕ್ಷೇತ್ರದಲ್ಲಿಯ ಬದಲಾವಣೆಗಳಿಂದ ಮಾತ್ರ ರೂಪಗೊಳ್ಳದೇ ಬೇರೆ ಬೇರೆ ಕ್ಷೇತ್ರ ಹಾಗೂ ವಿಷಯ ವಲಯಗಳಿಗೆ ಪ್ರವೇಶಿಸಿ ಅಲ್ಲಿನ ಜ್ಞಾನಸಂಪತ್ತನ್ನು ತನ್ನಲ್ಲಿ ಒಳಗು ಮಾಡಿಕೊಳ್ಳುವ ಕ್ರಿಯೆಯಲ್ಲಿ ಕಾರ್ಯಗತಗೊಳ್ಳುತ್ತಾ ಹೋಗುತ್ತಿರುತ್ತದೆ. ಇಂಥ ಸಹಜ ಪ್ರಕ್ರಿಯೆಗಳು ಜ್ಞಾನವಲಯದ ಎಲ್ಲ ಕ್ಷೇತ್ರಗಳಲ್ಲಿ ಸದಾ ನಡೆದಿರುತ್ತವೆ. ಈ ಪರಿಣಾಮಗಳಿಂದ ಉಂಟಾಗುವ ಫಲಿತ ಅಥವಾ ಮೌಲ್ಯಗಳನ್ನು ಸಾಮಾನ್ಯವಾಗಿ ಸಂಶೋಧನೆ ಅಥವ ಆವಿಷ್ಕಾರಗಳೆಂದು ಗುರುತಿಸಲಾಗುತ್ತದೆ. ಪ್ರಕಟಗೊಳ್ಳುವ ಫಲಿತ ಅಥವ ಪರಿಣಾಮಗಳನ್ನು ಒಂದು ಶಿಸ್ತುಬದ್ಧ ಚೌಕಟ್ಟಿನೊಳಗೆ ತಂದು ಅದಕ್ಕೊಂದು ಅರ್ಥಬರುವಂತೆ ಮಾಡಲು ನಮಗೊಂದು ಅಚ್ಚುಕಟ್ಟಾದ ಹಾಗೂ ಶಿಸ್ತುಬದ್ಧವಾದ ಕ್ರಮಬೇಕಾಗುತ್ತದೆ. ಇಂಥ ಕ್ರಮಗಳನ್ನು ಸಾಮಾನ್ಯವಾಗಿ ಶಾಸ್ತ್ರ, ತಾತ್ವಿಕ ಚೌಕಟ್ಟು ಅಥವಾ ವಿಧಾನಗಳೆಂದು ಬೇರೆ ಬೇರೆ ಹೆಸರಿನಿಂದ ಕರೆಯುತ್ತಾರೆ. ಒಂದು ವಿಷಯದ ಬೆಳವಣಿಗೆ ಹಾಗೂ ಅದರ ಮಹತ್ವವನ್ನು ತಿಳಿಯಬೇಕಾದರೆ ಕಡ್ಡಾಯವಾಗಿ ನಮಗೊಂದು ಚೌಕಟ್ಟು ಅಥವ ಶಾಸ್ತ್ರ ಬೇಕೆ ಬೇಕು. ಶಾಸ್ತ್ರಗಳು ರೂಪಗೊಳ್ಳಬೇಕಾದರೆ ಅಲ್ಲಿ ಸಂಶೋಧನೆ ಹಾಗೂ ವಿಮರ್ಶೆಗಳು ನಿರಂತರವಾಗಿ ಅಭಿವ್ಯಕ್ತವಾಗುತ್ತಿರಬೇಕು. ಸಮಾಜ ವಿಜ್ಞಾನಗಳಲ್ಲಿ ಬಹುಮುಖ್ಯ ಹಾಗೂ ಎಲ್ಲ ವಿಷಯಗಳ ತಾಯಿಯೆಂದು ಗುರುತಿಸಲ್ಪಡುವ ಇತಿಹಾಸ ಅಥವಾ ಚರಿತ್ರೆಯ ಜ್ಞಾನಾಲಯವು ಸಹ ನಿರಂತರವಾಗಿ ಹೊಸ ಹೊಸ ಸಂಶೋಧನೆ ಹಾಗೂ ತಾತ್ವಿಕ ಅಭಿಪ್ರಾಯಗಳನ್ನು ಒಳಗೊಳ್ಳುವ ಮೂಲಕ ರೂಪಗೊಂಡು ಬಹುವಿಸ್ತಾರವನ್ನು ಪಡೆದಿದೆ. ಲಕ್ಷಾಂತರ ವರ್ಷಗಳಿಂದ ಜರುಗಿರುವ ಘಟನೆಗಳು ಒಂದಕ್ಕೊಂದು ಕೂಡಿಕೊಳ್ಳುತ್ತಾ ಇತಿಹಾಸದ ವಿಷಯ

ನಿರ್ಮಾಣವಾಗಿದೆ. ಈ ವಿಷಯದಲ್ಲಿ ಅಡಕಗೊಂಡಿರುವ ಅಂಶಗಳನ್ನು ಮೌಲ್ಯಯುತಗೊಳಿಸಲು ಹಾಗೂ ಅದಕ್ಕೊಂದು ತಾತ್ವಿಕ ಚೌಕಟ್ಟು ನಿರ್ಮಿಸುವ ನಿಟ್ಟಿನಲ್ಲಿ ಎರಡು ಸಾವಿರ ವರ್ಷಗಳ ಹಿಂದೆಯೇ ಇದಕ್ಕೆ ಸಂಬಂಧಿಸಿದ ಲೇಖನಾ ಶಾಸ್ತ್ರವು ಹುಟ್ಟಿಕೊಂಡಿದೆ. ಇತಿಹಾಸ ಲೇಖನಾಶಾಸ್ತ್ರಕ್ಕೆ ಪ್ರಾಚೀನವಾದ ಇತಿಹಾಸವಿದೆ.

ಇತಿಹಾಸ ಲೇಖನಶಾಸ್ತ್ರ ತನ್ನ ಬಾಹುಳ್ಯ ಹೆಚ್ಚಿಸಿಕೊಳ್ಳಲು ಬೇರೆ ಬೇರೆ ವಿಷಯಗಳನ್ನು ಸಹ ಬಳಸಿಕೊಂಡಿದೆ. ಭೂಗೋಳಶಾಸ್ತ್ರ, ರಾಜಕೀಯಶಾಸ್ತ್ರ, ಅರ್ಥಶಾಸ್ತ್ರ, ಸಮಾಜಶಾಸ್ತ್ರ, ಧರ್ಮಶಾಸ್ತ್ರ ಹಾಗೂ ನೀತಿ (ತತ್ವ)ಶಾಸ್ತ್ರ ಮುಂತಾದ ವಿಷಯಗಳ ನೆರವನ್ನು ಪಡೆದುಕೊಂಡು ತನ್ನನ್ನು ಹಿಗ್ಗಿಸಿಕೊಂಡಿದೆ.[೧] ಅಲ್ಲದೇ ಸಾಹಿತ್ಯ-ಸಂಸ್ಕೃತಿಗಳಿಗೆ ಸಂಬಂಧಿಸಿದ ಕಾವ್ಯ, ಕಥನ ಹಾಗೂ ಭಾಷಾಶಾಸ್ತ್ರಗಳ ನೆರವನ್ನು ಕಾಲಕಾಲಕ್ಕೆ ಪಡೆಯುತ್ತಾ ಬೆಳೆದು ಬಂದಿದೆ. ಇತಿಹಾಸ ಲೇಖನಶಾಸ್ತ್ರವು ತನ್ನನ್ನು ರೂಪಿಸಿಕೊಳ್ಳುವಲ್ಲಿ ಸಾಮಾನ್ಯ ವಿಜ್ಞಾನ ವಿಷಯಗಳ ಸಹಾಯವನ್ನು ಸಹ ಪಡೆದಿದೆ. ಒಟ್ಟಿನಲ್ಲಿ ಪ್ರಾಜ್ಞಾರು ಬೇರೆ ಬೇರೆ ಜ್ಞಾನಶಿಸ್ತುಗಳ ಮೂಲಕ ಮೂಡಿಸಿದ ವಿಚಾರ-ವಿಮರ್ಶೆಗಳನ್ನು ತನಗೆ ಅನುವುಮಾಡಿಕೊಂಡು ಇತಿಹಾಸ ಲೇಖನಾಶಾಸ್ತ್ರ ಬೆಳೆದು ಬಂದಿದೆ.

ಇತಿಹಾಸ ಲೇಖನಾಶಾಸ್ತ್ರವು ಬೇರೆ ಬೇರೆ ಕ್ಷೇತ್ರಗಳನ್ನಲ್ಲದೇ ತನ್ನಲ್ಲಿಯೇ ಇರುವ ಭಿನ್ನ ಅಂಶಗಳನ್ನು ಸಹ ಬಳಸಿಕೊಂಡು ರೂಪಗೊಂಡಿದೆ. ಇದರಲ್ಲಿ ಪುರಾತತ್ವ ಆಕರಗಳು ಪ್ರಧಾನವಾದ ಪಾತ್ರ ನಿರ್ವಹಿಸಿವೆ. ಆದರೆ ಇತಿಹಾಸ ಅಥವಾ ಚರಿತ್ರೆಯ ಲೇಖನಶಾಸ್ತ್ರವು ಪುರಾತತ್ವ ಆಕರಗಳನ್ನು ಪೂರಕವಾದ ಸ್ಥಾನದಲ್ಲಿ ನಿಲ್ಲಿಸಿದೆ ಹೊರತು ಅವುಗಳನ್ನು ಪ್ರಧಾನ ಭೂಮಿಕೆಯಲ್ಲಿ ಪರಿಗಣಿಸಲೇ ಇಲ್ಲ. ಉದಾ: ಸಾಮಾನ್ಯವಾಗಿ ಇತಿಹಾಸದ ಅಧ್ಯಯನವು ಸಂಘರ್ಷಗಳ ಕಥನಗಳನ್ನು ಮುಖ್ಯವಾಗಿ ಇಟ್ಟುಕೊಂಡು ವಿಸ್ತಾರವನ್ನು ಪಡೆಯುತ್ತಿರುತ್ತದೆ. ಆದರೆ ಪ್ರಮುಖ ಆಕರಗಳಾದ ಶಾಸನ, ದೇವಾಲಯ, ಭೂ ಉತ್ಖನನದಲ್ಲಿ ಸಿಗುವ ಅವಶೇಷಗಳು ಅಲ್ಲದೇ ಭೌತಿಕವಾಗಿ ಕಂಡುಬರುವ ಸ್ಮಾರಕ, ಕೋಟೆ-ಕೊತ್ತಲಗಳು, ಕೆರೆ-ಕಟ್ಟೆ, ಹಾಗೂ ಶಿಲ್ಪಗಳನ್ನು ಶಾಸ್ತ್ರ ರೂಪಗೊಳ್ಳುವ ಪ್ರಕ್ರಿಯೆಯಲ್ಲಿ ಪೂರಕ ಬಳಸಿಕೊಳ್ಳುತ್ತದೆ ವಿನಹ ಪ್ರಧಾನವಾಗಿ ಅಲ್ಲ. ಇದರರ್ಥ ಚರಿತ್ರೆ ಅಧ್ಯಯನಕ್ಕೆ ಕೇವಲ ಪ್ರಾಚೀನ ಕಾಲಗರ್ಭದಲ್ಲಿ ನಡೆದಿರುವ ಯುದ್ಧಗಳೇ ಮುಖ್ಯವಾಗಿ ತೋರುತ್ತಿರುತ್ತವೆ.[೨] ಹೀಗಾಗಿ ಪುರಾತತ್ವದ ಎಲ್ಲ ಆಕರಗಳು ಕೇವಲ ಚರಿತ್ರೆಯ ಲೇಖನಾಶಾಸ್ತ್ರದ ಅಡಿಯಾಳಾಗಿ ಪರಿವರ್ತಿತವಾಗಿವೇ ಹೊರತು ಇಂಥ ಆಕರಗಳಿಗೊಂದು ಸ್ವಾತಂತ್ರತೆ ನಿರ್ಮಾಣವಾಗಿಲ್ಲ. ಆದರೆ ಗತಕಾಲದಲ್ಲಿ ನಡೆದಿರುವ ಯುದ್ಧದ ಘಟನೆಗಳಷ್ಟೆ ಅಲ್ಲದೇ ನಮಗೆ ನಮ್ಮ ಜೊತೆಗಿರುವ ಹಾಗೂ ಭೌತಿಕವಾಗಿ ಕಾಣುವ ಪುರಾತತ್ವ ಆಕರಗಳು ಸಹ ಅವುಗಳಷ್ಟೇ ಮಹತ್ವ ಪಡೆದಿವೆ ಎಂಬುದು ಮುಖ್ಯವಾಗುತ್ತದೆ. ಆದ್ದರಿಂದ ಚರಿತ್ರೆಯ ಜೊತೆಗೆ ಹಾಗೂ ಚರಿತ್ರೆಯ ಲೇಖನಾಶಾಸ್ತ್ರ ಜೊತೆಗೆ ಕರಗಿಹೋಗಿರುವ ಅಥವಾ ಅವ್ಯಕ್ತವಾಗಿರುವ ಪುರಾತತ್ವ ಆಕರಗಳನ್ನು ಇಟ್ಟುಕೊಂಡು ಹಾಗೂ ಈಗಾಗಲೇ

ಪ್ರಕಟಗೊಂಡಿರುವ ಜ್ಞಾನಗಳ ಹಿನ್ನೆಲೆಯಲ್ಲಿ ಪುರಾತತ್ವ ಅಧ್ಯಯನ ಲೇಖನಶಾಸ್ತ್ರ ಕಟ್ಟಿಕೊಳ್ಳುವ ಅವಶ್ಯಕತೆ ಇದೆ. ಸಹಸ್ರಾರು ಸಂಖ್ಯೆಯಲ್ಲಿರುವ ದೇವಾಲಯಗಳು, ಲಕ್ಷಾನು ಸಂಖ್ಯೆಯಲ್ಲಿರುವ ಶಾಸನಗಳು, ನೂರಾರು ಸಂಖ್ಯೆಯಲ್ಲಿರುವ ಕೋಟೆ-ಕೊತ್ತಲ ಹಾಗೂ ಕೆರೆ-ಕಟ್ಟೆಗಳ ಬಗೆಗೆ ಹಲವಾರು ಅಧ್ಯಯನಗಳು ಕಳೆದು ಒಂದು ಶತಮಾನದಿಂದ ನಡೆದುಕೊಂಡು ಬಂದಿವೆ. ಇಂಥ ಪ್ರಮುಖ ಕಾರ್ಯಗಳು ಕರ್ನಾಟಕದಲ್ಲಿಯೂ ಆಗಿವೆ. ಆದರೆ ಅವುಗಳು ಚರಿತ್ರೆ ಅಧ್ಯಯನ ಶಾಸ್ತ್ರದ ಬಂಧಬಾಹುಗಳಲ್ಲಿ ಬಂಧಿಸಲ್ಪಟ್ಟಿವೆ. ಇವುಗಳನ್ನು ಬಿಡಿಸಿಟ್ಟು ಪ್ರತ್ಯೇಕವಾಗಿ ನೋಡುವ ಕಾರ್ಯದ ಜರೂರಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕದ ಪುರಾತತ್ವ ಅಧ್ಯಯನ ಲೇಖನಶಾಸ್ತ್ರ ಬೆಳವಣಿಗೆ ಕುರಿತು ಪ್ರಬಂಧ ರಚಿಸುವ ಉದ್ದೇಶ ಇಟ್ಟುಕೊಳ್ಳಲಾಗಿದೆ.

ಈ ವಿಷಯದ ನಿರೂಪಣೆಗೆ ಸಂಬಂಧಿಸಿದಂತೆ ಮುಖ್ಯ ಆಧಾರಗಳು ಹಾಗೂ ಆಕರಗಳೆಂದರೆ ದೇವಾಲಯಗಳು, ಶಾಸನ, ಶಿಲ್ಪ, ಕೆರೆ-ಕಟ್ಟೆ, ಕೋಟೆ-ಕೊತ್ತಲಗಳು, ಭೂ ಉತ್ಖನನ ಹಾಗೂ ಅನ್ವೇಷಣೆಗಳಲ್ಲಿ ಸಿಕ್ಕಿರುವ ಅವಶೇಷಗಳು ಅಲ್ಲದೇ ಮೇಲೆ ವಿವರಿರುವ ವಿಷಯಗಳಿಗೆ ಸಂಬಂಧಿಸಿದಂತೆ ಪ್ರಕಟವಾಗಿರುವ ವರದಿ ಹಾಗೂ ಹೊತ್ತಿಗೆಗಳು ಆಧುನಿಕವಾಗಿ ಕರ್ನಾಟಕದಲ್ಲಿ ಚರಿತ್ರೆಯ ಅಧ್ಯಯನಗಳು ೧೮ನೇ ಶತಮಾನದಲ್ಲಿ ಪ್ರಾರಂಭವಾದರೂ ಅವು ಗಟ್ಟಿಗೊಂಡಿದ್ದು ೧೯ನೇ ಶತಮಾನದಲ್ಲಿಯೆ. ಪುರಾತತ್ವ ಅಧ್ಯಯನಗಳು ೨೦ನೇ ಶತಮಾನದ ಪ್ರಾರಂಭದಲ್ಲಿ ಹರಳಗಟ್ಟಿಕೊಂಡವು. ಇಂಥ ಅಧ್ಯಯನಗಳಿಂದ ಪ್ರಕಟಗೊಂಡ ಪುರಾತತ್ವ ಆಕರಗಳು ಚರಿತ್ರೆಯ ನೆರಳಿನಲ್ಲಿರುವುದರಿಂದ ಅವುಗಳ ಒಂದು ಪಾರ್ಶ್ವಭಾಗ ಮಾತ್ರ ನಮಗೆ ಕಂಡುಬಂದಿದೆ.[೩] ಆದ್ದರಿಂದ ಅವುಗಳನ್ನು ಪ್ರತ್ಯೇಕವಾಗಿ ತಂದು ವಿವರವಾಗಿ ಅಧ್ಯಯನ ಮಾಡುವ ಅವಶ್ಯಕತೆ ಮುಖ್ಯವಾಗಿದೆ.

ಕರ್ನಾಟಕದಲ್ಲಿ ಪ್ರಾಚೀನ ಪುರಾತತ್ವ ಅಧ್ಯಯನಗಳು ರಾಬರ್ಟ್ ಬ್ರೂಸ್‌ಫೂಟ್‌ರಿಂದ ಪ್ರಾರಂಭವಾದರೆ ಶಾಸನಗಳಿಗೆ ಸಂಬಂಧಿಸಿದ ಅಧ್ಯಯನಗಳು ಕರ್ನಲ್ ಮೆಕೆಂಜಿ, ಬಿ.ಎಲ್.ರೈಸ್ ಹಾಗೂ ಜಾನ್‌ಫ್ಲೀಟ್‌ರಂಥ ವಿದೇಶಿ ವಿದ್ವಾಂಸರಿಂದ ಪ್ರಾರಂಭವಾದವು. ಕರ್ನಾಟಕದಲ್ಲಿ ದೇವಾಲಯಗಳಿಗೆ ಸಂಬಂಧಿಸಿದಂತೆ ಹೊಸ ಬಗೆಯ ಅಧ್ಯಯನಗಳು ಹೆನ್ರಿಕಜೆನ್ಸಿ ಹಾಗೂ ಬರ್ಗೆಸ್ಸ್ ಎಂಬ ವಿದ್ವಾಂಸರಿಂದ ಹುಟ್ಟಿಕೊಂಡವು. ನಂತರ ದಿನಗಳಲ್ಲಿ ಆರ್.ನರಸಿಂಹಚಾರ್ಯ, ಎಂ.ಹೆಚ್.ಕೃಷ್ಣ ಹಾಗೂ ಮಾರ್ಟಿಮಾರ್ ವೀಲ್ಹರ್ ಮುಂತಾದ ವಿದ್ವಾಂಸರಿಂದ ಶಾಸನ ಹಾಗೂ ದೇವಾಲಯಗಳಿಗೆ ಸಂಬಂಧಿಸಿದಂತೆ ಅಧ್ಯಯನಗಳು ತೀವ್ರತೆಯನ್ನು ಪಡೆದ ಮೇಲೆ ಪುರಾತತ್ವ ಅಧ್ಯಯನ ವಿಸ್ತಾರ ಹಾಗೂ ಮಹತ್ವವನ್ನು ಪಡೆಯಿತು. ಆಧುನಿಕ ಕಾಲಘಟ್ಟದಲ್ಲಿಯೇ ಉಲ್ಲೇಖಿಸಿದ ಪುರಾತತ್ವ ಅಧ್ಯಯನ ವಿಧಾನಗಳು (ಶಾಸ್ತ್ರ) ವ್ಯವಸ್ಥಿತ ಚೌಕಟ್ಟಿನೊಳಗೆ ಆಮೇಲೆ ಆರಂಭವಾದವು.[೪] ಅಲ್ಲದೇ ಈ ಮೊದಲು ಸಾಂಪ್ರದಾಯಿಕ ಚೌಕಟ್ಟುಗಳ ಉದ್ದೇಶವನ್ನಿಟ್ಟುಕೊಂಡ ಹಲವು ಶಾಸ್ತ್ರ ಗ್ರಂಥಗಳು, ದೇವಾಲಯ ಹಾಗೂ ಇನ್ನಿತರ ವಿಷಯಗಳ ಕುರಿತು ಬಹು ವಿಸ್ತಾರವಾದ ಮಾಹಿತಿ ನೀಡಿವೆ. ಆದರೆ

ಈ ಹೊತ್ತಿಗೆಗಳು ಸಾಮಾನ್ಯ ಜನರ ತಿಳುವಳಿಕೆಯ ಮಟ್ಟವನ್ನು ಕಡೆಗಣಿಸಿ ಕೇವಲ ಪಂಡಿತರ ವಲಯವನ್ನು ಇಟ್ಟುಕೊಂಡು ಪ್ರಕಟಗೊಂಡವು. ಹೀಗಾಗಿ ಅವುಗಳು ಎಲ್ಲಕಾಲಕ್ಕೂ ಉಳಿದುಕೊಂಡು ಎಲ್ಲರ ಮನೋಭಾವನೆಗಳಿಗೆ ಪಾತ್ರವಾಗಲಿಲ್ಲ. ಇಂಥ ಅಧ್ಯಯನಗಳ ಬೆಳವಣಿಗೆಗಳಲ್ಲಿ ಇಂಥ ಮೂಲಭೂತ ಕೊರತೆಗಳನ್ನು ಹೋಗಲಾಡಿಸಲು ಮೊಟ್ಟಮೊದಲಿಗೆ ಪ್ರಯತ್ನಿಸಿದವರೆಂದರೆ ಐರೋಪ್ಯದ ವಿದ್ವಾಂಸರೆ. ಈ ಚರ್ಚೆಯ ವಿಷಯ ಕರ್ನಾಟಕ ಹಾಗೂ ಭಾರತಕ್ಕೂ ಅನ್ವಯಿಸುತ್ತದೆ. ದೇವಾಲಯಗಳ ಕುರಿತ ಕಠಿಣವಾದ ಹಾಗೂ ಮಿತಿಮೀರಿದ ನಿರ್ಬಂಧಗಳನ್ನು ಅಳವಡಿಸಿಕೊಂಡು ರಚನೆಯಾದ ಇಂಥ ಶಾಸ್ತ್ರಧ್ಯಯನಗಳು ಸಮಾಜದ ಎಲ್ಲ ವರ್ಗಗಳನ್ನು ತಲುಪಲಾಗಲಿಲ್ಲ. ಇಂಥ ಸ್ಥಗಿತಗೊಂಡ ಕ್ರಮಗಳನ್ನು ಕೈಬಿಟ್ಟು ಆಧುನಿಕ ಕಾಲದಲ್ಲಿ ಕೆಲವು ಸರಳ, ಕಟ್ಟಳೆಗಳಿಲ್ಲದ ಹಾಗೂ ಎಲ್ಲರಿಗೂ ಅರ್ಥವಾಗುವ ಅಧ್ಯಯನ ವಿಧಾನಗಳನ್ನು ವಿದ್ವಾಂಸರು (ವಿದೇಶಿ-ದೇಶಿ) ಪರಿಚಯಿಸಿದರು. ತಮ್ಮದೇ ಆದ ವಿಧಾನ, ಶೈಲಿ ಹಾಗೂ ಸರಳ ಸಹಜವಾಗಿರುವ ಅಂಶಗಳನ್ನಿಟ್ಟುಕೊಂಡು ಪುಸ್ತಕಗಳನ್ನು ರಚಿಸಿದರು. ಉದಾ: ಹೆನ್ರಿ ಕಜೆನ್ಸ್ ಅವರು ಕರ್ನಾಟಕದಲ್ಲಿರುವ ದೇವಾಲಯಗಳನ್ನು ಕುರಿತು ಮೊಟ್ಟಮೊದಲು ಅತ್ಯಂತ ಸರಳವಾಗಿ ಹಾಗೂ ನಿರ್ಬಂಧವಿಲ್ಲದ ಚೌಕಟ್ಟಿನಲ್ಲಿ ಹೊತ್ತಿಗೆಗಳನ್ನು ಪ್ರಕಟಿಸಿದರು. ಇದೇ ರೀತಿ ಪ್ರಾಚೀನ ಶಾಸನಗಳನ್ನು ಭಾಷೆ ಹಾಗೂ ಅರ್ಥದ ದೃಷ್ಟಿಯಿಂದ ಹೊಸ ಬಗೆಯಲ್ಲಿ ಅರ್ಥೈಸಿಕೊಂಡು ಸರಳ ವಿವರಗಳುಳ್ಳ ಹಾಗೂ ಸಂಬಂಧಿಸಿದ ವಿಷಯ ಅಧ್ಯಯನಕಾರರಿಗೆ ಮುಟ್ಟುವ ಗ್ರಂಥಗಳನ್ನು ನಿರ್ಮಿಸಲಾಯಿತು.[೫]

ಪುರಾತತ್ವ ಆಕರ ಸಾಮಗ್ರಿಗಳ ಕುರಿತಂತೆ ಪ್ರಕಟಗೊಂಡ ಇಂಥ ಗ್ರಂಥಗಳು ಕರ್ನಾಟಕದಲ್ಲಿ ಪುರಾತತ್ವ ಅಧ್ಯಯನದ ಕುರಿತಿರುವ ಲೇಖನಶಾಸ್ತ್ರ ಮೊಟ್ಟಮೊದಲು ಗಟ್ಟಿ ಬುನಾದಿಯನ್ನು ಒದಗಿಸಿದವು. ೨೦ನೇ ಶತಮಾನದ ಪ್ರಾರಂಭಕಾಲದಿಂದ ತೀವ್ರವಾಗಿ ಪ್ರಾರಂಭವಾದ ಇಂಥ ಕಾರ್ಯಗಳು ಕರ್ನಾಟಕದಲ್ಲಿ ಅಧ್ಯಯನ ವಿಧಾನಗಳನ್ನು ಬದಲಾಯಿಸಿದವು. ಬದಲಾವಣೆಗೆ ಪ್ರೇರಕವಾದ ಅಂಶಗಳನ್ನಿಟ್ಟುಕೊಂಡು ಅವುಗಳು ಹೇಗೆ? ಪುರಾತತ್ವ ಅಧ್ಯಯನವನ್ನು ಬೆಳೆಸಿ ಪ್ರಸ್ತುತಗೊಳಿಸುವಲ್ಲಿ ಪ್ರಯತ್ನಿಸಿದವು ಎಂಬುದನ್ನು ತಿಳಿದುಕೊಳ್ಳುವುದು ಪ್ರಬಂಧದ ಬಹುಮುಖ್ಯ ಅಂಶವಾಗಿದೆ. ಪುರಾತತ್ವದ ಆಕರಗಳನ್ನಿಟ್ಟುಕೊಂಡು ಪ್ರಕಟಗೊಂಡ ಇಂಥ ಅಧ್ಯಯನಗಳು ಈವರೆಗೂ ನಡೆದುಕೊಂಡು ಬರುತ್ತಿವೆ. ಚರಿತ್ರೆ ಅಧ್ಯಯನ ಅಥವ ಲೇಖನಾಶಾಸ್ತ್ರದ ಭಾಗವಾಗಿ ವ್ಯಕ್ತವಾಗುತ್ತಿರುವ ಇಂಥ ಪುರಾತತ್ವ ಆಕರಗಳ ಹಿನ್ನೆಲೆಯಲ್ಲಿ ರಚನೆಯಾದ ಪುರಾತತ್ವ ವಿಷಯದ ಪ್ರಮುಖ ಹೊತ್ತಿಗೆಗಳನ್ನಿಟ್ಟುಕೊಂಡು ಪ್ರಸ್ತುತ ಪುರಾತತ್ವ ಲೇಖನಾಶಾಸ್ತ್ರ ಕುರಿತಿರುವ ವಿಷಯವನ್ನು ನಿರೂಪಿಸುವುದಾಗಿದೆ. ಅಲ್ಲದೇ ಸಾಹಿತ್ಯ ಹಾಗೂ ಸಂಸ್ಕೃತಿಯ ಅಧ್ಯಯನಕಾರರು ಸಹ ಪುರಾತತ್ವ ಆಕರಗಳನ್ನು ಪ್ರಧಾನವಾಗಿ ದುಡಿಸಿಕೊಂಡು ಸಂಶೋಧನೆ ಹಾಗೂ ವಿಧಾನಗಳನ್ನು ರೂಪಿಸಿದ್ದಾರೆ. ಉದಾ: ಎಂ.ಚಿದಾನಂದಮೂರ್ತಿ ಅವರ ಸಂಶೋಧನೆಯಿಂದ ರಚಿತವಾದ "ಶಾಸನಗಳ ಸಾಂಸ್ಕೃತಿಕ ಅಧ್ಯಯನ" ಶೇಷಶಾಸ್ತ್ರಿ ಅವರ "ಕರ್ನಾಟಕದಲ್ಲಿನ ವೀರಗಲ್ಲುಗಳ" ಅಧ್ಯಯನ ಡಿ.ವಿ.ಪರಮಶಿವಮೂರ್ತಿ ಅವರ "ಶಾಸನ ಶಿಲ್ಪಗಳ"

ಕುರಿತಿರುವ ಕೃತಿ ಜಿ.ಎಂ.ನಾಗಯ್ಯ ಅವರಿಂದ ರಚನೆಗೊಂಡಿರುವ ಆರನೆಯ ವಿಕ್ರಮಾದಿತ್ಯನ ಶಾಸನಗಳ ಅಧ್ಯಯನ, ಎಸ್.ಕೆ.ಕೊಪ್ಪ ಅವರ "ತರ್ದವಾಡಿ ಸಾಂಸ್ಕೃತಿಕ ಅಧ್ಯಯನ" ಹಾಗೂ ಕುರುಗೋಡು ಕುರಿತಿರುವ ಅಧ್ಯಯನಗಳು ಪ್ರಧಾನವಾಗಿ ಪುರಾತತ್ವ ಆಕರಗಳಾದ ಶಾಸನಗಳು ಹಾಗೂ ದೇವಾಲಯಗಳನ್ನೇ ಪ್ರಧಾನವಾಗಿ ಇಟ್ಟುಕೊಂಡು ರಚನೆಯಾದಂತವು. ಅಲ್ಲದೇ ಇನ್ನು ಹತ್ತಾರು ಸಂಶೋಧನೆಗಳು ಈ ಹಿನ್ನೆಲೆಯಲ್ಲಿ ರಚನೆಯಾಗಿವೆ. ಅಲ್ಲದೇ ಇನ್ನೂ ಹತ್ತಾರು ಸಂಶೋಧನೆಗಳು ಈ ಹಿನ್ನೆಲೆಯಲ್ಲಿ ರಚನೆಯಾಗಿವೆ. ಆದರೆ ಇಲ್ಲಿ ಮುಖ್ಯವಾದ ಅಂಶವೆಂದರೆ ಇವರೆಲ್ಲರೂ ಸಾಹಿತ್ಯ-ಸಂಸ್ಕೃತಿಯ ಹಿನ್ನೆಲೆಯಲ್ಲಿದ್ದುಕೊಂಡು ಪುರಾತತ್ವ ಆಕರಗಳನ್ನು ದುಡಿಸಿಕೊಂಡವರೂ ಹೊರತು ಇವರಾರು ಪುರಾತತ್ವ ವಿಷಯದ ಅಧ್ಯಯನಕಾರರಲ್ಲಿ ಎಂಬುದು ಬಹುಮುಖ್ಯವಾದ ವಿಷಯ. ಇಂಥ ವಿದ್ವಾಂಸರಿಂದ ರಚನೆಗೊಂಡಿರುವ ಸಂಶೋಧನೆಗಳು ಹಾಗೂ ವಿದ್ವಾಂಸರು ಕರ್ನಾಟಕದ ಅಥವಾ ಕನ್ನಡದ ಸಾಂಸ್ಕೃತಿಕ ಕ್ಷೇತ್ರದ ವಿಸ್ತಾರವನ್ನು ಸೀಮಾತೀತವಾಗಿ ಹಿಗ್ಗಿಸಿದರು.[೬] ಸಾಹಿತ್ಯದ ಹಿನ್ನೆಲೆಯ ಇಂಥ ಸಂಶೋಧಕರು ಯಾವ ರೀತಿಯಲ್ಲಿ ಪುರಾತತ್ವ ಆಕರಗಳನ್ನು ಬಳಸಿಕೊಂಡರು ಹಾಗೂ ಈ ಮೂಲಕ ತಮ್ಮ ವಿಷಯಗಳನ್ನು ಕಟ್ಟಿಕೊಳ್ಳುವಲ್ಲಿ ಯಾವ ವಿಧಾನಗಳನ್ನು ಅನುಸರಿಸಿ ಹೆಸರು ಮಾಡಿದರು ಎಂಬುದನ್ನು ಚರ್ಚಿಸುವುದು ಮುಖ್ಯವಾದ ಸಂಗತಿಯಾಗಿದೆ. ಅಲ್ಲದೇ ಇಂಥ ಸಂಶೋಧನೆಗಳು ಪ್ರಸ್ತುತ ಪುರಾತತ್ವ ಅಧ್ಯಯನ ಲೇಖನಾಶಾಸ್ತ್ರಕ್ಕೆ ಹೇಗೆ ಪೂರಕವಾಗಬಲ್ಲವು ಎಂಬುದನ್ನು ಸಹ ಪರಿಗಣಿಸುವ ಮುಖ್ಯ ಉದ್ದೇಶವನ್ನು ಪ್ರಬಂಧ ರಚನೆಯಲ್ಲಿ ಇಟ್ಟುಕೊಳ್ಳಲಾಗಿದೆ.

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಕ್ಷೇತ್ರಗಳಿಗೆ ಸಂಬಂಧಿಸಿದ ಆಕರ ಶೋಧ ಕಾರ್ಯವು ತೃಪ್ತಿದಾಯಕ ಎನ್ನುವಷ್ಟಿದೆ. ಇಂಥ ಅವಶ್ಯಕವಾದ ಹುಡುಕಾಟಕ್ಕೆ ನೂರೈವತ್ತು ವರ್ಷಗಳ ಇತಿಹಾಸವಿರುವುದಾದರೂ, ಚರಿತ್ರೆ ಕಟ್ಟಿಕೊಡುವ ಎಲ್ಲ ತರಹದ ಮೂಲ ಸಾಮಗ್ರಿಗಳು ನಿರಂತರವಾಗಿ ಈ ಹೊತ್ತಿನವರೆಗೂ ಅನುಚಾನವಾಗಿ ಕಂಡುಬಂದಿವೆ. ಆದರೆ ಅವು ದೊರಕಿದ ಪ್ರಮಾಣ ಅತ್ಯಲ್ಪ. ನಿತ್ಯವೂ ಹೊಸ ಶೋಧಗಳು ಪ್ರಕಟವಾಗುತ್ತಿವೆ. ಹೀಗಾಗಿ ಸಿಗುವ ಸಾಮಗ್ರಿಗಳಿಂದ ಇತಿಹಾಸ ಮತ್ತು ಪುರಾತತ್ವ ಅಧ್ಯಯನಗಳನ್ನು ಪುನಾರೂಪಿಸುವ, ವ್ಯಾಖ್ಯಾನಿಸುವ ಹಾಗೂ ಅರ್ಥೈಸುವ ಮಹತ್ವದ ಕಾರ್ಯಗಳೂ ಮುಂದುವರೆದುಕೊಂಡು ಬಂದಿರುವುದು ವಿಚಾರಾರ್ಹವಾದ ಸಂಗತಿ.

ಪುರಾತತ್ವ ನೆಲೆಗಳ ಅಧ್ಯಯನ

ಕರ್ನಾಟಕದಲ್ಲಿ ಮೊಟ್ಟಮೊದಲಿಗೆ ಪುರಾತತ್ವ ಕ್ಷೇತ್ರದ ಅಧ್ಯಯನವನ್ನು ಪ್ರಾರಂಭಿಸಿದವರು ರಾಬರ್ಟ್ ಬ್ರೂಸ್‌ಫೂಟ್ ಅವರು. ಇವರನ್ನು ಭಾರತದ ಪೂರ್ವ ಇತಿಹಾಸದ (Pre-History) ಪಿತಾಮಹನೆಂದು ಕರೆಯುತ್ತಾರೆ[೭]. ಅವರು ಮೂಲತಃ ಭೂಗರ್ಭ ಶಾಸ್ತ್ರಜ್ಞರು. ಕರ್ನಾಟಕದ ಭೂಗರ್ಭ ಇಲಾಖೆಯನ್ನು ಮೊದಲಿಗೆ ಸ್ಥಾಪಿಸಿದ ಕೀರ್ತಿಯೂ ಇವರಿಗೆ ಸಲ್ಲುತ್ತದೆ. ತಮ್ಮ ಶ್ರಮ ಹಾಗೂ ಅಧ್ಯಯನ ಪ್ರೀತಿಯಿಂದ ಇಡೀ ದಕ್ಷಿಣ ಭಾರತವನ್ನು ಕುದುರೆ ಹಾಗೂ ಕಾಲ್ನಡಿಗೆಯಲ್ಲಿ ಕ್ಷೇತ್ರಾಧ್ಯಯನ ಮಾಡಿ ವಿವರಗಳನ್ನು

ಗುರುತಿಸಿದ, ಸಂಗ್ರಹಿಸಿದ ಮಹಾಪುರುಷರಿವರು. ಭೂಗರ್ಭಶಾಸ್ತ್ರದ ಹಿನ್ನೆಲೆಯಲ್ಲಿ ಕರ್ನಾಟಕದ ಭೌಗೋಳಿಕ ಲಕ್ಷಣಗಳನ್ನು ತಿಳಿಯಪಡಿಸಿದರು. ಅಷ್ಟೇ ಅಲ್ಲದೇ ಪ್ರಾಚೀನ ನಾಗರಿಕತೆ ನೆಲೆಗಳ ಬಗೆಗೆ ಶೋಧನೆ ಮಾಡಿದರು. ಅವರು ಮಲಪ್ರಭಾ ನದಿ ದಂಡೆಯ ಮೇಲೆ ಕೆಲವು ಶಿಲಾಯುಧಗಳನ್ನು ಪತ್ತೆ ಹಚ್ಚಿದರು. ಇವು ಸುಮಾರು ಐದಾರು ಲಕ್ಷ ವರ್ಷಗಳ ಹಿಂದೆ ಮಾನವನು ತನ್ನ ರಕ್ಷಣೆ ಹಾಗೂ ಆಹಾರಕ್ಕಾಗಿ ಬಳಸಿ ಬಿಟ್ಟುಹೋದ ಶಿಲಾಯುಧಗಳಾಗಿದ್ದವು. ಈ ಸಲಕರಣೆಗಳು ಆದಿ ಶಿಲಾಯುಗಕ್ಕೆ ಸಂಬಂಧಿಸಿದವುಗಳೆಂದು ತಿಳಿಸಿ ಹೇಳಿದರು. ಇದೇ ನದಿಯ ಪರಿಸರವನ್ನು ವಿಶೇಷವಾಗಿ ಅಧ್ಯಯನ ಮಾಡಿದ ಹಲವು ವಿದ್ವಾಂಸರು ಇದರ ಕಾಲಮಾನವನ್ನು ತಮ್ಮ ಅಧ್ಯಯನಗಳ ಫಲಿತಗಳಿಂದ ಇನ್ನು ಹಿಂದಕ್ಕೆ ಒಯ್ದಿದ್ದಾರೆ.

೧೯ನೇ ಶತಮಾನದ ಮಧ್ಯಭಾಗದಲ್ಲಿ ಪುರಾತತ್ವ ಶೋಧಗಳು ಪ್ರಾರಂಭವಾಗಿ ಈವರೆಗೂ ಅವ್ಯಾಹತವಾಗಿ ನಡೆದುಕೊಂಡು ಬಂದಿವೆ. ರಾಬರ್ಟ್ ಬ್ರೂಸ್‌ಫೂಟ್‌ರಷ್ಟೇ ಶ್ಲಾಘನೀಯ ಕಾರ್ಯ ಮಾಡಿದ ಮತ್ತೊಬ್ಬ ಮಹನೀಯನೆಂದರೆ, ಕರ್ನಲ್ ಮೆಡೋಸ್ ಟೇಲರ್, ಸುರಪುರ ಸಂಸ್ಥಾನದಲ್ಲಿ ಬ್ರಿಟಿಷ್ ಆಡಳಿತದ ಉಸ್ತುವಾರಿ ನೋಡಿಕೊಂಡಿದ್ದ ಅವರು ಪ್ರಾಚೀನ ನಾಗರಿಕತೆಗಳ ಮೇಲಿನ ಅಧ್ಯಯನ ಪ್ರೀತಿಯಿಂದ ಪೂರ್ವ ಇತಿಹಾಸ ಹಾಗೂ ಇತಿಹಾಸ ಕಾಲದಲ್ಲಿ ವಿಸ್ತರಿಸಿಕೊಂಡಿದ್ದ ಬೃಹತ್ ಶಿಲಾಯುಗ ಸಂಸ್ಕೃತಿಯ ಬಗೆಗೆ ವಿಶೇಷ ಗಮನಹರಿಸಿದರು. ಸುರಪುರ ಸಮೀಪದ ರಾಜನಕೊಳ್ಳೂರು ಎಂಬ ಗ್ರಾಮದ ಸೀಮೆಯಲ್ಲಿ ನೂರಾರು ಸಂಖ್ಯೆಯಲ್ಲಿ ನಿರ್ಮಾಣಗೊಂಡಿರುವ ಕಲ್ಲುಚಪ್ಪಡಿಯ ಸಣ್ಣ ಮನೆಗಳು ಆ ಕಾಲದ ಸಂಸ್ಕೃತಿಯ ಪ್ರತೀಕವಾಗಿದ್ದವು. ಸತ್ತ ವ್ಯಕ್ತಿಯನ್ನು ವಿವಿಧ ನಮೂನೆಯ ಗುಂಡಿಯಲ್ಲಿ ಹೂಳಿ ಅದರ ಮೇಲೆ ವೃತ್ತಾಕಾರದ, ಚೌಕಾಕಾರದ ಹಾಗೂ ಆಯತಾಕಾರದ ಕಲ್ಲಿನ ಸಣ್ಣ ರಚನೆಗಳನ್ನು ನಿರ್ಮಾಣ ಮಾಡುತ್ತಿದ್ದುದು ಕಂಡುಬರುತ್ತದೆ.[೮] ಇವು ಕ್ರಿ.ಪೂ. ೮೦೦ ರಿಂದ ಕ್ರಿ.ಶ. ೩೦೦ರ ವರೆಗೆ ಬದುಕಿ ಬಾಳಿದ ಜನ ಸಂಸ್ಕೃತಿಯ ಕುರುಹುಗಳಾಗಿ ಇತಿಹಾಸದಲ್ಲಿ ದಾಖಲಾಗಿವೆ. ಇಂಥ ರಚನೆಗಳು ಕರ್ನಾಟಕ ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಹರಡಿಕೊಂಡಿವೆ. ಸ್ಥಳೀಯವಾಗಿ ಬೇರೆ ಬೇರೆ ಹೆಸರುಗಳಿಂದ ಅವುಗಳನ್ನು ಕರೆಯುತ್ತಾರೆ.

ಈ ವಿದ್ವಾಂಸರಿಬ್ಬರು ಕರ್ನಾಟಕದ ಪ್ರಾಚೀನ ನೆಲೆಗಳನ್ನು ಶೋಧಿಸುವ ಮೂಲಕ ಚರಿತ್ರೆ ರಚನೆಗೆ ಅಗತ್ಯವಾದ ಆಕರಗಳನ್ನು ಕಟ್ಟಿಕೊಟ್ಟರು. ಆದರೆ ಈ ಅಧ್ಯಯನಗಳು ಮಾಹಿತಿ ನೀಡುವ ಮಟ್ಟಕ್ಕೆ ಮಾತ್ರ ಸೀಮಿತವಾಗಿದ್ದವು. ಭೂಮಿಯಲ್ಲಿ ಹುದುಗಿಕೊಂಡ ಅಮೂಲ್ಯ ಆಕಾರಗಳನ್ನು ಹೊರತೆಗೆಯುವ (ಉತ್ಖನನ) ಮೂಲಕ ಹೊಸದೊಂದು ಅಧ್ಯಯನ ಕ್ರಮವನ್ನು ಪ್ರಾರಂಭಿಸಿದರು, ನಮ್ಮವರೇ ಆದ ಎಂ.ಹೆಚ್.ಕೃಷ್ಣ. ಈ ಬಗೆಯ ಕಾರ್ಯಗಳನ್ನು ಕರ್ನಾಟಕದಲ್ಲಿ ಮೂರು ದಶಕಗಳ ಕಾಲ ನಿರ್ವಹಿಸಿ ಮುಂದುವರೆಸಿದರು. ಅವರು ಲಂಡನ್ ವಿಶ್ವವಿದ್ಯಾಲಯದಲ್ಲಿ ತಮ್ಮ ಅತ್ಯುನ್ನತ ಪದವಿ ಪೂರೈಸಿ, ಮೈಸೂರಿನ ಅರಸರ ಕರೆಗೆ ಓಗೊಟ್ಟು ಪುರಾತತ್ವ ಇಲಾಖೆಗೆ ಸೇರಿಕೊಂಡವರು.[೯] ನಾಣ್ಯಶಾಸ್ತ್ರ, ದೇವಾಲಯ, ಚರಿತ್ರೆ ಹೀಗೆ ಹತ್ತು ಹಲವಾರು ಕ್ಷೇತ್ರಗಳಲ್ಲಿ ಅಧ್ಯಯನ ಮಾಡಿದ ಅವರು ಪುರಾತತ್ವ ಶೋಧ ಹಾಗೂ

ಪ್ರಾಚೀನ ನೆಲೆಗಳ ಉತ್ಖನನಕ್ಕೆ ಒತ್ತು ಕೊಟ್ಟರು. ನಾಡಿನ ಇತಿಹಾಸ ಕ್ಷೇತ್ರದಲ್ಲಿ ತನ್ನದೇ ಮಹತ್ವ ಪಡೆದುಕೊಂಡಿರುವ ಬ್ರಹ್ಮಗಿರಿ (ಪ್ರಾಚೀನ ಇಸಿಲಾ ಪಟ್ಟಣ?) ನೆಲೆಯನ್ನು ಮೊಟ್ಟಮೊದಲು ಉತ್ಖನನ ಮಾಡಿದವರು. ಇದರ ಫಲವಾಗಿ ಪ್ರಾಚೀನ ಸಂಸ್ಕೃತಿಯ ಜೋಡಣೆಯ ಹಂದರ(ಸ್ಥರ)ಗಳನ್ನು ವಿಶದವಾಗಿ ಪ್ರಕಟಿಸಿದರು. ಸೀಮಿತ ಸೌಲಭ್ಯಗಳಲ್ಲಿಯೇ ಅತ್ಯಾದ್ಭುತ ಕಾರ್ಯನಿರ್ವಹಿಸಿದ ಡಾ.ಎಂ.ಹೆಚ್.ಕೃಷ್ಣ ಪುರಾತತ್ವ ಅಧ್ಯಯನ ಕ್ಷೇತ್ರದಲ್ಲಿ ತಮ್ಮ ಛಾಪನ್ನು ಮೂಡಿಸಿದ್ದಾರೆ.

ಜಾಗತಿಕ ಮಟ್ಟದಲ್ಲಿ ಪುರಾತತ್ವ ತಜ್ಞರಾಗಿ ಗುರುತಿಸಿಕೊಂಡಿರುವರು ಸರ್ ಮಾರ್ಟಿಮರ್ ವೀಲರ್ ಅವರು. ಕರ್ನಾಟಕದ ಪುರಾತತ್ವ ಅಧ್ಯಯನಕ್ಕೆ ಹೊಸ ಬಗೆಯ ನೋಟವನ್ನು ಕಲ್ಪಿಸಿದವರು. ಇವರು ಕರ್ನಾಟಕವಲ್ಲದೇ ಆಫ್ರಿಕಾ, ಏಷ್ಯಾ ಹಾಗೂ ಉತ್ತರ ಭಾರತದ ಹಲವಾರು ಪ್ರಾಚೀನ ಸಂಸ್ಕೃತಿಯ ಪುರಾತತ್ವ ನೆಲೆಗಳನ್ನು ಶೋಧಿಸಿದ ಕೀರ್ತಿಗೆ ಪಾತ್ರರಾಗಿದ್ದಾರೆ. ಇವರು ದಕ್ಷಿಣ ಭಾರತದ ಇತಿಹಾಸವನ್ನು ಕಟ್ಟಿಕೊಡುವಲ್ಲಿ ಪ್ರಮುಖ ಪುರಾತತ್ವ ನೆಲೆಗಳಲ್ಲೊಂದಾದ ಬ್ರಹ್ಮಗಿರಿಯ ಮರು ಉತ್ಖನನವನ್ನು ಜಾಗರೂಕತೆಯಿಂದ ಮಾಡಿದರು. ಇದು ಕರ್ನಾಟಕದಲ್ಲಿ ಮೊಟ್ಟಮೊದಲಿಗೆ ವೈಜ್ಞಾನಿಕ ದೃಷ್ಟಿಕೋನದಿಂದ ಉತ್ಖನನವಾದ ಪ್ರಾಚೀನ ಸಂಸ್ಕೃತಿಯ ನೆಲೆ. ಬೃಹತ್ ಶಿಲಾಯುಗಕ್ಕಿಂತ ಮೊದಲು ಇದೇ ನೆಲೆಯು ನವಶಿಲಾಯುಗ ಸಂಸ್ಕೃತಿಯ ಜನ ಜೀವನದ ಭಾಗವೂ ಆಗಿತ್ತು ಎಂದು ಅಭಿಪ್ರಾಯಪಟ್ಟು ಪೂರಕವಾದ ಕುರುಹುಗಳನ್ನು ಕಂಡುಹಿಡಿದಿದ್ದಾರೆ. (ಇತ್ತೀಚೆಗೆ ಇವರ ಶೋಧನೆಯ ಫಲಿತಗಳ ಬಗೆಗೆ ವಿದ್ವಾಂಸರಾದ ಪ್ರೊ.ಅ.ಸುಂದರ ಅವರು ಆಧಾರ ಸಹಿತ ಕೆಲವು ಪ್ರಶ್ನೆಗಳನ್ನು ಎತ್ತಿದ್ದಾರೆ).

ಕರ್ನಾಟಕದ ಪುರಾತತ್ವ ಅಧ್ಯಯನವನ್ನು ಪ್ರಾರಂಭಿಸಿ ಪ್ರಚುರ ಪಡಿಸಿದ ಡಾ.ಎಂ.ಹೆಚ್.ಕೃಷ್ಣ ಹಾಗೂ ಸರ್ ಮಾರ್ಟಿಮರ್ ವೀಲರ್ ಅವರಂತೆ ಇತರ ವಿದ್ವಾಂಸರು ಅದನ್ನು ಮುಂದುವರೆಸಿಕೊಂಡು ಅಧ್ಯಯನ ವಿಸ್ತರಿಸಿದ್ದಾರೆ. ಬಿ.ಶೇಷಾದ್ರಿ, ಬಿ.ಸುಬ್ಬರಾವ್, ಅ.ಸುಂದರ, ಬಿ.ಕೆ.ಗುರುರಾಜರಾವ್, ಸುಬ್ಬಯ್ಯ, ರವಿ ಕೋರಿಶೆಟ್ಟರ್, ರಾಜಾರಾಮ ಹೆಗಡೆ, ಎಂ.ಎಸ್.ಕೃಷ್ಣಮೂರ್ತಿ ಹಾಗೂ ಎನ್.ಎಸ್.ರಂಗರಾಜು ಮುಂತಾದ ವಿದ್ವಾಂಸರು ಕರ್ನಾಟಕದ ಪೂರ್ವ ಇತಿಹಾಸ(ಪುರಾತತ್ವ)ದ ಬೇರೆ ಬೇರೆ ಮಾದರಿಯ ಮಹತ್ವದ ನೆಲೆಗಳನ್ನು ಶೋಧಿಸುವ, ವಿಮರ್ಶಿಸುವ ಕಾರ್ಯವನ್ನು ಮಾಡುತ್ತಿದ್ದಾರೆ.

ದೇವಾಲಯಗಳ ಅಧ್ಯಯನ

ಕರ್ನಾಟಕದ ಪೂರ್ವ ಇತಿಹಾಸವನ್ನು ಕಟ್ಟುವಲ್ಲಿ ಪ್ರಾಚೀನ ನೆಲೆಗಳು ಎಷ್ಟು ಮುಖ್ಯವೋ, ಕರ್ನಾಟಕದ ಇತಿಹಾಸ ರಚನೆಗೆ ದೇವಾಲಯ ಹಾಗೂ ಶಿಲ್ಪಗಳೂ ಅಷ್ಟೇ ಮುಖ್ಯವಾಗಿವೆ. ಕರ್ನಾಟಕದಲ್ಲಿ ದೇವಾಲಯಗಳು ಹಾಗೂ ಅದರ ತತ್ಸಂಬಂಧಿ ಶಿಲ್ಪಗಳ ಅಧ್ಯಯನವನ್ನು ವಾಡಿಕೆಯಂತೆ ವಿದೇಶಿ ವಿದ್ವಾಂಸರೇ ಪ್ರಾರಂಭಿಸಿದರು. ಅವರಲ್ಲಿ ಮುಖ್ಯವಾಗಿ ಪರಿಗಣಿಸಲ್ಪಡುವ ಮೇಧಾವಿ ಎಂದರೆ ಹೆನ್ರಿ ಕಸೆನ್ಸ್. ಅವರು ದೇಶದ ನಾನಾ ಪ್ರದೇಶಗಳ, ಬೇರೆ ಬೇರೆ ಕಾಲದ ಹಲವಾರು ರಾಜಮನೆತನಗಳ ಕಾಲಾವಧಿಯಲ್ಲಿ ನಿರ್ಮಾಣವಾದ ದೇವಾಲಯಗಳನ್ನು ಅಧ್ಯಯನ ಮಾಡಿ ಪ್ರಕಟಿಸಿದರು.[೧೦] ಕರ್ನಾಟಕದಲ್ಲಿ

ಬಾದಾಮಿ ಚಲುಕ್ಯರ ಹಾಗೂ ಕಲ್ಯಾಣದ ಚಾಲುಕ್ಯರ ಕಾಲದಲ್ಲಿ ನಿರ್ಮಾಣವಾದ ಕಲಾಪರಂಪರೆಯನ್ನು ಹೊಂದಿರುವ ದೇವಾಲಯಗಳನ್ನು ವ್ಯವಸ್ಥಿತವಾಗಿ ದಾಖಲಿಸಿದರು. ಶಿಲ್ಪಗ್ರಂಥ ಆಧಾರಿತ ನಮ್ಮ ಕಲಾಪರಂಪರೆಯ ಅಧ್ಯಯನವನ್ನು ಕೈಬಿಟ್ಟು ಸರಳವಾಗಿ ಹಾಗೂ ಹೆಚ್ಚಿನವರೆಗೆ ದೇವಾಲಯಗಳ ಅಂಗರಚನೆ ಹಾಗೂ ನಿರ್ಮಾಣಗಳ ವಿಚಾರ ತಲುಪಲಿ ಎಂಬ ಮನೋಭಾವನೆಯಿಂದ ಹಲವು ಪುಸ್ತಕಗಳನ್ನು ಪ್ರಕಟಿಸಿದರು. ಅವುಗಳಲ್ಲಿ ಪರಿಗಣಿಸಲೇಬೇಕಾದ ಗ್ರಂಥವೆಂದರೆ "ಚಾಲುಕ್ಯನ್ ಆರ್ಕಿಟೆಕ್ಚರ್ ಆಫ್ ಕೆನರಿಸ್ ಡಿಸ್ಟ್ರಿಕ್ಟ್ಸ್". ತುಂಗಭದ್ರಾ ಹಾಗೂ ಮಲಪ್ರಭಾ ನದಿ ಪರಿಸರದಲ್ಲಿ ಬದಾಮಿ ಚಲುಕ್ಯ ಹಾಗೂ ಕಲ್ಯಾಣದ ಚಾಲುಕ್ಯರ ಕಾಲದಲ್ಲಿ ನಿರ್ಮಾಣವಾದ ಎಲ್ಲ ಪ್ರಮುಖ ದೇವಾಲಯಗಳ ವಿವರಣೆ, ಜಟಿಲವಾದ ತಲನಕ್ಷೆ, ವೈಶಿಷ್ಟ್ಯತೆಯಿಂದ ಕೂಡಿದ ಕಂಬ, ಮೋಹಕವಾದ ಬಿಡಿಶಿಲ್ಪ ಹಾಗೂ ಸಮಗ್ರ ಚಿತ್ರವಿರುವ ವಿವರಗಳನ್ನು ಈ ಗ್ರಂಥದಲ್ಲಿ ಪ್ರಕಟಿಸಲಾಗಿದೆ. ಕಲಾ ಇತಿಹಾಸ ಪರಂಪರೆಯನ್ನು ಸಾದರಪಡಿಸುವ ಈ ಮುಖ್ಯ ಗ್ರಂಥವು ಬದಾಮಿ ಚಲುಕ್ಯ ಹಾಗೂ ಕಲ್ಯಾಣದ ಚಾಲುಕ್ಯರ ಬಗೆಗೆ ಮಾತ್ರ ಸೀಮಿತಗೊಂಡಿದೆ.[೧೧] ಇದೇ ಮಾದರಿಗಳನ್ನಿಟ್ಟುಕೊಂಡು ಅಥವಾ ಅಲ್ಪಸ್ವಲ್ಪ ಬದಲಾವಣೆಗಳೊಂದಿಗೆ ಎಂ.ಹೆಚ್.ಕೃಷ್ಣ ಹಾಗೂ ಕೆ.ಶ್ರೀಕಂಠಶಾಸ್ತ್ರಿ ಅವರು ಮೈಸೂರು ನಾಡಿನಲ್ಲಿರುವ ದೇವಾಲಯಗಳ ಕುರಿತು ಕಿರುಹೊತ್ತಿಗೆಯನ್ನು ನಂತರದ ಕಾಲದಲ್ಲಿ ಬರೆದರು. ಅವರು ಸಹ ಪ್ರಮುಖವಾಗಿ ಹೊಯ್ಸಳ ಹಾಗೂ ಚೋಳರ ಕಾಲದ ನಿರ್ಮಿತಿಗಳನ್ನು ಮಾತ್ರ ಗಮನಿಸಿದ್ದಾರೆ.

ಕಲಾ ಇತಿಹಾಸಕಾರ ಹೆನ್ರಿ ಕಸೆನ್ಸ್ ನಂತರ ಬದಾಮಿ ಚಲುಕ್ಯರ ದೇವಾಲಯಗಳ ಬಗ್ಗೆ ಹೆಚ್ಚಿನ ಅಧ್ಯಯನ ಕೈಗೊಂಡವರಲ್ಲಿ ಎಸ್.ಶೆಟ್ಟರ್ ಹಾಗೂ ಎಸ್.ರಾಜಶೇಖರ್ ಪ್ರಮುಖರು. ಐಹೊಳೆ, ಬದಾಮಿ, ಪಟ್ಟದಕಲ್ಲು ಹಾಗೂ ಮಹಾಕೂಟಗಳಲ್ಲಿ ರಚನೆಯಾದ ನೂರಾರು ದೇವಾಲಯಗಳ ನಿರ್ಮಾಣದ ಇತಿಹಾಸ, ಇವುಗಳಿಗೆ ಸಂಬಂಧಿಸಿದ ಶಾಸನಾಧಾರಗಳು ಇತರ ಉಲ್ಲೇಖಗಳನ್ನು ಮೇಳೈಸಿಕೊಂಡು ಸೂಕ್ಷ್ಮ ಹಾಗೂ ಸಮಗ್ರ ಅಧ್ಯಯನಗಳನ್ನು ಇವರು ಕೈಗೊಂಡಿದ್ದಾರೆ. ಇಲ್ಲಿ ಅಭಿವ್ಯಕ್ತವಾದ ಮಾದರಿ (ಶೈಲಿ)ಗಳ ಬಗೆಗೆ ಹೆಚ್ಚಿನ ಮಾಹಿತಿ ನೀಡುವ ಕಾರ್ಯವನ್ನೂ ಮಾಡಿದ್ದಾರೆ. ಎಸ್.ರಾಜಶೇಖರ್ ಅವರು ಐಹೊಳೆ ದೇವಾಲಯಗಳ ಕುರಿತು ರಚಿಸಿರುವ ಕೃತಿ ಇದಕ್ಕೊಂದು ಉದಾಹರಣೆ. ಬದಾಮಿ ಹಾಗೂ ಐಹೊಳೆ ಕೇಂದ್ರಗಳಲ್ಲದೆ ದೂರದ ಕೃತಿ ಇದಕ್ಕೊಂದು ಉದಾಹರಣೆ. ಬದಾಮಿ ಹಾಗೂ ಐಹೊಳೆ ಕೇಂದ್ರಗಳಲ್ಲದೆ ದೂರದ ಅಲಂಪುರ್(ಆಂಧ್ರ)ದಲ್ಲಿನ ದೇವಾಲಯಗಳ ಕುರಿತು ವಿವರವಾದ ಮಾಹಿತಿ ನೀಡಿದ್ದಾರೆ. ಬಾದಾಮಿ ಚಲುಕ್ಯರ ನಿರ್ಮಿತಿಗಳು ತಮಿಳು ರಾಜ್ಯಗಳಲ್ಲಿದ್ದ ಪಲ್ಲವರ ಪ್ರಭಾವವದಿಂದ ನಿರ್ಮಾಣಗೊಂಡ ವಾಸ್ತುಗಳು ಎಂಬ ವಾದವನ್ನು ಆಧಾರ ಸಹಿತ ಅಲ್ಲಗಳೆದಿದ್ದಾರೆ. ಪಲ್ಲವರಿಂದ ಪ್ರೇರಿತವಾಗದೆ, ಪಲ್ಲವರೆ ಬದಾಮಿ ಚಲುಕ್ಯ ವಾಸ್ತು ಶೈಲಿಗಳಿಂದ ಪ್ರಭಾವಿತರಾಗಿರುವ ವಿಚಾರವನ್ನು ಮಂಡಿಸಿದ್ದಾರೆ. ಇಂಥ ಈ ಅಂಶವನ್ನು ಅಧ್ಯಯನ ಕ್ಷೇತ್ರಗಳಲ್ಲಿ ಪ್ರಚುರಪಡಿಸಿ ನಮ್ಮ ವಾಸ್ತು ಪರಂಪರೆಗೆ ಮಹತ್ವದ ಜಾಗ ಕಲ್ಪಿಸಿಕೊಟ್ಟಿದ್ದಾರೆ. ಈ ಕಾರ್ಯ ಇತಿಹಾಸ ಪುರಾತತ್ವ ಅಧ್ಯಯನ ಕ್ಷೇತ್ರಗಳಲ್ಲಿ ಎಂದೂ ಮರೆಯಲಾಗದ ವಿಷಯಗಳಾಗಿವೆ.[೧೨]

ನಿರ್ಲಕ್ಷ್ಯಕ್ಕೆ ಒಳಗಾಗಿದ್ದ ರಾಷ್ಟ್ರಕೂಟ ದೇವಾಲಯಗಳ ಅಧ್ಯಯನಕ್ಕೂ ಇವರು ಹೆಚ್ಚಿನ ಮಹತ್ವ ನೀಡಿದ್ದಾರೆ. ರಾಷ್ಟ್ರಕೂಟರ ಕಲೆಯನ್ನು ಅಜಂತಾ ಎಲ್ಲೋರ ದೇವಾಲಯಗಳಿಗೆ ಸೀಮಿತಗೊಳಿಸದೆ ಜನಜನಿತವಾದ ವಿಚಾರಗಳಿಗೆ ವಿರಾಮ ಹಾಕಿ, ಉತ್ತರ ಕರ್ನಾಟಕದ ಬೇರೆ ಬೇರೆ ಪ್ರದೇಶಗಳಲ್ಲಿ ನೂರಾರು ಸಂಖ್ಯೆಯಲ್ಲಿ ಹರಡಿಕೊಂಡಿರುವ, ಆ ಕಾಲದ ವಾಸ್ತು ರಚನೆಗಳ ಬಗ್ಗೆ ಮಾಹಿತಿಗಳನ್ನು ಕೂಲಂಕುಷವಾಗಿ ಸಾದರಪಡಿಸಿದ್ದಾರೆ. ಅಲ್ಲದೆ ಬಾದಾಮಿ ಚಲುಕ್ಯರಿಂದ ರಾಷ್ಟ್ರಕೂಟರ ಕಾಲದವರೆಗೆ, ರಾಷ್ಟ್ರಕೂಟರ ಕಾಲದಿಂದ ಕಲ್ಯಾಣದ ಚಾಲುಕ.ರ ಕಾಲದವರೆಗೆ ನಿರಂತರವಾಗಿ ಮುಂದುವರೆದ ವಾಸ್ತು ನಿರ್ಮಿತಿಗಳ ಸ್ಥಿತ್ಯಂತರ ಘಟ್ಟಗಳನ್ನು ಮೊಟ್ಟಮೊದಲಿಗೆ ಗುರುತಿಸುವ ಪ್ರಯತ್ನ ಮಾಡಿದ್ದಾರೆ.

ಎಸ್.ಶೆಟ್ಟರ್ ಅವರು ಕಳೆದು ಮೂರು ನಾಲ್ಕು ದಶಕಗಳಿಂದ ಹೊಯ್ಸಳ ದೇವಾಲಯ ಹಾಗೂ ಶಿಲ್ಪಗಳ ಬಗೆಗೆ ವಿಶೇಷ ಅಧ್ಯಯನಗಳನ್ನು ಕೈಗೊಂಡಿದ್ದಾರೆ. ಆ ಕಾಲದಲ್ಲಿ ರಚನೆಯಾದ ವಾಸ್ತು ನಿರ್ಮಿತಿಗಳ ಕುರಿತು ಅತ್ಯದ್ಭುತವಾದ ಎರಡು ಬೃಹತ್ ಗ್ರಂಥಗಳನ್ನು ಭಾರತೀಯ ಕಲಾ ಇತಿಹಾಸ ಸಂಸ್ಥೆಯಿಂದ ಪ್ರಕಟಿಸಿದ್ದಾರೆ. ಇವುಗಳಲ್ಲಿ ಒಂದು ಗ್ರಂಥ ಹೊಯ್ಸಳ ಕಾಲದ ರಚನೆಗಳ ಬಗೆಗೆ ಹಾಗೂ ಅವುಗಳಲ್ಲಿ ವ್ಯಕ್ತವಾದ ಸೂಕ್ಷ್ಮ ಕಲಾ ಸೌಂದರ್ಯದ ಬಗೆಗೆ ವಿವರಿಸಿದರೆ,[೨೮] ಇನ್ನೊಂದು ಗ್ರಂಥವು ಸುಂದರ ಹಾಗೂ ಸ್ಪಷ್ಟತೆಯಿಂದ ಕೂಡಿದ ಛಾಯಾಚಿತ್ರಗಳನ್ನು ಒಳಗೊಂಡಿದೆ.

ಕರ್ನಾಟಕದ ದೇವಾಲಯಗಳ ಅಧ್ಯಯನದ ಸಂದರ್ಭದಲ್ಲಿ ಇನ್ನಿಬ್ಬರನ್ನು ನೆನೆಯಲೇಬೇಕಾದ ಅವಶ್ಯಕತೆ ಇದೆ. ಎಂ.ಎ.ಢಾಕಿ ಹಾಗೂ ಕೆ.ವಿ.ಸೌಂದರರಾಜನ್ ಅವರು ಕರ್ನಾಟಕದ ದೇವಾಲಯಗಳ ಅಧ್ಯಯನ ಕ್ಷೇತ್ರಗಳಲ್ಲಿ ಹೊಸಬಗೆಯ ಚರ್ಚೆಗಳನ್ನು ಈ ಮಹನೀಯರು ಹುಟ್ಟುಹಾಕಿದ್ದಾರೆ. ಪ್ರಾಚೀನ (Text)ಪಠ್ಯಗಳನ್ನು ಆಧರಿಸಿ ಬೆಳೆದುಬಂದ ಕಲಾ ಪರಂಪರೆಯ ಕುರಿತು ಪ್ರಸ್ತುತ ಸಂದರ್ಭದಲ್ಲಿ ಗಮನ ಕೇಂದ್ರೀಕರಿಸುವ ಪ್ರಯತ್ನ ಮಾಡಿದರು. ಸಾಮಾನ್ಯವಾಗಿ ಆರು ಬಗೆಯ ಮಾದರಿ(ಶೈಲಿ)ಯ ದೇವಾಲಯಗಳು ನಿರ್ಮಾಣವಾಗಿರುವ ಅಭಿಪ್ರಾಯವನ್ನು ಇವರು ವ್ಯಕ್ತಪಡಿಸಿದ್ದಾರೆ.

ಆ ಕಾಲದ ದೇವಾಲಯಗಳು ಕೇವಲ ಸೌಂದರ್ಯವನ್ನು ಪ್ರತಿಬಿಂಬಿಸುವ ನಿರ್ಜೀವ ರಚನೆಗಳು ಮಾತ್ರವಾಗಿರದೆ, ಅಂದಿನ ಆಡಳಿತ, ಸಮಾಜೋಧಾರ್ಮಿಕ ಹಾಗೂ ಆರ್ಥಿಕ ಚಟುವಟಿಕೆಗಳನ್ನು ನಿಯಂತ್ರಿಸುವ ಮತ್ತು ನಿರ್ಣಯಿಸುವ ಬಹುಮುಖ್ಯ ಕೇಂದ್ರಗಳಾಗಿದ್ದವು ಎಂಬುವುದನ್ನು ಇತ್ತೀಚಿನ ಅಧ್ಯಯನಗಳು ನಿರೂಪಿಸುತ್ತಿವೆ. ಈ ನೆಲೆಯಲ್ಲಿ ದೇವಾಲಯಗಳು ಸಾಮಾಜಿಕ ಸಂಸ್ಥೆಯಾಗಿ ನಿರ್ವಹಿಸಿದ ನ್ಯಾಯ ತೀರ್ಮಾನಗಳನ್ನು ಕೂಲಂಕುಷವಾಗಿ ಚರ್ಚಿಸಿ ಅವುಗಳ ಅಗತ್ಯತೆಯನ್ನು ಪುನರ್ ಪರಿಶೀಲಿಸಬೇಕೆಂಬ ಅಭಿಪ್ರಾಯಗಳೂ ವ್ಯಕ್ತವಾಗುತ್ತಿವೆ. ಈ ನಿಟ್ಟಿನಲ್ಲಿ ರಾಜಾರಾಂ ಹೆಗಡೆಯವರು "ದೇವಾಲಯಗಳ ಸಂಸ್ಕೃತಿ" ಹೆಸರಿನಲ್ಲಿ ಅವುಗಳ ವಿಸ್ತಾರ ವ್ಯಾಪ್ತಿಯನ್ನು ಮಹತ್ವದ ಸಂಗತಿಗಳನ್ನು ವಿವೇಚಿಸಿ ನಿರ್ವಚಿಸುವ ಪ್ರಯತ್ನ ಮಾಡಿದ್ದಾರೆ.[೨೯] ಅಲ್ಲದೆ ಈವರೆಗಿನ ಅಧ್ಯಯನಗಳು ಕೇವಲ ಪ್ರಮುಖ ಹಾಗೂ ರಾಜಧಾನಿ ಕೇಂದ್ರ ಭಾಗಗಳಲ್ಲಿ ರಚನೆಯಾಗಿರುವ ದೇವಾಲಯಗಳನ್ನು ಮಾತ್ರ

ದೃಷ್ಟಿಯಲ್ಲಿಟ್ಟುಕೊಂಡು ನಡೆದವುಗಳು. ಆದರೆ ಕನ್ನಡ ವಿಶ್ವವಿದ್ಯಾಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗವು ಕರ್ನಾಟಕದಲ್ಲಿನ ಪ್ರತೀ ಗ್ರಾಮಗಳಲ್ಲಿರುವ ದೇವಾಲಯ ಹಾಗೂ ತತ್ಸಂಬಂಧಿ ಅವಶೇಷಗಳನ್ನು ದಾಖಲಿಸುವ ಹಾಗೂ ಸೀಮಿತವಾದ ಚೌಕಟ್ಟಿನಲ್ಲಿ ವಿಶ್ಲೇಷಿಸುವ ಕಾರ್ಯ ಮಾಡುತ್ತಿದೆ. ಜಾರ್ಜ್‌ಮಿಶಲ್, ಜಾನ್‌ಫ್ರೀಡ್ಜ್, ಫುಕೋಮಾ, ವಸುಂಧರಾ ಫಿಲಿಯೋಜಾ, ಅನಿಲಾ ವರ್ಗೀಸ್, ಎಂ.ಎಸ್.ಕೃಷ್ಣಮೂರ್ತಿ ಹಾಗೂ ಶ್ರೀನಿವಾಸ ಪಾಡಿಗಾರ್ ಮುಂತಾದ ವಿದ್ವಾಂಸರು ಕರ್ನಾಟಕದ ಬೇರೆ ಬೇರೆ ಪ್ರದೇಶಗಳಲ್ಲಿನ ಬೇರೆ ಬೇರೆ ಕಾಲಾವಧಿಯಲ್ಲಿ ನಿರ್ಮಾಣವಾದ ದೇವಾಲಯಗಳನ್ನು ಕುರಿತು ವಿವರವಾದ, ವಿಶ್ಲೇಷಣಾತ್ಮಕ ಅಧ್ಯಯನ ಮುಂದುವರಿಸಿದ್ದಾರೆ.

ಗವಿಯಾಸರೆಗಳಲ್ಲಿ ನಿರ್ಮಾಣವಾದ ಪ್ರಾಚೀನ ಚಿತ್ರಕಲೆಯು ಆದಿಮಾನವನ ಚಟುವಟಿಕೆಗಳನ್ನು ಕುರಿತು ಅಧಿಕೃತ ಮಾಹಿತಿಗಳನ್ನು ನೀಡುವ ಆಕರಗಳಾಗಿವೆ. ಜಾಗತಿಕ ಮಟ್ಟದಲ್ಲಿ ಗುರುತಿಸುವ ಆದಿ ಸಂಸ್ಕೃತಿ ಚಿತ್ರಕಲೆಗಳು ನಮ್ಮ ನಾಡಿನಲ್ಲಿ ಹಲವಾರು ಕಡೆ ರಚನೆಯಾಗಿವೆ. ಯಾದಗಿರಿ ತಾಲೂಕಿನ ಬಳಿಚಕ್ರ, ಐಹೊಳೆ, ಗಂಗಾವತಿ ತಾಲೂಕಿನ ಹಿರೇಬೆನಕಲ್, ಕಲ್ಲೂರು, ಕೊಪ್ಪಳ, ಆನೆಗೊಂದಿ, ಕುರುಗೋಡು, ಹಂಪಿ ಪರಿಸರ ಹಾಗೂ ಇನ್ನಿತರ ಪ್ರದೇಶಗಳಲ್ಲಿ ಗವಿಚಿತ್ರಕಲೆಗಳು ಕಂಡುಬಂದಿವೆ. ಅಲ್ಲದೆ ಅನೇಕ ಕಡೆಗಳಲ್ಲಿ ಬಯಲಿನಲ್ಲಿರುವ ಬಂಡೆಗಳ ಮೇಲೆ ರೇಖಾ ಚಿತ್ರಗಳನ್ನು ಬಿಡಿಸುರವ ಕುರುಹುಗಳಿವೆ. ಮುಂದುವರೆದ ಈ ಚಿತ್ರಕಲಾ ಪರಂಪರೆ ದೇವಾಲಯಗಳ ಒಳಬಿತ್ತಿ, ಛಾವಣಿ ಹಾಗೂ ಕಂಬಗಳ ಮೇಲೆ ಅಭಿವ್ಯಕ್ತಗೊಂಡಿದೆ. ವಿಜಯನಗರ ಮತ್ತು ನಂತರ ಕಾಲಾವಧಿಯಲ್ಲಿ ಚಿತ್ರಕಲೆಯ ಪರಂಪರೆ ಸಮೃದ್ಧವಾಗಿ ಬೆಳೆದುಬಂದಿದೆ. ಈ ಕುರಿತು ಶಿವರಾಮ ಕಾರಂತ, ಶಿವರಾಮಮೂರ್ತಿ, ಅ.ಸುಂದರ, ಎಸ್.ರಾಜಶೇಖರ್, ಲಕ್ಷ್ಮಣ್ ತೆಲಗಾವಿ, ಎಂ.ಎಸ್.ಕೃಷ್ಣಮೂರ್ತಿ, ಅ.ಲ.ನರಸಿಂಹನ್, ಹೆಚ್.ಆರ್.ರಘುನಾಥಭಟ್ ಹಾಗೂ ಆರ್.ಹೆಚ್.ಕುಲಕರ್ಣಿ ಮುಂತಾದ ವಿದ್ವಾಂಸರು ನಾಡಿನ ಈ ಪರಂಪರೆಯ ಬಗೆಗೆ ಹೆಚ್ಚಿನ ಅಧ್ಯಯನ ಹಾಗೂ ವಿಶ್ಲೇಷಣೆ ಕೈಗೊಂಡಿದ್ದಾರೆ. ಕರ್ನಾಟಕದ ಕಲಾ ಅಕಾಡೆಮಿಯು ಹೆಚ್.ತಿಪ್ಪೇಸ್ವಾಮಿ ಅವರ ನೆತೃತ್ವದಲ್ಲಿ ಪ್ರಕಟಿಸಿರುವ ಕಲಾ ಪ್ರಪಂಚ, ಶಿವರಾಮ ಕಾರಂತರ ಚಿತ್ರಕಲಾ ಅಧ್ಯಯನ, ಎಸ್.ರಾಜಶೇಖರ್ ಅವರ ಕರ್ನಾಟಕದ ವಾಸ್ತುಶಿಲ್ಪ ಮತ್ತು ಶಿಲ್ಪಕಲೆಯ ಅಧ್ಯಯನ, ಅ.ಸುಂದರ ಹಾಗೂ ಲಕ್ಷ್ಮಣ್ ತೆಲಗಾವಿ ಅವರು ಪ್ರಕಟಿಸುರವ ಬಿಡಿ ಲೇಖನಗಳು ಹೆಚ್ಚಿನ ಅಧ್ಯಯನ ಕೈಗೊಳ್ಳಲು ಸಹಾಯಕವಾಗಿವೆ. ಆದರೂ ಈ ವಿಷಯಗಳ ಬಗ್ಗೆ ಪ್ರಕಟವಾಗಿರುವ ಮಾಹಿತಿಗಳು ಮತ್ತು ಗ್ರಂಥಗಳು ಕಡಿಮೆ ಎಂದು ಅಭಿಪ್ರಾಯಿಸಬಹುದು.

ಶಾಸನಗಳ ಅಧ್ಯಯನ

ಶಾಸನ ಹಾಗೂ ನಾಣ್ಯಗಳ ಆಕರಗಳು ಕರ್ನಾಟಕದ ಇತಿಹಾಸ ಮತ್ತು ಪಾರುತತ್ವ ರಚನೆಯ ಪ್ರಮುಖ ಸಾಮಗ್ರಿಗಳಾಗಿ ಕಂಡುಬಂದಿವೆ. ಇವುಗಳ ಅಧ್ಯಯನಕ್ಕೆ ಸುದೀರ್ಘವಾದ ಇತಿಹಾಸವಿದೆ. ಪ್ರಾಚೀನ ಇತಿಹಾಸ ಅಧ್ಯಯನವೆಂದರೆ, ಶಾಸನಗಳ ಅಧ್ಯಯನವೆನ್ನುವಷ್ಟರ ಮಟ್ಟಿಗೆ ಒಂದಾಗಿ ಹೋಗಿವೆ.

ಈ ಕ್ಷೇತ್ರದಲ್ಲಿ ಸಾಹಿತ್ಯಾಧ್ಯಯನಾಸಕ್ತರ ಕೊಡುಗೆ ಅಪಾರವಾದುದು. ಕರ್ನಾಟಕದ ಶಾಸನ ಅಧ್ಯಯನವು ಮುಖ್ಯವಾಗಿ ಬಿ.ಎಲ್.ರೈಸ್ ಹಾಗೂ ಜೆ.ಎಫ್.ಫ್ಲೀಟ್ ಅವರ ಸುಪರ್ದಿನಲ್ಲಿ ನಡೆದಿರುವುದು. ಹಳೇ ಮೈಸೂರು, ಮುಂಬೆ ಕರ್ನಾಟಕ ಹಾಗೂ ನಿಜಾಂ ಕರ್ನಾಟಕಗಳಲ್ಲಿ ಇವರು ಹೆಚ್ಚಿನ ಅಧ್ಯಯನಗಳನ್ನು ಕೈಗೊಂಡಿದ್ದಾರೆ. ಕವಿ ಚರಿತ್ರೆಕಾರ ಆರ್.ನರಸಿಂಹಾಚಾರ್ ಶಾಸನಗಳನ್ನು ಆಧರಿಸಿ ಪ್ರಾಚೀನ ಕನ್ನಡ ಸಾಹಿತ್ಯ ಕವಿಗಳ ಹಾಗೂ ಗ್ರಂಥಕಾರರ ಬಗ್ಗೆ ಮೊಟ್ಟಮೊದಲಿಗೆ ಮಾಹಿತಿಗಳನ್ನು ನೀಡಲು ಪ್ರಯತ್ನಿಸಿದ್ದಾರೆ.[೧೫] ಕೇಂದ್ರ ಶಾಸನ ಸಂಗ್ರಹಗಳ ಇಲಾಖೆಯ ಅಡಿಯಲ್ಲಿ ಪಿ.ಬಿ.ದೇಸಾಯಿ, ಜಿ.ಎಸ್.ಗಾಯಿ, ಶ್ರೀನಿವಾಸ ರಿತ್ತಿ, ಮಾಧವ ನಾ.ಕಟ್ಟಿ ಮತ್ತು ಕೆ.ವಿ.ರಮೇಶ್ ಮುಂತಾದ ವಿದ್ವಾಂಸರು ಶಾಸನ ಅಧ್ಯಯನಗಲನ್ನು ಪ್ರಕಟಿಸಿದ್ದಾರೆ. ಇವರು ಮಾಹಿತಿ ನೀಡುವುದರ ಜೊತೆಗೆ ಅವುಗಳ ವಿಶ್ಲೇಷಣೆಯಿಂದ ಬಂದ ಫಲಿತಗಳನ್ನು ಪ್ರಕಟಿಸುವ ಎರಡೂ ಕಾರ್ಯಗಳನ್ನು ಮಾಡಿದ್ದಾರೆ.

ಇದುವರೆಗೆ ಪ್ರಕಟವಾಗಿರುವ ಶಾಸನಗಳನ್ನು ಇತಿಹಾಸ ರಚನೆ, ವಿಶ್ಲೇಷಣೆಗೆ ಸಮರ್ಥವಾಗಿ ದುಡಿಸಿಕೊಳ್ಳುವಂತೆ ಮಾರ್ಗದರ್ಶನ ಮಾಡಿದ ಕೀರ್ತಿ ಎಂ.ಚಿದಾನಂದಮೂರ್ತಿ ಹಾಗೂ ಎಂ.ಎಂ.ಕಲ್ಬುರ್ಗಿ ಅವರಿಗೆ ಸಲ್ಲುತ್ತದೆ. ಇತಿಹಾಸ ಮತ್ತು ಸಾಹಿತ್ಯದ ನಡುವಿನ ಗೆರೆಯನ್ನು ಅಳಿಸಿ ಹಾಕಿ ಅವುಗಳೆರಡು ಸಮಾನಾಂತರವಾಗಿ ಹೋಗುವ ಮಹತ್ವದ ಕಾರ್ಯಗಳನ್ನು ಮಾಡುತ್ತಿದ್ದಾರೆ. ಇದೇ ವೇಳೆಗೆ ಇತಿಹಾಸ ಮತ್ತು ಸಂಸ್ಕೃತಿಯನ್ನು ಜೋಡಿಸುವ ಕೊಂಡಿಗಳಾಗಿ ಕಾರ್ಯನಿರ್ವಹಿಸುತ್ತಿರುವ ಎಲ್ಲ ಬಗೆಯ ಶಾಸನಗಳನ್ನು ಸಮಗ್ರವಾಗಿ ಒಂದು ಕಡೆ ತರಬೇಕೆನ್ನುವ ಮಹತ್ತರ ಕಾರ್ಯವನ್ನು ಕನ್ನಡ ವಿಶ್ವವಿದ್ಯಾಲಯದ ಶಾಸನಶಾಸ್ತ್ರ ವಿಭಾಗ ಕೈಗೊಂಡಿದೆ.

ನಾಣ್ಯಗಳ ಅಧ್ಯಯನ

ಪುರಾತತ್ವ ಅಧ್ಯಯನದಲ್ಲಿ ನಾಣ್ಯಗಳ ಅಧ್ಯಯನವು ಮೊದಲಿನಿಂದಲೂ ಹೆಚ್ಚಿನ ಅವಜ್ಞೆಗೆ ಒಳಗಾಗಿದೆ. ಕರ್ನಾಟಕವನ್ನು ಪರಿಗಣಿಸಿ ಅಭಿಪ್ರಾಯಪಡುವುದಾದರೆ, ಬೇರೆ ಬೇರೆ ರಾಜ್ಯಗಳಲ್ಲಿ ನಾಣ್ಯ ಸಂಪತ್ತನ್ನು ಇತಿಹಾಸ ರಚನೆಯ ಪ್ರಮುಖ ಆಕರವಾಗಿ ದುಡಿಸಿಕೊಂಡಿದ್ದಾರೆ. ಆದರೆ ನಮ್ಮಲ್ಲಿ ಅಂತಹ ಕಾರ್ಯ ನಡೆದಿರುವುದು ಬಹುಮಟ್ಟಿಗೆ ಕಡಿಮೆ. ೨೦ನೆಯ ಶತಮಾನದ ಆರಂಭದಲ್ಲಿ ಎಂ.ಹೆಚ್.ಕೃಷ್ಣ ಅವರು ಹಾಗೂ ಮೂರುನಾಲ್ಕು ದಶಕಗಳಿಂದ ಎ.ವಿ.ನರಸಿಂಹಮೂರ್ತಿ ಅವರು ಕರ್ನಾಟಕದ ನಾಣ್ಯ ಸಂಪತ್ತಿನ ಬಗೆಗೆ ವಿಶೇಷ ಅಧ್ಯಯನಗಳನ್ನು ಕೈಗೊಂಡಿದ್ದಾರೆ.[೧೬] ತಮ್ಮ ವಿಶ್ಲೇಷಣೆಗಳ ಮೂಲಕ ರಾಷ್ಟ್ರೀಯ ಮಟ್ಟದಲ್ಲಿ ಕರ್ನಾಟಕದ ನಾಣ್ಯಗಳಿಗೆ ಇತಿಹಾಸ ರಚನೆಯಲ್ಲಿ ಮುಖ್ಯ ಸ್ಥಾನ ಕಲ್ಪಿಸುವ ಪ್ರಯತ್ನವನ್ನು ಇವರಿಬ್ಬರು ಮಾಡಿದ್ದಾರೆ. ಇಂಥ ಪ್ರಮುಖ ಅಧ್ಯಯನಗಳಿಗೆ ಅವಶ್ಯಕವಿರುವ ನಾಣ್ಯಗಳನ್ನು ಸಂಗ್ರಹಿಸುವ ಸಂಸ್ಥೆಗಳು ಸಹ ನಮ್ಮ ರಾಜ್ಯಗಳಲ್ಲಿ ಅತ್ಯಂತ ವಿರಳ. ಅಲ್ಲದೆ ಈ ದಿಸೆಯಲ್ಲಿ ಇಂಥ ಮಹತ್ವ ಕಾರ್ಯಗಳನ್ನು ನಿರ್ವಹಿಸುತ್ತಿರುವ ಕರ್ನಾಟಕದಲ್ಲಿನ ವಿಶ್ವವಿದ್ಯಾಲಯಗಳಲ್ಲಿರುವ ಚರಿತ್ರೆ, ಪ್ರಾಚೀನ ಇತಿಹಾಸ, ಶಾಸನಶಾಸ್ತ್ರ ಮತ್ತು ಪುರಾತತ್ವ ಅಧ್ಯಯನಗಳ ಬೇರೆ ಬೇರೆ ವಿಭಾಗಗಳು ಮಾಡುವ ಕೆಲಸದಷ್ಟೇ

ಸರಿಸಮಾನವಾಗಿ ಕರ್ನಾಟಕದಲ್ಲಿ ಈಗ ಅಸ್ತಿತ್ವದಲ್ಲಿರುವ ಇತಿಹಾಸ ಅಕಾಡೆಮಿ, ಇತಿಹಾಸ ಕಾಂಗ್ರೆಸ್ ಪರಿಷತ್ ಸಂಸ್ಥೆಗಳು ಮಾಡುತ್ತಿವೆ. ಮೂಲ ಸಾಮಗ್ರಿಗಳನ್ನು ಸಂಗ್ರಹಿಸುವ, ವಿಶ್ಲೇಷಿಸುವ ಹಾಗೂ ಪ್ರಕಟಿಸುವ ಬಹುಮುಖ್ಯ ವೇದಿಕೆಗಳು ಇವಾಗಿವೆ. ಪ್ರತಿವರ್ಷ ನಡೆಯುವ ವಿಚಾರ ಸಂಕಿರಣದಲ್ಲಿ ಮಂಡಿಸುವ ಪ್ರಬಂಧಗಳು ಪುಸ್ತಕ ರೂಪದಲ್ಲಿ ಪ್ರಕಟವಾಗತ್ತಿವೆ. ಈ ಕಾರ್ಯವು ಅತ್ಯಂತ ಶ್ಲಾಘನೀಯ ಮತ್ತು ಉಪಯುಕ್ತವಾದುದು.

ಈ ಮೇಲೆ ವಿವರಿಸಿದ ವಿಚಾರಗಳು ಕರ್ನಾಟಕದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ಮಾದರಿಗಳು ಹುಟ್ಟಿ ಬೆಳೆದು ಬಂದ ಬಗೆಯನ್ನು ಸಂಕ್ಷಿಪ್ತವಾಗಿ ವಿವರಿಸುವ ಪ್ರಯತ್ನವಷ್ಟೆ. ಈ ವಿವರಗಳು ಒಂದು ಮಟ್ಟದಲ್ಲಿ ಸಮಗ್ರತೆಯನ್ನು ತಂದುಕೊಡುವ ಯತ್ನವೇ ಹೊರತು ಸಂಪೂರ್ಣ ಮಾಹಿತಿಗಳನ್ನು ವಿವರವಾಗಿ ವಿವೇಚಿಸುವ ಕಾರ್ಯವಲ್ಲ. ನಮ್ಮ ಇತಿಹಾಸ ದೀರ್ಘಕಾಲದ್ದು, ಅದರ ಬರವಣಿಗೆ ಇತ್ತೀಚಿನದು. ನೂರಾರು ವರ್ಷಗಳಿಂದ ಅನೇಕ ಅಡೆತಡೆಗಳ ಮಧ್ಯೆ ಬೆಳೆದುಕೊಂಡು ಬಂದ ಈ ಅಧ್ಯಯನಗಳಲ್ಲಿ ಹುರಿತೊಡಕಾಗಿದೆ. ಅದನ್ನು ಜಾಣ್ಮೆಯಿಂದ ಬಿಡಿಸುವ, ಗ್ರಹಿಸುವ ಅವಶ್ಯಕ ನಿರ್ವಚಿಸುವ ಕಾರ್ಯಮಾಡಬೇಕಾಗಿದೆ. ಅಸ್ಪಷ್ಟವಾಗಿ ರೂಪಗೊಂಡ ಬರವಣಿಗೆಗಳನ್ನು ಕಾಲಕಾಲಕ್ಕೆ ತಡವಿ ಕೊಡವಿ ನೋಡುವ ಸ್ಪಷ್ಟತೆಯ ಕಡೆಗೆ ಆಲೋಚಿಸುವ ವ್ಯವಧಾನ ರೂಡಿಸಿಕೊಳ್ಳಬೇಕು.[೧೭] ಭಿನ್ನ ಭಿನ್ನ ವಿಚಾರಗಳನ್ನು ಒಂದು ಕಡೆಗೆ ತಂದು ಅವುಗಳ ನಡುವಿನ ಸಹಸಂಬಂಧಗಳನ್ನು ಕಳಚಿ ಹೋಗದಂತೆ ಜೋಡಿಸಬೇಕಾಗಿದೆ.

ವೈವಿಧ್ಯಪೂರ್ಣ ಇತಿಹಾಸ, ಪುರಾತತ್ವ ಹಾಗೂ ಅವುಗಳ ಬಗೆಗಿರುವ ವೈಶಿಷ್ಟ್ಯಪೂರ್ಣ ಬರವಣಿಗೆಗಳು ನಮ್ಮ ಮುಂದಿವೆ. ಅವುಗಳಲ್ಲಿ ವ್ಯಕ್ತವಾಗಿರುವ ವಿಚಾರಗಳನ್ನು ಪುನರುತ್ಪಾದಿಸುತ್ತಾ, ನಿರೂಪಿಸುತ್ತಾ ಇರುವುದು ಬಹಳ ಮುಖ್ಯ. ಈಗಾಗಲೇ ಕಟ್ಟಿಕೊಂಡಿರುವ ತಪ್ಪುದಾರಿಗಳಿಂದ ಬಿಡುಗಡೆ ಹೊಂದಬೇಕಾಗಿದೆ. ಗತದ ನಿರ್ಮಿತಿಗಳ ಬಗೆಗೆ ಮೌಲ್ಯಮಾಪನದ ಜರೂರಿನಿಂದ ಕರ್ನಾಟಕದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನಗಳ ಮರುಚಿಂತನೆ ಅವಶ್ಯಕವಾಗಿ ನಡೆಯಬೇಕಾಗಿರುವುದು ವಿಚಾರಾರ್ಹವಾದ ಸಂಗತಿ. ವಿಷಯಗಳನ್ನು ಹೇಗೆ ಕಟ್ಟಿಕೊಳ್ಳಬೇಕು? ಯಾರಿಗೆ ಕಟ್ಟಿಕೊಡಬೇಕು? ಎಂಬ ನೆಲೆಯಲ್ಲಿ ಪ್ರಸ್ತುತ ವಿಚಾರಗಳನ್ನು ಸಂಗ್ರಹಿಸಿ ಸಂಪಾದಿಸುವ ಕೆಲಸವನ್ನು ಮಾಡಲಾಗಿದೆ. ಈ ಕೃತಿಯಲ್ಲಿ ಒಟ್ಟು ಹದಿನಾರು ಲೇಖನಗಳಿವೆ. ಅವುಗಳ ಸಾರಾಂಶದ ತುಣುಕುಗಳನ್ನು ಈ ಮುಂದೆ ವಿವರಿಸಲಾಗಿದೆ.

ಇತಿಹಾಸಪೂರ್ವ ಮತ್ತು ಇತಿಹಾಸ ಕಾಲಗಳೆರಡರಲ್ಲಿ ವಿಸ್ತರಿಸಿಕೊಂಡಿರುವ ಬೃಹತ್ ಶಿಲಾಯುಗ ಸಂಸ್ಕೃತಿಯು ಕರ್ನಾಟಕದ ಹೆಚ್ಚಿನ ಜಿಲ್ಲೆಗಳಲ್ಲಿ ಹರಡಿಕೊಂಡಿದೆ. ಇದಕ್ಕೆ ಸಂಬಂಧಿಸಿದ ಕುರುಹುಗಳು ಅನ್ವೇಷಣೆ ಹಾಗೂ ಉತ್ಖನನ ಕಾರ್ಯಗಳಲ್ಲಿ ಕಂಡುಬಂದಿವೆ. ಹೆಚ್ಚಿನ ಅಧ್ಯಯನಕಾರರು ಸಿಕ್ಕಿರುವ ಅವಶೇಷಗಳ ಹೊರನೋಟಗಳನ್ನು ಮಾತ್ರ ಪ್ರಕಟಿಸಿದ್ದಾರೆ. ಆದರೆ ವೈಜ್ಞಾನಿಕ ಮೂಸೆಯೊಳಗಿಟ್ಟು ಕಂಡುಕೊಳ್ಳುವ ಫಲಿತಗಳ ಬಗೆಗೆ ವಿಚಾರ ಮಾಡಬೇಕಾದ ಅವಶ್ಯಕತೆ ಇದೆ. ಸಂಬಂಧಿಸಿದ ಪ್ರಾಚೀನ

ವಸತಿಗಳಲ್ಲಿ ಮಡಿಕೆ-ಕುಡಿಕೆ, ಗೋರಿಗಳಲ್ಲಿರುವ ಅಸ್ತಿ ಹಾಗೂ ಇತರ ಅವಶೇಷಗಳನ್ನು ಮುಂದುವರೆದ ಬೇರೆ ಬೇರೆ ವಿಜ್ಞಾನ ಪರೀಕ್ಷೆಗಳಿಗೆ ಒಳಪಡಿಸಿ ವಾಸ್ತವ ಸಂಗತಿಗಳನ್ನು ತಿಳಿಯುವುದು ಇಂದಿನ ಜರೂರಾಗಿದೆ. ಆ ಕಾಲದ ಜನಾಂಗ, ಅವರು ಹೊಂದಿದ್ದ ಸಂಬಂಧ ಹಾಗೂ ಇನ್ನುಳಿದ ಭೌತಿಕ ವಿಚಾರಗಳ ಬಗೆಗೆ ನಿರ್ದಿಷ್ಟ ತಿಳುವಳಿಕೆಯನ್ನು ಇಂಥ ಪ್ರಯೋಗಗಳಿಂದ ಮಾತ್ರ ಕಂಡುಕೊಳ್ಳಲು ಸಾಧ್ಯ.

ಚರಿತ್ರೆ ನಿರೂಪಿಸುವ ಶಾಸನಗಳನ್ನು ಕೇವಲ ಒಂದು ಮಟ್ಟದ ವಿಷಯ ಕಟ್ಟಿಕೊಡಲು ಬಳಸಿಕೊಳ್ಳಲಾಗಿದೆ. ಆದರೆ ಅವುಗಳ ಒಳತುಡಿತಗಳನ್ನು ಬಿಡಿಸಿ ನೋಡಿ, ಕೇವಲ ರಾಜ ಮಹಾರಾಜರ, ರಾಣಿಯರ, ಮುಖ್ಯ ಅಧಿಕಾರಿಗಳ ದಿಗ್ವಿಜಯ ಹಾಗೂ ಮನೋಭಿಲಾಸೆಗಳನ್ನು ತಿಳಿಯುವುದು ಮಾತ್ರವಲ್ಲ, ಇವರೆಲ್ಲರ ಉನ್ನತಿಗಾಗಿ, ಉಳುವಿಗಾಗಿ ತಮ್ಮ ಬದುಕು ಮತ್ತು ಪ್ರಾಣವನ್ನು ತ್ಯಾಗ ಮಾಡಿದ ಲಕ್ಷಾಂತರ ಸಂಖ್ಯೆಯ ಜನಸಾಮಾನ್ಯರ ಬಗೆಗೂ ಚರಿತ್ರೆ ಹಾಗೂ ಅವುಗಳ ಬರವಣಿಗೆಯಲ್ಲಿ ಜಾಗ ಕಲ್ಪಿಸಿಕೊಡಬೇಕಾಗಿದೆ.[೨]

ನಾಣ್ಯಗಳ ಕುರಿತು ಅಧ್ಯಯನಗಳು ಕೇವಲ ನಾಣ್ಯದ ಹಿಮ್ಮುಖ ಮುಮ್ಮುಖ ಬಗೆಗೆ ಮಾಹಿತಿ ನೀಡುವುದರಲ್ಲಿ ಸೀಮಿತಗೊಂಡಿವೆ. ಆದರೆ ಆರ್ಥಿಕ ಚಟುವಟಿಕೆಗಳಲ್ಲಿ ಅತ್ಯಂತ ಪ್ರಮುಖಪಾತ್ರವಹಿಸಿರುವ ನಾಣ್ಯಗಳು ಹೇಗೆ ತಯಾರಾಗುತ್ತಿದ್ದವು, ಅವುಗಳ ತಯಾರಿಕೆ ಬಳಸುತ್ತಿದ್ದ ವಸ್ತುಗಳು, ಅವುಗಳ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿದ್ದ ವಿಧಾನಗಳು, ನಾಣ್ಯಗಳ ವಹಿವಾಟು, ಅವು ದ್ವಿಗುಣಗೊಂಡು ನಕಲಿಯಾಗದಂತೆ ತಡೆಯುವ ದಂಡೋಪಾಯ ಮಾರ್ಗಗಳ ಬಗೆಗೆ ಹೊಸ ನಿಟ್ಟಿನಲ್ಲಿ ಚಿಂತಿಸುವುದು ಸೂಕ್ತ.

ಕರ್ನಾಟಕದ ಪ್ರಾಚೀನ ಇತಿಹಾಸ ಮತ್ತು ಸಾಹಿತ್ಯ ಚರಿತ್ರೆಯ ಬಹುಮುಖ್ಯ ಆಕರಗಳಾಗಿ ಪ್ರಾಚೀನ ಹಸ್ತಪ್ರತಿಗಳು ನಿರ್ಣಯಾತ್ಮಕ ಪಾತ್ರವನ್ನು ವಹಿಸುತ್ತಾ ಬಂದಿವೆ. ರಾಜ ಮಹಾರಾಜರ ಚರಿತ್ರೆಯನ್ನು ಶಾಸನಗಳು ಬಿಡಿಸಿಟ್ಟರೆ, ಜನಸಾಮಾನ್ಯರ ಮತ್ತು ಅಲಕ್ಷಿತರ ಬದುಕಿನ ವಿಚಾರಗಳನ್ನು ಕಟ್ಟಿಕೊಡುವಲ್ಲಿ ಹಸ್ತಪ್ರತಿಗಳು ಸಹಾಯಕವಾಗಿವೆ. ವಿಪುಲವಾಗಿ ಬಳಸಿಕೊಳ್ಳುವ ಪ್ರಯತ್ನ ಮಾಡಬೇಕಾಗಿದೆ. ಈಗಾಗಲೇ ಪ್ರಕಟವಾಗಿರುವ ಕೈಫಿಯತ್ತುಗಳನ್ನು ಮರುವಿವೇಚಿಸುವ ಕೆಲಸ ತುರ್ತಾಗಬೇಕಾಗಿದೆ.

ಶಿಷ್ಟ ಆಕರಗಳು ಇತಿಹಾಸ ರಚನೆಗೆ ಎಷ್ಟು ಅವಶ್ಯಕ ಮತ್ತು ಮುಖ್ಯವೋ ಅಷ್ಟೇ ಮಹತ್ವವನ್ನು ಪರಿಶಿಷ್ಟ ಆಕರಗಳೂ ಪಡೆದುಕೊಂಡಿವೆ. ಸಾವಿರಾರು ಚಾರಿತ್ರಿಕ ಸತ್ಯಗಳನ್ನು ಬೀಜ ರೂಪದಲ್ಲಿ ಇರಿಸಿಕೊಂಡಿರುವ ಮೌಖಿಕ/ಜನಪದ/ಸ್ಥಳೀಯ ಆಕರಗಳನ್ನು ಹೆಚ್ಚು ಹೆಚ್ಚಾಗಿ ದುಡಿಸಿಕೊಳ್ಳುವ ಜಾಣ್ಮೆ ಇಂದು ಶಿಷ್ಟ ಚರಿತ್ರೆಕಾರರಿಗೆ ಇರಬೇಕಾಗಿದೆ. ಈ ನೆಲೆಯಲ್ಲಿ ಕನ್ನಡ ವಿಶ್ವವಿದ್ಯಾಲಯದ ಬೇರೆ ಬೇರೆ ವಿಭಾಗಗಳು ಕೈಗೊಂಡಿರುವ ಬರವಣಿಗೆಗಳು ತುಂಬಾ ಮಹತ್ವವಾಗಿವೆ.

ಕರ್ನಾಟಕದ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ಕ್ಷೇತ್ರಗಳಲ್ಲಿ ಸಾಹಿತ್ಯಗಳಷ್ಟೇ ಶಾಸನ, ದೇವಾಲಯ ಹಾಗೂ ಶಿಲ್ಪಗಳ ಅಧ್ಯಯನಗಳು ವೇಗವಾಗಿ ನಡೆಯಬೇಕಾಗಿದೆ. ರಾಜಕೀಯ, ಸಾಮಾಜಿಕ ಹಾಗೂ ಧಾರ್ಮಿಕ ಹೀಗೆ ಒಟ್ಟಾರೆ ಸಾಂಸ್ಕೃತಿಕ ಕೊಂಡಿಗಳಾದ ದೇವಾಲಯ ಅಧ್ಯಯನಗಳು ಕೇವಲ ಪ್ರಮುಖ ದೇವಾಲಯ ಹಾಗೂ ಸೌಂದರ್ಯದ ದೃಷ್ಟಿಯಿಂದ ಗಮನಿಸುವ ಪ್ರಯತ್ನಗಳಿಗೆ ಮೀಸಲಾಗಿವೆ. ಆದರೆ ಅಗಣಿತ ಸಂಖ್ಯೆಯಲ್ಲಿ ಪ್ರತಿ ಹಳ್ಳಿಗಳಲ್ಲಿರುವ ಇಂಥ ಮೂಕ ಸಾಕ್ಷಿಗಳನ್ನು ಬಳಸಿಕೊಂಡು ಚರಿತ್ರೆಯ ರಚನೆಯಲ್ಲಿ ಅವು ಮಾತನಾಡುವಂತೆ ಮಾಡಬೇಕಾಗಿದೆ.

ಮಾನವನು ತನ್ನ ಅಭಿಲಾಷೆಗಳನ್ನು ಮೊಟ್ಟಮೊದಲಿಗೆ ವ್ಯಕ್ತಪಡಿಸಿರುವ ಮಾಧ್ಯಮವೇ ಚಿತ್ರಕಲೆ. ಸೌಂದರ್ಯದ ಭಾಗವಾಗಿ, ಅಗಾಧವಾದ ವಿಚಾರಗಳನ್ನು ತನ್ನಲ್ಲಿ ಇಟ್ಟುಕೊಂಡಿರುವ ಮಹತ್ವದ ಮಾಧ್ಯಮ ಇದು. ಮಾನವನು ಗವಿಯಾಸರೆಗಳಲ್ಲಿ ತನ್ನ ಅನುಭವಗಳನ್ನು ಬಿಡಿಸಿದ್ದಾನೆ. ತನ್ನದೇ ಆದ ತಂತ್ರ ವಿಧಾನಗಳಿಂದ ಬಣ್ಣಗಳ ಲೇಪನವನ್ನೂ ಮಾಡಿರುವನು. ಇಂಥ ಮಹತ್ವದ ಕಲೆಯನ್ನು ವಿವರವಾಗಿ, ಸೂಕ್ಷ್ಮವಾಗಿ ಹಾಗೂ ಸಮಗ್ರವಾಗಿ ಹಿಡಿದಿಡುವ ಕಾರ್ಯ ಜರೂರಾಗಿ ಮಾಡಬೇಕಾಗಿದೆ. ಇಲ್ಲಿರುವ ಲೇಖನಗಳಲ್ಲಿ ಕೃಷಿ, ನೀರಾವರಿ, ವ್ಯಾಪಾರ ವಾಣಿಜ್ಯ, ಸಂಸ್ಕೃತಿ, ಯುದ್ಧಕಲೆ, ಪ್ರಾಚೀನ ವಿಜ್ಞಾನ ತಂತ್ರಜ್ಞಾನ ಹಾಗೂ ಇತ್ತೀಚಿನ ಅವಶ್ಯಕತೆಗಳಾದ ಪ್ರಾಚ್ಯಾವಶೇಷಗಳ ಸಂಗ್ರಹ (ಸಂಗ್ರಹಾಲಯ) ಮತ್ತು ಪ್ರದರ್ಶನಗಳು ಎಂಬ ಮುಂತಾದ ಲೇಖನಗಳಿವೆ. ಇವು ಮಹತ್ವದ ವಿಚಾರ ಮತ್ತು ಸಾಧ್ಯತೆಗಳನ್ನು ಚರ್ಚಿಸುವ ಪ್ರಯತ್ನ ಮಾಡಿವೆ.

ಕೈಗಾರಿಕೆಗಳು ದೊಡ್ಡ ಪ್ರಮಾಣದಲ್ಲಿ ಬೆಳೆದಿದ್ದರೂ, ನಮ್ಮ ದೇಶವು ಇಂದಿಗೂ ಕೃಷಿ ಪ್ರಧಾನ ರಾಷ್ಟ್ರವಾಗಿಯೇ ಪರಿಗಣಿಸಲ್ಪಟ್ಟಿದೆ. ಪ್ರಾಕೃತಿಕ ಹಾಗೂ ಮಾನವನು ಮಾಡಿರುವ ವೈಪರಿತ್ಯಗಳಿಂದ ಕಾಲಕಾಲಕ್ಕೆ ಮಳೆಯಾಗದೆ ಜೀವಮೂಲವಾದ ನೀರಿನ ಅಭಾವ ಉಂಟಾಗಿದೆ. ಹೀಗಾಗಿ ಬದುಕು ನಿತ್ಯವೂ ಅನೇಕ ವೈಫಲ್ಯಗಳ ಸರಮಾಲೆ ಎನಿಸಿಕೊಂಡಿದ್ದು, ಅದಕ್ಕೆ ಬೇಕಾಗಿರುವ ಮಾರ್ಗೋಪಾಯಗಳನ್ನು ಕಂಡುಕೊಳ್ಳಬೇಕಿದೆ. ಸಾವಿರಾರು ವರ್ಷಗಳ ದೀರ್ಘ ಇತಿಹಾಸವುಳ್ಳ ಕೃಷಿ ಚಟುವಟಿಕೆಗೆ ಅಂದಿನ ಜ್ಞಾನ ತಂತ್ರಜ್ಞಾನ ಬಳಸಿಕೊಂಡು ಸದಾಕಾಲ ಅವಶ್ಯಕವಾದ ನೀರು ಕೃಷಿಗೆ ಪೂರೈಕೆಯಾಗುವಂತೆ ಮಾಡಿರುವ ವಿಧಾನಗಳು ನಮ್ಮ ಪೂರ್ವಜರ ಬಹುದೃಷ್ಟಿಕೋನಕ್ಕೆ ಹಿಡಿದ ಕನ್ನಡಿಯಾಗಿದೆ. ಅವರು ಕಾಲ ಕಾಲಾಂತರದಿಂದ ಜತನದಿಂದ ಕಾಪಾಡಿಕೊಂಡು ಬಂದ ಕೆರೆ ಕುಂಟೆಗಳನ್ನು ಇಂದು ಪುನರ್ ರೂಪಿಸಿಕೊಂಡು ಬಳಸಿಕೊಳ್ಳುವ ಅವಶ್ಯಕತೆ ಇದೆ.

ಮಾನವನು ವೈಜ್ಞಾನಿಕವಾಗಿ ಎಷ್ಟೇ ಮುಂದುವರೆದಿದ್ದರೂ, ತನ್ನ ಅತಿಯಾದ ಆಸೆ ಆಕಾಂಕ್ಷೆಗಳಿಂದ, ಅವಘಡಗಳನ್ನು ಸಮಾನವಾಗಿ ತಂದುಕೊಂಡಿದ್ದಾನೆ. ವಿಜ್ಞಾನ ತಂತ್ರಜ್ಞಾನ ಪ್ರಗತಿಯ ಸೋಗಿನಲ್ಲಿ ಒಳಿತಗಿಂತ ಕೆಡಕುಗಳನ್ನು ಹೆಚ್ಚಾಗಿ ಎದುರಿಸುತ್ತಿದ್ದಾನೆ. ಕ್ಷಣಾರ್ಧದಲ್ಲಿ ಇಡೀ ವಿಶ್ವವನ್ನು ಒಂದೇ ಹೊಡೆತಕ್ಕೆ ನುಂಗಿಹಾಕುವ ದೈತ್ಯಾಕಾರದ ಅಸ್ತ್ರಗಳನ್ನು ತಯಾರಿಸಿಕೊಂಡಿದ್ದೇವೆ. ಅಂತಹ ಅಪಾಯಗಳ ಬಗೆಗೆ ಎಚ್ಚರವಹಿಸಿ ಗಂಭೀರವಾಗಿ ಚಿಂತಿಸುವ ತಾಳ್ಮೆ ಇಂದು ಬೇಕಾಗಿದೆ.

ಕರ್ನಾಟಕದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನಗಳ ಮರುಚಿಂತನೆಯ ವಿಚಾರಗಳನ್ನು ಹೊಂದಿರುವ ಈ ಗ್ರಂಥವು ಒಂದೇ ಏಟಿಗೆ ಎಲ್ಲವನ್ನು ಹೇಳಿ ಮುಗಿಸುವ ಸಾಹಸವನ್ನು ಮಾಡಿಲ್ಲ. ಅಂಥ ಹುಮ್ಮಸ್ಸು ನಮಗಿಲ್ಲ. ಕೊರತೆಗಳು ಬಿಟ್ಟ ಜಾಗಗಳು ಬೇಕಾದಷ್ಟಿವೆ ಎಂಬ ಎಚ್ಚರಿಕೆಯು ನಮಗಿದೆ. ಕೊನೆಯದಾಗಿ ಹೇಳಲೇ ಬೇಕಾಗಿರುವ ಮಾತಿವೆ. ಕರ್ನಾಟಕದ ಅಧ್ಯಯನ ಕ್ಷೇತ್ರಗಳಾದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಷಯಗಳು ಸಾಹಿತ್ಯ ಕ್ಷೇತ್ರದಂತೆ ಎಲ್ಲರನ್ನು ಎಲ್ಲ ಕಾಲಕ್ಕೂ ಮುಟ್ಟಲು ಸ್ವಲ್ಪ ಮಟ್ಟಿಗೆ ಸೋತಿವೆಯೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಏಕಮುಖ ವಿಚಾರಗಳು, ಸಿದ್ಧಾಂತಗಳು ನಿಜವನ್ನು ಅರ್ಥೈಸಲಾರವು. ಈ ಎಚ್ಚರಿಕೆಯನ್ನು ನಾವು ಮನಗಂಡು ಅಧ್ಯಯನಗಳನ್ನು ಮುಂದುವರಿಸಬೇಕಾಗಿದೆ. ವಿಷಯದ ವಿಮರ್ಶೆಯ ಜೊತೆಗೆ ಸ್ವವಿಮರ್ಶೆಯ ಪರಿಪಾಠವನ್ನು ಬೆಳೆಸಿಕೊಳ್ಳುವುದು ಉಪಯುಕ್ತ. ಪುರಾತತ್ವ ಹಾಗೂ ಇತಿಹಾಸಗಳನ್ನು ಒಂದು ವಿಚಾರ ಕ್ರಾಂತಿಯಾಗಿ ಬೆಳೆಸುವ ಜರೂರಿದೆ. ನೂರಾರು ವರ್ಷಗಳಿಂದ ಕಾಡುತ್ತ ಬಂದಿರುವ ಅಯೋಧ್ಯೆಯಂತಹ ಪ್ರಕರಣಗಳನ್ನು ನಿಷ್ಪಕ್ಷಪಾತವಾಗಿ ಹಾಗೂ ಮಾನವೀಯ ನೆಲೆಯಲ್ಲಿ ಪುರಾತತ್ವ ಅಧ್ಯಯನಕಾರರು ಗಮನಿಸಿ ಅದಕ್ಕೊಂದು ಶಾಶ್ವತ ತೆರೆ ಎಳೆಯಬೇಕಾಗಿದೆ. ಅದರಂತೆ ನಮ್ಮ ನಾಡಿನ ಬಾಬಾಬುಡನ್‌ಗಿರಿಯ ಗೊಂದಲಗಳಿಗೆ ಸೌಹಾರ್ದಯುತವಾದ ಪರಿಹಾರವನ್ನು ಇತಿಹಾಸ ಪುರಾತತ್ವಜ್ಞರು ತಮ್ಮ ಅಧ್ಯಯನಗಳಿಂದ ಬಿಡಿಸಿಡಬೇಕಾಗಿದೆ. ಪ್ರಾಚೀನ ಇತಿಹಾಸದಲ್ಲಿ ದಾಖಲಾದ ನಮ್ಮ ನಾಡಿನ ಭೌಗೋಳಿಕ ಮತ್ತು ಸಾಂಸ್ಕೃತಿಕ ಎಲ್ಲೆಗಳನ್ನು ಮನದಟ್ಟು ಮಾಡಿ ಗಡಿನಾಡಿನ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವ ಅವಶ್ಯಕತೆ ಇದೆ. ಭಾಷಿಕ ಮತ್ತು ಸಾಂಸ್ಕೃತಿಕ ಸಮೀಕರಣಗಳ ನೆಲೆಯಲ್ಲಿ ಇಂಥ ಸಮಸ್ಯೆಗಳನ್ನು ನಿರ್ವಚಿಸುವ ಮತ್ತು ಪರಿಹರಿಸುವ ಸಾಧ್ಯತೆಗಳನ್ನು ಪರಿಶೀಲಿಸಬೇಕಾಗಿದೆ. ಇತಿಹಾಸ ಮತ್ತು ಪುರಾತತ್ವ ವಿಷಯಗಳ ಅಂಗವಾದ ಚಿತ್ರಕಲೆ ಹಾಗೂ ಅದರ ವಿಮರ್ಶೆಗಳನ್ನು ಐರೋಪ್ಯ ರಾಷ್ಟ್ರಗಳು ವಿಚಾರ ಕ್ರಾಂತಿಯಾಗಿ ವಿಸ್ತರಿಸಿದವು. ಈ ವಿಮರ್ಶೆಗಳ ಮೂಲಕ ಅಂದಿನ ಸರ್ವಾಧಿಕಾರಿ ಮತ್ತು ದಮನ ಪ್ರವೃತ್ತಿಯನ್ನು ಬುಡಮೇಲು ಮಾಡುವ ಜೀವಸೆಲೆಯಾಗಿ ಕೆಲಸ ಮಾಡಿವೆ. ಆದರೆ ನಮ್ಮ ಚಿತ್ರಕಲೆಯ ಅಧ್ಯಯನ ಕೇವಲ ಅಡ್ಡ, ಉದ್ದ, ಗಿಡ್ಡ, ಎತ್ತರ, ಸರಳ, ವಕ್ರ ರೇಖೆಗಳ ಮಿಲನಗಳಲ್ಲಿ ವಿಹರಿಸಿ ಮುಳುಗೇಳುವ ಕೆಲಸ ಮಾತ್ರ ಮಾಡಿದೆ. ಇದನ್ನೂ ಸೂಕ್ತ ದಿಕ್ಕಿಗೆ ಕೊಂಡೊಯ್ಯುವ ಪ್ರಯತ್ನ ಅವಶ್ಯಕತೆಯಿದೆ.

ಅಡಿಟಿಪ್ಪಣಿಗಳು

೧. H.Butterfield: History of Human Relations 1951, p.160.

೨. ಅದೇ ಪು.೧೬೫.

೩. ಅದೇ ಪು.೧೮೨.

೪. E.S.Turner: A history of courting-1955. p.No.18.

೫. ಅದೇ ಪು. ೨೨

೬. ಅದೇ ಪು.೪೧.

೭. ಅದೇ ಪು.೪೫

೮. ಎಂ.ಬಿ.ಪದ್ಮಾ ವೆಂಕಟರತ್ನಂ, ಇತಿಹಾಸ ಸಂಶೋಧನಾ ಮಾರ್ಗ, ಮೂರ್ತಿ ಬುಕ್ ಹೌಸ್, ಪುಟ.೩೨

೯. ಅದೇ ಪುಟ.೪೧

೧೦. ಅದೇ.೨೩೧

೧೧. (ಸಂ) ರಮೇಶ ನಾಯಕ, ಕರ್ನಾಟಕ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನಗಳ ಮರುಚಿಂತನೆ ಪು.೪

೧೨. ಅದೇ ಪುಟ.೬

೧೩. ಅದೇ ಪುಟ.೬

೧೪. ಅದೇ ಪುಟ.೧೦

೧೫. ಅದೇ ಪುಟ. ೯

೧೬. ಚರಿತ್ರೆ ವಿಶ್ವಕೋಶ-೦೪ (ಸಂ)ತಬಂಡ ವಿಜಯ್ ಪೂಣಚ್ಚ ಪುಟ.೮

೧೭. ಅದೇ ಪುಟ. ೯

೧೮. ಅದೇ ಪುಟ. ೯

೧೯. ಅದೇ ಪುಟ. ೧೦

ಅಧ್ಯಾಯ ೨

ವಸಾಹತು ಮತ್ತು ವಸಾಹತೋತ್ತರ ಕಾಲದಲ್ಲಿ ರಚನೆಯಾದ ಕೃತಿಗಳ ವಿಶ್ಲೇಷಣೆ

ವಸಾಹತು ಮತ್ತು ವಸಾಹತೋತ್ತರ ಕಾಲದಲ್ಲಿ ರಚನೆಯಾದ ಕೃತಿಗಳ ವಿಶ್ಲೇಷಣೆ

೨.೧.ಚಾರಿತ್ರಿಕ ಕೃತಿಗಳು (೧೮ನೇ ಶತಮಾನದ)

ಶಿಲಾಯುಗ: ಕರ್ನಾಟಕ ಪ್ರದೇಶದಲ್ಲಿ ಪ್ರಾಚೀನ ಆದಿ ಹಳೆಯ ಶಿಲಾಯುಗದ ಮಾನವನ ಸ್ಥಳಗಳು ಮತ್ತು ಬಳಸಿದ ಉಪಕರಣಗಳು ದೊರೆತಿವೆ. ಅವು ಆದಿ ಮಾನವನ ಜನಜೀವನದ ಕೆಲವು ವಿಚಾರಗಳ ಮೇಲೆ ಬೆಳಕು ಚೆಲ್ಲುವಲ್ಲಿ ಯಶಸ್ವಿಯಾಗಿವೆ. ಕರ್ನಾಟಕ ಪ್ರದೇಶದಲ್ಲಿ ದೊರೆತ ಹಳೆಯ ಶಿಲಾಯುಗದ ಮಾನವ ನೆಲೆಗಳ ಬಗೆಗೆ ಮೊದಲಿಗೆ ಗೆಜಿಟಿಯರ್‌ನಲ್ಲಿ ಕಾಣಬಹುದಾಗಿದೆ. ಗೆಜಿಟಿಯರ್‌ನಲ್ಲಿ ಕೆಲವು ಸ್ಥಳಗಳನ್ನು ಮಾತ್ರ ಹೆಸರಿಸಲಾಗಿದೆ. ನಂತರ ಬಂದಂತಹ ಅನೇಕ ಪುಸ್ತಕಗಳಲ್ಲಿ ಈ ಬಗೆಯ ಮಾದರಿಗಳನ್ನು ನೋಡಬಹುದು. ಈ ಪ್ರದೇಶದಲ್ಲಿ ಆದಿಮಾನವ ವಾಸಿಸುತ್ತಿದ್ದ ಕಾಲದಲ್ಲಿ ಬಳಸಿದ ಮರ ಅಥವಾ ಕಟ್ಟಿಗೆಯ ಬಗೆಗೆ ಅನೇಕ ವಿವರಗಳು ತಿಳಿದುಬರುತ್ತದೆ. ನಂತರ ೨೦೦೧ರಲ್ಲಿ ಕೆ.ಬಿ. ಶಿವತಾರಕೆ ಅವರು ಬರೆದ 'ಕರ್ನಾಟಕದ ಪುರಾತತ್ವ ನೆಲೆಗಳು' ಕೃತಿಯಲ್ಲಿ ಕರ್ನಾಟಕದ ಪ್ರದೇಶದಲ್ಲಿದೊರೆತ ಆದಿಮಾನವನ ನೆಲೆಗಳ ವಿವರಗಳನ್ನು ನೀಡಿದ್ದಾರೆ. ರಾಜ್ಯದಲ್ಲಿ ಪ್ರಪ್ರಥಮವಾಗಿ ರಾಬರ್ಟ್ ಬ್ರೂಸ್‌ಫೂಟ್ ಹೆಚ್ಚಾಗಿ ಸರ್ವೇಕ್ಷಣ ಮಾಡಿದ್ದಾರೆ ಹಾಗೂ ಶಿಲಾಯುಗದ ಮಾನವನು 'ಪ್ರೋಟೋ ಅಸ್ಟ್ರಲಾಯಿಡ್ ಮತ್ತು ಮೆಡೆಟೀರಿನಿಯನ್' ನಾಂಗಕ್ಕೆ ಸೇರಿದವರೆಂದು ಇವರ ಸಂಶೋಧನೆಯಿಂದ ತಿಳಿದುಬರುತ್ತದೆ.

ಪುರಾಣಗಳ ಕಾಲ: ಆದಿ ಮಾನವನ ಕಾಲದ ನೆಲೆಗಳು ಕರ್ನಾಟಕದ ಪ್ರದೇಶದಲ್ಲಿ ದೊರೆಕಿವೆ. ಅದರಂತೆ ಐತಿಹಾಸಿಕ ಸ್ಥಳ ಹಂಪಿಯು ಪುರಾಣ ಕಾಲದಲ್ಲಿ ಪ್ರಸಿದ್ಧಿಯನ್ನು ಪಡೆದಿತ್ತು. ಪುರಾಣ ಕಾಲದಲ್ಲಿ ಹಂಪಿ ಪ್ರದೇಶವನ್ನು ಕಿಷ್ಕಿಂಧೆಯೆಂದು ವಾಲಿ ಸುಗ್ರೀವರ ಸ್ಥಳ, ಪರಮೇಶ್ವರನ ಸ್ಥಳವೆಂತಲೂ ಕರೆಯಲಾಗುತ್ತಿತ್ತು. ಪುರಾಣಗಳು ಈ ಪ್ರದೇಶವನ್ನು ಪಂಪಾತೀರ್ಥ, ಪಂಪಾಕ್ಷೇತ್ರ ಎಂಬ ಹೆಸರುಗಳಿಂದ ಕರೆಯಲ್ಪಟ್ಟಿವೆ. ಹಂಪಿ ಪ್ರದೇಶದ ಬಗೆಗೆ ಈಗಲೂ ಸಹ ಅನೇಕ ಪುರಾಣ ಐತಿಹ್ಯಗಳು ಪ್ರಚಲಿತದಲ್ಲಿವೆ. ಇದನ್ನು ಬಳ್ಳಾರಿ ಪ್ರದೇಶವನ್ನು ಆಧಾರವಾಗಿಟ್ಟುಕೊಂಡು ರಚನೆಯಾದ ಬಹುತೇಕ ಎಲ್ಲಾ ಕೃತಿಕಾರರು ತಮ್ಮ ವಿವರಣೆಯಲ್ಲಿ ನೀಡಿದ್ದಾರೆ. ಇದನ್ನು ಮೊದಲು ರಚನೆಯಾದ ಗೆಜೆಟಿಯರ್‌ಗಳಿಂದ ಆರಂಭವಾಗಿ ಇತ್ತೀಚಿನತನಕ ರಚಿತವಾದ ಕೃತಿಗಳಲ್ಲಿ ವಿದ್ವಾಂಸರು ವಿವರಿಸುತ್ತಾ ಬಂದಿದ್ದಾರೆ. ಬಳ್ಳಾರಿ ಪ್ರದೆಶದ ಆರಂಭದ ರಾಜಕೀಯ ಚರಿತ್ರೆಯನ್ನು ಕ್ರಿ.ಶ. ೧೧೪೭ರ ಕೋಳೂರಿನ ಶಾಸನ ಮತ್ತು ೧೦ರಿಂದ ೧೩ನೇ

ಶತಮಾನದ ಶಾಸನಗಳ ಮೂಲಕ ನೋಡಲು ಪ್ರಯತ್ನಿಸಬಹುದು. ಬಳ್ಳಾರಿ ಪ್ರದೇಶದಲ್ಲಿ ಆಳ್ವಿಕೆನಡೆಸಿದ ಮೊದಲ ರಾಜವಂಶ ನಂದರು.

ಪ್ರಾಚೀನ ರಾಜಕೀಯ ಚರಿತ್ರೆ

ನಂದರು: ಕುಂತಳ ರಾಜ್ಯದ ಅಧಿಪತ್ಯವನ್ನು ವಶಪಡಿಸಿಕೊಂಡಿದ್ದ ನಂದರು ಕರ್ನಾಟಕ ಪ್ರದೇಶದಲ್ಲಿ ಆಳ್ವಿಕೆ ನಡೆಸಿದರು. ಪುರಾಣಗಳು ಕುಂತಳ ರಾಜ್ಯಕ್ಕೆ ನಂದರು ಅಧಿಪತಿಗಳಾಗಿದ್ದರೆಂದು ಹೇಳುತ್ತವೆ. ಸುಮಾರು ಕ್ರಿ.ಪೂ. ೪ನೇ ಶತಮಾನದಲ್ಲಿ ನಂದರು ಕ್ರಿ.ಶ. ೧೪೭೮ರ ಕೋಳೂರಿನ ಶಾಸನವನ್ನು ಆಧಾರವಾಗಿ ನೀಡುತ್ತಾರೆ. ನಂತರ ನಂದರ ಆಳ್ವಿಕೆ ಸುಮಾರು ಕ್ರಿ.ಪೂ. ೩೨೫-೩೨೦ರ ನಡುವಿನ ಅವಧಿಯಲ್ಲಿ ಕೊನೆಗೊಂಡಿತು. ಕ್ರಿ.ಪೂ. ೪ನೇ ಶತಮಾನದ ಇತಿಹಾಸದ ವಿವರಗಳು ಕ್ರಿ.ಶ. ೧೦ರಿಂದ ೧೩ನೇ ಶತಮಾನದಲ್ಲಿ ಸಿಕ್ಕಿರುವ ಶಾಸನಗಳಲ್ಲಿ ವಿವರಿಸಲ್ಪಟ್ಟಿವೆ. ನಂದರ ಆಳ್ವಿಕೆಯ ಸುಮಾರು ೧೫ರಿಂದ ೧೭ನೇ ಶತಮಾನಗಳ ನಂತರ ಶಾಸನ ಆಧಾರಗಳು ರಚನೆಯಾಗಿವೆ. ನಂದರ ಸಮಕಾಲೀನ ಆಧಾರಗಳು ಕುಂತಳ ರಾಜ್ಯದ ಕರ್ನಾಟಕದಲ್ಲಿ ಹೆಚ್ಚಾಗಿ ದೊರಕಿಲ್ಲ. ದೊರಕಿರುವ ಪರೋಕ್ಷ ದಾಖಲೆಗಳಿಂದ ಕರ್ನಾಟಕ ಪ್ರದೇಶದಲ್ಲಿ ನಂದರು ಆಳ್ವಿಕೆ ನಡೆಸಿದರೆಂದು ತಿಳಿಯ ಬಹುದಾಗಿದೆ. ಇದನ್ನು ಬಹುತೇಕ ಎಲ್ಲಾ ವಿದ್ವಾಂಸರು ಒಪ್ಪಿಕೊಂಡಿದ್ದಾರೆ.

ಮೌರ್ಯರು

ನಂದರನ್ನು ಅಧಿಕಾರದಿಂದ ತೆಗೆದು ಹಾಕಿ ಮೌರ್ಯರು ಕ್ರಿ.ಪೂ. ಸುಮಾರು ೩೨೨ರ ವೇಳೆಗೆ ಅಧಿಕಾರಕ್ಕೆ ಬಂದರು. ಕರ್ನಾಟಕವು ಮೌರ್ಯರ ಆಳ್ವಿಕೆಗೆ ಒಳಪಟ್ಟಿತ್ತು. ಚಂದ್ರಗುಪ್ತ ಮೌರ್ಯನು ತನ್ನ ಅಂತಿಮ ಕಾಲದಲ್ಲಿ ತನ್ನ ಜೈನಗುರು ಭದ್ರಬಾಹುವಿನೊಂದಿಗೆ ಶ್ರವಣಬೆಳಗೊಳಕ್ಕೆ ಬಂದು ಸಲ್ಲೇಖನ ವ್ರತವನ್ನು ಆಚರಿಸಿದನು. ಇದನ್ನು ಕ್ರಿ.ಶ. ೬೧೨ ಮತ್ತು ೧೫ನೇ ಶತಮಾನದ ಕಾಲದ ಶಾಸನಗಳು ತಿಳಿಸುತ್ತವೆ. ಕರ್ನಾಟಕದ ಅನೇಕ ಜಿಲ್ಲೆಗಳಲ್ಲಿ ದೊರಕಿರುವ ಶಾಸನಗಳನ್ನು ಆಧಾರಿಸಿ ಈ ಪ್ರದೇಶ ಮೌರ್ಯರ ಒಳಪಟ್ಟಿತ್ತೆಂದು ತಿಳಿದುಬರುತ್ತದೆ. ಇದನ್ನೇ ವಾಸುದೇವ ಬಡಿಗೇರ ತಮ್ಮ 'ಸಂಡೂರು ಪರಿಸರದ ಕಾರ್ತಿಕೇಯ ತಪೋವನ' ಮೂಲ ಬಳ್ಳಾರಿ ಪ್ರದೇಶದೆಂದು ಹೇಳಿದ್ದಾರೆ.[೧] ಶಾತವಾಹನರ ಆಡಳಿತ ಕಾಲದಲ್ಲಿ ಈ ಪ್ರದೇಶವು ಆಡಳಿತ ವಿಭಾಗದ ಒಂದು ಪ್ರಾಂತವಾಗಿತ್ತು. ಇದನ್ನು ಗೆಜೆಟಿಯರ್‌ನಲ್ಲಿ ತಿಳಿಸಲಾಗಿದೆ. ಗೆಜೆಟಿಯರ್‌ನಂತಹ ಬಂದಂತಹ ಎಲ್ಲಾ ಕೃತಿಗಳು ಮತ್ತು ಕೃತಿಕಾರರು ಇದನ್ನೇ ಹೇಳಿದ್ದಾರೆ. ಕುಂಬಾಸ ಅವರು ರಾಷ್ಟ್ರಕೂಟರು ಕನ್ನಡ ಪ್ರದೇಶದವರೆಂದು ಮಾತ್ರ ತಿಳಿಸಿದ್ದಾರೆ. ಕರ್ನಾಟಕ ಕೆಲವು ಭಾಗಗಳು ಶಾತವಾಹನ ಆರಂಭಿಕ ಅರಸರ ಕಾಲಕ್ಕೆ ಒಳಪಟ್ಟಿರಲಿಲ್ಲ ಎಂಬುದಾಗಿ ಗೆಜೆಟಿಯರ್‌ನಲ್ಲಿ ತಿಳಿಸಲಾಗಿದೆ. ನಾಗಯ್ಯ ಮತ್ತು ಕುಂಬಾಸ ಅವರು ಬಳ್ಳಾರಿ ಪ್ರದೇಶ ಶಾತವಾಹನರ ಆಳ್ವಿಕೆಯ ಆರಂಭದಿಂದಲೂ ಆಳ್ವಿಕೆ ಒಳಪಟ್ಟಿತು ಎಂಬುದಾಗಿ ಹೇಳುತ್ತಾರೆ. ಕರ್ನಾಟಕ ಪ್ರದೇಶ ಶಾತವಾಹನರ ಆಳ್ವಿಕೆ ಒಳಪಟ್ಟಿದ್ದನ್ನು ಇದನ್ನು ಆದೋನಿ ತಾಲ್ಲೂಕಿನ ಮ್ಯಾಕ್ ದೋಣಿ ಮತ್ತು ಹಿರೇಹಡಗಲಿ ತಾಮ್ರ

ಶಾಸನಗಳಿಂದ ತಿಳಿದುಬರುತ್ತದೆ ಎಂದು ನಾಗಯ್ಯ ಅವರು ತಿಳಿಸುತ್ತಾರೆ. ಕೆಲವು ಶಾಸನಗಳಲ್ಲಿ ಶಾತವಾಹನರನ್ನು ಕುಂತಳ ಸ್ವಾಮಿಗಳೆಂದು ಕರೆಯಲಾಗಿದೆ. ಶಾತವಾಹನರ ಆರಂಭಿಕ ಅರಸರ ಕಾಲದಲ್ಲಿ ಮತ್ತು ಪ್ರಮುಖ ದೊರೆ ಗೌತಮೀಪುತ್ರ ಶಾತಕರ್ಣಿಯ ಕಾಲದಲ್ಲಿ ಬಳ್ಳಾರಿ ಪ್ರದೇಶ ಶಾತವಾಹನ ಅರಸರ ಆಳ್ವಿಕೆಗೆ ಒಳಪಟ್ಟಿರಲಿಲ್ಲ ಎಂದು ಅಭಿಪ್ರಾಯ ಪಡಬಹುದು. ಕುಂತಳಾ ಶಾತಕರ್ಣಿ ಮತ್ತು ಹಾಲ ಕರ್ನಾಟಕ ಪ್ರದೇಶದಲ್ಲಿ ಆಳ್ವಿಕೆ ನಡೆಸಿದ್ದಾರೆ. ಹಾಲನು ಕುಂತಳ ಅಧಿಪತಿಯೆಂದು ಗಾಥ ಸಪ್ತಸತಿಯಲ್ಲಿ ಹೇಳಲಾಗಿದೆ. ಪುರಾಣಗಳು ಗೌತಮಿ ಪುತ್ರ ಶಾತಕರ್ಣಿ ಕುಂತಳ ಪ್ರದೇಶದಲ್ಲಿ ಆಳ್ವಿಕೆ ನಡೆಸಿದನೆಂದು ವರ್ಣಿಸಿವೆ ಎಂದು ನಾಗಯ್ಯ ಮತ್ತು ಕುಂಬಾಸ ಅವರು ತಿಳಿಸುತ್ತಾರೆ. ಆದರೂ ಸಹ ಶಾತವಾಹನರ ಆರಂಭದ ಅರಸರ ಕಾಲದಲ್ಲಿ ಕರ್ನಾಟಕದ ಯಾವ ಪ್ರದೇಶ ಆಳ್ವಿಕೆಗೆ ಒಳಪಟ್ಟಿತ್ತೇ ಅಥವಾ ಇಲ್ಲವೆ ಎಂಬುದನ್ನು ನಿರ್ಧರಿಸಲು ಕಷ್ಟಕರವಾಗಿದೆ. ಶಾತವಾಹನರ ಕೊನೆಯ ಅರಸರಲ್ಲಿ ಒಬ್ಬರಾದ ಪುಲು ಮಾಯಿಗೆ ಸೇರಿದ ಶಾಸನ ಬಳ್ಳಾರಿ ಪ್ರದೇಶದಲ್ಲಿ ದೊರಕಿದೆ. ಪುರಾಣಗಳು, ಗಾಥಸಪ್ತಸತಿ ಮತ್ತು ಪುಲು ಮಾಯಿಯ ಶಾಸನಗಳಿಂದ ಬಳ್ಳಾರಿ ಪ್ರದೇಶದಲ್ಲಿ ಶಾತವಾಹನರು ಆಳ್ವಿಕೆ ನಡೆಸಿದರೆಂದು ತಿಳಿದುಬರುತ್ತದೆ.

ಶಾತವಾಹನರ ಕೊನೆಯ ದೊರೆಯಾದ ಪುಲುಮಾಯಿಯ ಶಾಸನಗಳು ದೊರಕಿರುವುದನ್ನು ಗೆಜೆಟಿಯರು ಒಳಗೊಂಡ ಎಲ್ಲಾ ವಿದ್ವಾಂಸರು ಹೇಳಿದ್ದಾರೆ. ವಾಸುದೇವ ಬಡಿಗೇರ ಅವರು ಶಾತವಾಹನರ ಕಾಲದ ಅವಶೇಷಗಳು ಚೋರನೂರು, ಅಗ್ರಹಾರ, ಕೂಡ್ಲಿಗಿ, ಕುಡಿತಿನಿ, ಹಾಳುದೇವಲಾಪುರ, ಕೊಟ್ಟೂರು, ಹೆಗ್ಗಡ ಹಾಳು, ಶಿವಪುರ, ಹಂಪಿ, ಕುರುಗೋಡು, ಎಮ್ಮಿಗನೂರು, ಕಂಪ್ಲಿ, ಬಳ್ಳಾರಿ, ಸಿದ್ಧಾಪುರ, ಬ್ರಹ್ಮಗಿರಿ, ಕೋಗಳಿ ಸ್ಥಳಗಳಲ್ಲಿ ಕಂಡಬರುತ್ತವೆ ಎಂದು ತಿಳಿಸಿದ್ದಾರೆ.[೨]

ಬಳ್ಳಾರಿ ಪ್ರದೇಶದ ಕ್ರಿ.ಶ. ೧೧೪೭ರ ಕೋಳೂರಿನ ಶಾಸನವು ಮೌರ್ಯರ ಆಳ್ವಿಕೆಯನ್ನು ಸಮರ್ಥಿಸುತ್ತವೆ. ಅನೇಕ ವಿದ್ವಾಂಸರು ಇದನ್ನೇ ಸಮರ್ಥಿಸುತ್ತಾ ಬಳ್ಳಾರಿ ಪ್ರದೇಶದಲ್ಲಿ ದೊರಕಿದ ನಿಟ್ಟೂರು ಮತ್ತು ಉದಯಗೊಳ್ಳಂನಲ್ಲಿ ಅಶೋಕನ ಶಾಸನಗಳ ಬಗೆಗೆ ತಿಳಿಸಿದ್ದಾರೆ. ಚಂದ್ರಗುಪ್ತನ ನಂತರ ಬಿಂದುಸಾರ ಅಧಿಕಾರಕ್ಕೆ ಬಂದನು. ಬಿಂದುಸಾರನ ನಂತರ ಕ್ರಿ.ಪೂ. ೨೭೩ರಲ್ಲಿ ಮೌರ್ಯರ ಶ್ರೇಷ್ಠ ದೊರೆ ಎಂದು ಪ್ರಸಿದ್ಧನಾದ ಅಶೋಕನು ಅಧಿಕಾರಕ್ಕೆ ಬಂದನು. ಅಶೋಕನ ಕಾಲದ ೧೭ ಶಾಸನಗಳು ಕರ್ನಾಟಕದಲ್ಲಿ ದೊರಕಿವೆ. ಕರ್ನಾಟಕದ ಮಸ್ಕಿ, ಜಟ್ಟಿಂಗ ರಾಮೇಶ್ವರ, ಕೊಪ್ಪಳ, ಸನ್ನತಿ ಇತರೆ ಅನೇಕ ಸ್ಥಳಗಳಲ್ಲಿ ಅಶೋಕನ ಶಾಸನಗಳು ದೊರಕಿವೆ. ಅಶೋಕನ ದಕ್ಷಿಣ ಪ್ರಾಂತ್ಯವು ಸುವರ್ಣಗಿರಿಯಾಗಿತ್ತು. ಸುವರ್ಣಗಿರಿಯ ಪ್ರಾಂತ್ಯಾಧಿಕಾರಿ ಇಸಿಲದ ಧರ್ಮ ಮಹಾಮಾತ್ರರಿಗೆ ರಾಜನ ಆಜ್ಞೆಗಳನ್ನು ಕಳುಹಿಸುತ್ತಿದ್ದನು. ಆದ್ದರಿಂದ ಕರ್ನಾಟಕದ ಅನೇಕ ಭಾಗವು ಮೌರ್ಯರ ಆಳ್ವಿಕೆಗೆ ಒಳಪಟ್ಟಿತ್ತು ಎಂಬುದು ತಿಳಿಯಬಹುದಾಗಿದೆ.

[illegible]

ಕ್ರಿ.ಶ. ೧೯೦೫ರಲ್ಲಿ ರಚಿತವಾದ ಸೂರ್ಯ ನಾರಾಯಣರವರ ಕೃತಿಯಾದ 'ಎಂದೂ ಮರೆಯದ ವಿಜಯನಗರ ಸಾಮ್ರಾಜ್ಯ' ಎಂಬ ಕೃತಿಯನ್ನು ಬಾಲಸುಬ್ರಹ್ಮಣ್ಯಂ ಕನ್ನಡಕ್ಕೆ ಅನುವಾದಿಸಿ, ದಕ್ಷಿಣ ಭಾರತ ಮೌರ್ಯರ ಆಡಳಿತಕ್ಕೆ ಒಳಪಟ್ಟಿತೇ ಎಂಬ ಪ್ರಶ್ನೆಯನ್ನು ಮುಂದಿಡುತ್ತಾರೆ. ಏಕೆಂದರೆ ಅಶೋಕ ತನ್ನ ಶಾಸನಗಳಲ್ಲಿ ದಕ್ಷಿಣದಲ್ಲಿ ಸ್ಥೂಪಗಳನ್ನು ನಿರ್ಮಿಸುವಾಗ ಸ್ಥಳೀಯ ಅರಸರ ನೆರವನ್ನು ಪಡೆದನು ಹಾಗೂ ಸ್ಥಳೀಯ ಅರಸರು ಸ್ವತಂತ್ರರಾಗಿದ್ದರು ಎಂಬ ವಾದವನ್ನು ಮಂಡಿಸುತ್ತಾರೆ. ಆದ್ದರಿಂದ ದಕ್ಷಿಣ ಭಾರತ ಅಶೋಕನ ಆಳ್ವಿಕೆಗೆ ಒಳಪಟ್ಟಿತೇ ಅಥವಾ ದಕ್ಷಿಣದ ರಾಜಮನೆತನಗಳಾದ ಪಾಂಡ್ಯ ಮತ್ತು ಚೇಳರ ಆಳ್ವಿಕೆಗೆ ಒಳಪಟ್ಟಿತೇ ಎಂಬುದು ಸ್ಪಷ್ಟವಾಗಿ ತಿಳಿದುಬರುವುದಿಲ್ಲ. ಇದರ ಬಗೆಗೆ ಬಹುತೇಕ ಎಲ್ಲಾ ಇತಿಹಾಸಕಾರರು ಮತ್ತು ವಿದ್ವಾಂಸರು ಮೌನವಾಗಿದ್ದಾರೆ.

ಶಾತವಾಹನರು

ಮೌರ್ಯರ ನಂತರ ದಕ್ಷಿಣ ಭಾರತದಲ್ಲಿ ಶಾತವಾಹನರು ಏಳಿಗೆಗೆ ಬಂದರು ಇವರು ಸುಮಾರು ೪೧೦ ವರ್ಷಗಳ ಕಾಲ ಆಳ್ವಿಕೆ ನಡೆಸಿದರು. ಶಾತವಾಹನರು ಮಹಾರಾಷ್ಟ್ರದ ಪೈಥಾಣ ಅಥವಾ ಪ್ರತಿಷ್ಠಾನವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಅಧಿಕಾರಕ್ಕೆ ಬಂದರು. ಶಾತವಾಹನರ ಪ್ರಮುಖ ದೊರೆಗಳೆಂದರೆ ಕುಂತಳ ಶಾತಕರ್ಣಿ ಹಾಲ ಮತ್ತು ಶಾತಕರ್ಣಿ ಪ್ರಮುಖರು ಶಾತವಾಹನರ ಮೂಲದ ಬಗೆಗೆ ಅನೇಕ ವಾದಗಳಿವೆ. ಕೆಲವು ಇತಿಹಾಸಕಾರರು ಕರ್ನಾಟಕ ಶಾತವಾಹನರ ಮೂಲವೆಂದು ವಾದಿಸಿದ್ದಾರೆ. ಡಾ. ಸುಕುಂಥಕರ ಪ್ರಕಾರ ಶಾತವಾಹನರ ಕೆಲಕಾಲ ಸಾಮಂತರಾಗಿ ಆಳ್ವಿಕೆ ನಡೆಸಿದರೆಂದು ಆಧಾರಗಳು ತಿಳಿಸುತ್ತವೆ.

ಪುರಾಣಗಳಲ್ಲಿ ಶಾತವಾಹನರನ್ನು ಆಂಧ್ರರೆಂದು ಅಥವಾ ಆಂಧ್ರಭೃತ್ಯರೆಂದು ಕರೆಯಲಾಗಿದೆ. ಆದ್ದರಿಂದ ಶಾತವಾಹನರನ್ನು ಆಂಧ್ರ ರಾಜರುಗಳಿಗೆ ಕೆಲಕಾಲ ಸಾಮಂತರಾಗಿ ಆಳ್ವಿಕೆ ನಡೆಸಿದರೆಂದು ತಿಳಿದುಬರುತ್ತದೆ. ಆಂಧ್ರದ ನೆಲೆಯಲ್ಲಿಯೇ ಇರುವಂತಹ ಬಳ್ಳಾರಿ ಪ್ರದೇಶದಲ್ಲಿ ಆಂಧ್ರ ರಾಜರುಗಳ ಸಾಮಂತರಾಗಿ ಶಾತವಾಹನರು ಆಳ್ವಿಕೆ ನಡೆಸಿರಬಹುದು.[೩] ಶಾತವಾಹನರು ಯಾವ ಆಂಧ್ರ ರಾಜರುಗಳ ಸಾಮಂತರಾಗಿದ್ದರೆಂಬುದು ತಿಳಿದುಬರುವುದಿಲ್ಲ. ಶಾತವಾಹನರ ಮೇಲೆ ಬೆಳಕು ಚೆಲ್ಲುವ ದಾಖಲೆಗಳು ಬಳ್ಳಾರಿ ಪ್ರದೇಶದಲ್ಲಿ ವಿರಳ. ಸಿಗುವ ಅಲ್ಪ ದಾಖಲೆಗಳಿಂದಲೇ ಬಳ್ಳಾರಿ ಪ್ರದೇಶ ಶಾತವಾಹನರ ಆಳ್ವಿಕೆಗೆ ಒಳಪಟ್ಟಿತ್ತು ಎಂದು ತಿಳಿಯಬಹುದಾಗಿದೆ.

ಕದಂಬರು

ಕದಂಬರು ಬನವಾಸಿಯನ್ನು ರಾಜಧಾನಿಯಾಗಿ ಮಾಡಿಕೊಂಡು ಅಧಿಕಾರಕ್ಕೆ ಬಂದರು. ಆದ್ದರಿಂದ ಇವರನ್ನು ಬನವಾಸಿ ಕದಂಬರು ಎಂದು ಕರೆಯಲಾಗಿದೆ. ಕದಂಬರ ಸ್ಥಾಪಕ ದೊರೆ ಮಯೂರ ಶರ್ಮ ಕದಂಬರು ಕನ್ನಡದ ಮೊದಲ ರಾಜವಂಶ ಮತ್ತು ಕನ್ನಡಿಗರು ಎಂಬ ಕೀರ್ತಿಗೆ ಪಾತ್ರರಾಗಿದ್ದಾರೆ. ಕದಂಬರ ಪ್ರಮುಖ ಅರಸರೆಂದರೆ ಮಯೂರಶರ್ಮ ಮತ್ತು ಕಾಕುತ್ಸವರ್ಮ. ಮಯೂರಶರ್ಮನ

ಚಂದ್ರವಳ್ಳಿ ಶಾಸನದ ಪ್ರಕಾರ ಮಯೂರವರ್ಮನು ಸಾತವಹಾನಿ ರಾಷ್ಟ್ರದ ಶೇಂದ್ರಕ ವಿಷಯವನ್ನು ಆಳ್ವಿಕೆ ಮಾಡಿದುದಾಗಿ ಈ ಕಾರಣದಿಂದಾಗಿ ಆದ್ದರಿಂದ ಕದಂಬರು ಬಳ್ಳಾರಿ ಪ್ರದೇಶದ ಮೇಲೆ ಆರಂಭದಿಂದಲೂ ಪ್ರಭುತ್ವ ಸ್ಥಾಪಿಸಿದ್ದರು. ಬಳ್ಳಾರಿ ಪ್ರದೇಶದ ಉಚ್ಚಂಗಿ ಪ್ರಾಂತ್ಯವು ಕದಂಬರ ರಾಜ್ಯದ ಪೂರ್ವ ಪ್ರಾಂತ್ಯದ ರಾಜಧಾನಿಯಾಗಿತ್ತು ಎಂದು ನಾಗಯ್ಯ ಮತ್ತು ಕುಂಬಾಸ ಅವರು ಉಚ್ಚಂಗಿ ಪ್ರಾಂತ್ಯವು ಆಡಳಿತದ ಒಂದು ಪ್ರಮುಖ ವಿಭಾಗ ವಾಗಿತ್ತೆಂದು ಹೇಳುತ್ತಾರೆ. ಕದಂಬರ ಆಳ್ವಿಕೆಗೆ ಒಳಪಟ್ಟಿದ್ದ ಪ್ರದೇಶವನ್ನು 'ಕದಂಬಳಿಕೆ ನಾಡು' ನಂತರ 'ಕದಂಬಳಿಕೆ ಸಾಸಿರ'ವೆಂದು ಕರೆಯಲಾಗಿದೆ. ಕಾಕುತ್ಸವರ್ಮನ ಕಾಲದಲ್ಲಿ ಆತನ ಮಗ ಕುಮಾರವರ್ಮ ಉಚ್ಚಂಗಿ ದುರ್ಗದಲ್ಲಿ ಆಳ್ವಿಕೆ ನಡೆಸುತ್ತಿದ್ದನು. ಬಹುಶಃ ಕದಂಬಳಿಕೆ ನಾಡನ್ನು ಉಚ್ಚಂಗಿಯಿಂದ ಆಳ್ವಿಕೆ ನಡೆಸುತ್ತಿರಬಹುದು. ನಂತರ ಶಿವರಥನು ಉಚ್ಚಂಗಿ ಮಾಂಡಲಿಕನಾಗಿ ಆಳ್ವಿಕೆ ನಡೆಸಿದರು ಎಂದು ಆಧಾರಗಳು ತಿಳಿಸುತ್ತವೆ.

ಚಾಲುಕ್ಯರು ಬಾದಾಮಿಯಲ್ಲಿ ಪ್ರಾಬಲ್ಯಕ್ಕೆ ಬಂದಂತೆ ಕದಂಬರು ಅಧಿಕಾರದಿಂದ ತೆರೆ ಮರೆಗೆ ಸರಿದರು. ಆದರೂ ಕೆಲವು ಪ್ರದೇಶಗಳಲ್ಲಿ ಬೇರೆ ಅರಸರುಗಳ ಕಾಲದಲ್ಲಿ ಮಾಂಡಲೀಕರಾಗಿ ಮುಂದುವರಿದರು. ಕ್ರಿಶ. ೩೮೭ ಬಾಗಳಿ ಶಾಸನದ ಪ್ರಕಾರ ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ಅಯ್ಯುವರ್ಮನು ಕೋಗಳಿಯಲ್ಲಿ ಆಳ್ವಿಕೆ ನಡೆಸಿದನು. ಕ್ರಿ.ಶ. ೧೦೭೧ರ ಹಡಗಲಿ ಶಾಸನದ ಪ್ರಕಾರ ಘಟ್ಟಿಯರಸನು ಮಹಾ ಮಂಡಳೇಶ್ವರನಾಗಿ ಬಡತಿಹೊಂದಿ ಕೊಟ್ಟೂರಿನಿಂದ ಆಳ್ವಿಕೆ ನಡೆಸಿದನು. ಕೆಲವು ಪ್ರದೇಶಗಳಲ್ಲಿ ಪಾಂಡ್ಯರ ಸಾಮಂತರಾಗಿ ಕದಂಬರು ಆಳ್ವಿಕೆ ನಡೆಸಿದರು.

ಗುಪ್ತರು

ಉತ್ತರ ಭಾರತದ ಪ್ರಮುಖ ಅರಸು ಮನೆತನಗಳಲ್ಲಿ ಗುಪ್ತ ಅರಸು ಮನೆತನವು ಒಂದು ಗುಪ್ತರ ಪಾಟಲೀಪುತ್ರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ನಡೆಸಿದರು. ಇವರ ಪ್ರಮುಖ ದೊರೆ ಸಮುದ್ರಗುಪ್ತ. ಸಮುದ್ರಗುಪ್ತನು ಆದರೆ ಅದು ಅಲ್ಪ ಕಾಲ ಮಾತ್ರವಾಗಿರಬಹುದು. ಸಮುದ್ರ ಗುಪ್ತನು ದಕ್ಷಿಣದಲ್ಲಿ ಕಂಚಿಯ ದೊರೆ ವಿಷ್ಣುಗೋಪನನ್ನು ಸೋಲಿಸಿದನು. ಇದನ್ನು ಅಲಹಾಬಾದ್ ಸ್ತಂಭ ಶಾಸನದಿಂದ ತಿಳಿಯಬಹುದಾಗಿದೆ. ಆದ್ದರಿಂದ ಸಮುದ್ರಗುಪ್ತನ ದಂಡಯಾತ್ರೆಯ ಕಾಲದಲ್ಲಿ ಕರ್ನಾಟಕದ ಕೆಲವು ಪ್ರದೇಶ ಮೌರ್ಯರ ಆಳ್ವಿಕೆಗೆ ಒಳಪಟ್ಟಿರಬಹುದಾಗಿದೆ. ಕ್ರಿ.ಶ. ೧೧೪೭ರ ಕೋಳೂರಿನ ಶಾಸನವು ಗುಪ್ತರು ಕರ್ನಾಟಕ ಪ್ರದೆಶದಲ್ಲಿ ಆಳ್ವಿಕೆ ನಡೆಸಿದರು ಎಂಬುದನ್ನು ತಿಳಿಸುತ್ತದೆ.[೪]

ಬಾದಾಮಿ ಚಾಲುಕ್ಯರು

ಬಾದಾಮಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಚಾಲುಕ್ಯರು ಕ್ರಿ.ಶ. ೫೫೦ರ ವೇಳೆಗೆ ಅಧಿಕಾರಕ್ಕೆ ಬಂದರು. ಬಾದಾಮಿಯನ್ನು ರಾಜಧಾನಿಯಾಗಿ ಮಾಡಿಕೊಂಡಿದ್ದರಿಂದ ಇವರನ್ನು ಬಾದಾಮಿ ಚಾಲುಕ್ಯರು ಎಂದು ಕರೆಯಲಾಯಿತು. ಚಾಲುಕ್ಯರು ಮೊದಲು ಕದಂಬರ ಸಾಮಂತರಾಗಿದ್ದರು. ಕದಂಬರ ಅವನತಿಯ ನಂತರ ಸ್ವಾತಂತ್ರ್ಯರಾದರು. ಚಾಲುಕ್ಯರ ಶ್ರೇಷ್ಠ ಅರಸರುಗಳೆಂದರೆ ಒಂದನೇ ಪುಲಿಕೇಶಿ, ಕೀರ್ತಿವರ್ಮ,

ಮಂಗಳೇಶ, ಎರಡನೇ ಪುಲಿಕೇಶಿ ಮತ್ತು ಎರಡನೇ ವಿಕ್ರಮಾದಿತ್ಯ ಪ್ರಮುಖರು. ಕರ್ನಾಟಕದ ಪ್ರಸಿದ್ಧ ರಾಜವಂಶವಾದ ಬಾದಾಮಿ ಚಾಲುಕ್ಯರ ಕುರಿತು ನಂತರ ಬಂದಂತಹ ಎಲ್ಲಾ ಕೃತಿಗಳು ಇದನ್ನೇ ಹೇಳುತ್ತವೆ. ಚಾಲುಕ್ಯರ ಕೀರ್ತಿ ವರ್ಮನು ಬಳ್ಳಾರಿ ಮತ್ತು ಕರ್ನೂಲು ಪ್ರಾಂತಗಳನ್ನಾಳುತ್ತಿದ್ದ ನಳರನ್ನು ಸೋಲಿಸಿ ಬಳ್ಳಾರಿ ಪ್ರದೇಶವನ್ನು ಚಾಲುಕ್ಯರ ಆಳ್ವಿಕೆಗೆ ಒಳಪಡಿಸಿದನು ಎಂದು ದಾಖಲೆಗಳು ತಿಳಿಸುತ್ತವೆ.[೫] ಚಾಲುಕ್ಯರ ಕಾಲದಲ್ಲಿ ಹಂಪಿ ಪ್ರದೇಶ ಆಳ್ವಿಕೆಗೆ ಒಳಪಟ್ಟಿದನ್ನು ಪೆದ್ದವಡಗೂರು ಮತ್ತು ಕುರುಗೋಡು ಶಾಸನಗಳು ಸ್ಪಷ್ಟಪಡಿಸುತ್ತವೆ. ಚಾಲುಕ್ಯರ ಪ್ರಮುಖ ದೊರೆ ಎರಡನೇ ಪುಲಿಕೇಶಿಯು ಬಾಣದೊರೆ ವಿಕ್ರಮನನ್ನು ಸೋಲಿಸಲು ಬಳ್ಳಾರಿ ಪ್ರದೇಶಕ್ಕೆ ಬಂದಿದ್ದನು ಎಂದು ನಾಗಯ್ಯ ಅವರು ತಿಳಿಸುತ್ತಾರೆ. ನಂತರ ಉತ್ತರ ಪಥೇಶ್ವರನಾದ ಶ್ರೀಹರ್ಷನ ದಾಳಿಯನ್ನು ಯಶಸ್ವಿಯಾಗಿ ತಡೆದು ದಕ್ಷಿಣ ಭಾರತಕ್ಕೆ ರಕ್ಷಣೆ ನೀಡಿ ಶಾಂತಿ ನೆಲೆಸುವಂತೆ ಮಾಡಿದನು. ಎರಡನೇ ಪುಲಿಕೇಶಿಯ ಕಾಲದಲ್ಲಿ ಆತನ ಮಗ ಆದಿತ್ಯವರ್ಮ ಆಳ್ವಿಕೆ ನಡೆಸಿದನು. ಕ್ರಿ.ಶ. ೬೪೨ರ ಸುಮಾರಿಗೆ ಪಲ್ಲವರಿಂದ ಎರಡನೇ ಪುಲಿಕೇಶಿ ಸೋಲನ್ನು ಅನುಭವಿಸಿದನು. ಪಲ್ಲವರು ಬಾದಾಮಿಯನ್ನು ವಶಪಡಿಸಿಕೊಂಡರು. ಬಾದಾಮಿ ಪಲ್ಲವರ ವಶವಾದಾಗ ಆದಿತ್ಯವರ್ಮ ಹಂಪಿ ಪ್ರದೇಶದಲ್ಲಿ ಆಳ್ವಿಕೆ ನಡೆಸಿದನು ಎಂದು ಎಸ್. ರಾಜಶೇಖರ್ ತಿಳಿಸುತ್ತಾರೆ. ಕ್ರಿ.ಶ. ೬೫೫ರಲ್ಲಿ ವಿಕ್ರಮಾದಿತ್ಯ ಪಲ್ಲವರನ್ನು ಬಾದಾಮಿಯಿಂದ ಹೊರದಬ್ಬಿ ಪುನಃ ಚಾಲುಕ್ಯ ಸಾಮ್ರಾಜ್ಯ ಸ್ಥಾಪಿಸಿದನು. ವಿಕ್ರಮಾದಿತ್ಯನ ನಂತರ ಸಮರ್ಥ ಚಾಲುಕ್ಯ ಅರಸರು ಆಳ್ವಿಕೆ ಬರಲಿಲ್ಲ. ಆದ್ದರಿಂದ ಕ್ರಿ.ಶ. ೭೫೩ರವರೆಗೆ ಆಳ್ವಿಕೆ ನಡೆಸಿದ ಚಾಲುಕ್ಯರು ನಂತರ ಇತಿಹಾಸದಿಂದ ಕಣ್ಮರೆಯಾದರು.[೬]

ಕ್ರಿ.ಶ. ೬೪೨ರಲ್ಲಿ ಪಲ್ಲವರು ಪುಲಿಕೇಶಿಯನ್ನು ಸೋಲಿಸಿ ಬಾದಾಮಿಯನ್ನು ವಶಪಡಿಸಿಕೊಂಡರು. ಆ ಕಾಲದಲ್ಲಿ ಆದಿತ್ಯವರ್ಮ ಕರ್ನಾಟಕದ ಪ್ರದೇಶದಲ್ಲಿ ಆಳ್ವಿಕೆ ನಡೆಸುತ್ತಿದ್ದನು. ಹಾಗಾದರೆ ಆದಿತ್ಯವರ್ಮನು ಸ್ವಾತಂತ್ರ್ಯ ಆಳ್ವಿಕೆ ನಡೆಸುತ್ತಿದ್ದನೇ ಎಂದು ತಿಳಿದಿಲ್ಲಾ. ಒಂದು ವೇಳೆ ಆದಿತ್ಯವರ್ಮ ಪಲ್ಲವರ ಸಾಮಂತನಾಗಿದ್ದರೆ ಕನ್ನಡ ಪ್ರದೇಶವು ಪಲ್ಲವರ ಆಳ್ವಿಕೆಗೂ ಸಹ ಒಳಪಟ್ಟಿರುವ ಸಂಭವವಿದೆ. ಒಂದು ಪ್ರದೇಶದ ಮಹತ್ವದಿಂದ ಇಂತಹ ವಿಷಯಗಳನನು ಮರೆಮಾಚಲಾಗುತ್ತದೆ.

ರಾಷ್ಟ್ರಕೂಟರು

ಬಾದಾಮಿ ಚಾಲುಕ್ಯರ ಸಾಮಂತರಾಗಿದ್ದ ರಾಷ್ಟ್ರಕೂಟರು ಕ್ರಿ.ಶ. ೭೫೩ರ ಸುಮಾರಿಗೆ ದುರ್ಬಲರಾದ ಚಾಲುಕ್ಯರನ್ನು ಸೋಲಿಸಿ ಅಧಿಕಾರಕ್ಕೆ ಬಂದರು. ಇವರ ರಾಜಧಾನಿ ಮಾನ್ಯಖೇಟ ಅಥವಾ ಮಳಖೇಡ. ರಾಷ್ಟ್ರಕೂಟರ ದಂತಿದುರ್ಗನು ಚಾಲುಕ್ಯರ ಕೊನೆಯ ದೊರೆ ಕೀರ್ತಿವರ್ಮನನ್ನು ಸೋಲಿಸಿ ಇತಿಹಾಸದಲ್ಲಿ ಹೊಸ ಮನೆತನವನ್ನು ಹುಟ್ಟು ಹಾಕಿದನು. ದಂತಿದುರ್ಗನ ನಂತರ ಒಂದನೇ ಕೃಷ್ಣ ಅಧಿಕಾರಕ್ಕೆ ಬಂದನು. ಇತನು ಚಾಲುಕ್ಯರ ಕೀರ್ತಿವರ್ಮನನ್ನು ಸಂಪೂರ್ಣವಾಗಿ ಸೋಲಿಸಿ ರಾಷ್ಟ್ರಕೂಟರ ರಾಜ್ಯ ವಿಸ್ತರಿಸಿದನು. ರಾಷ್ಟ್ರಕೂಟ ವಂಶದ ಪ್ರಮುಖ ದೊರೆಗಳಲ್ಲಿ ದ್ರುವ, ಮೂರನೇ ಗೋವಿಂದ, ಅಮೋಘವರ್ಷ ನೃಪತುಂಗ

ಮತ್ತು ಮೂರನೇ ಇಂದ್ರ ಪ್ರಮುಖರು. ರಾಷ್ಟ್ರಕೂಟರ ಮೂರನೇ ಗೋವಿಂದನು ನೊಳಂಬವಾಡಿಯನ್ನು ಜಯಿಸುವುದರೊಂದಿಗೆ ಕನ್ನಡ ಪ್ರದೇಶದಲ್ಲಿ ರಾಷ್ಟ್ರಕೂಟರ ಆಡಳಿತವನ್ನು ಸ್ಥಾಪಿಸಿದನು ಎಂಬುದಾಗಿ ಗೆಜೆಟಿಯರ್‌ನಲ್ಲಿ ತಿಳಿಸಲಾಗಿದೆ. ಮೂರನೇ ಗೋವಿಂದನ ಮುಂಚಿನ ಆರಂಭದ ಅರಸರ ಕಾಲದವರೆಗೆ ಕನ್ನಡ ಪ್ರದೇಶ ರಾಷ್ಟ್ರಕೂಟರ ಆಳ್ವಿಕೆಗೆ ಒಳಪಟ್ಟಿರಲಿಲ್ಲ. ರಾಷ್ಟ್ರಕೂಟ ಅರಸರ ಕಾಲದಲ್ಲಿ ಹಂಪಿ ಪ್ರದೇಶದಲ್ಲಿ ಅನೇಕ ದೇವಾಲಯಗಳು ನಿರ್ಮಾಣವಾದವು. ಆ ಕಾಲದಲ್ಲಿ ಹಂಪಿ ಒಂದು ಪ್ರಮುಖ ಧಾರ್ಮಿಕ ಕೇಂದ್ರವಾಗಿತ್ತು. ರಾಷ್ಟ್ರಕೂಟರ ಆಡಳಿತ ಅವಧಿಯನ್ನು ಕ್ರಿ.ಶ. ೭೫೭ ರಿಂದ ಕ್ರಿ.ಶ. ೯೭೨ರ ವರೆಗೆ ವಿಸ್ತರಿಸಲಾಗಿದೆ. ಆದರೆ ರಾಷ್ಟ್ರಕೂಟರ ಅವಧಿ ಕ್ರಿ.ಶ. ೯೭೨ಕ್ಕಿಂತ ಮುಂಚೆಯೇ ಮೊಟಕುಗೊಂಡಂತೆ ಕಂಡುಬರುತ್ತದೆ.

ತಲಕಾಡಿನ ಗಂಗರು

ಗಂಗರು ತಲಕಾಡನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ನಡೆಸಿದರು. ಇವರ ಇನ್ನುಳಿದ ರಾಜಧಾನಿಗಳೆಂದರೆ ಮೊದಲನೆಯದಾಗಿ ಕೋಲಾರ ಅಥವಾ ಕುವಲಾಲ ನಂತರ ಮಾಕುಂದ, ಗಂಗರು ಕ್ರಿ.ಶ. ೩೫೦ರಿಂದ ೯೯೯ರವರೆಗೆ ದೀರ್ಘಕಾಲ ಆಳ್ವಿಕೆನಡೆಸಿದರು. ಶಾತವಾಹನರ ನಂತರ ಕರ್ನಾಟಕ ಪ್ರದೇಶದಲ್ಲಿ ಎರಡು ಅರಸು ಮನೆತನಗಳು ಆಳ್ವಿಕೆಗೆ ಬಂದವು. ಬನವಾಸಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಕದಂಬರು ಆಳ್ವಿಕೆಗೆ ಬಂದರು. ದಕ್ಷಿಣದಲ್ಲಿ ತಲಕಾಡನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಗಂಗರು ಆಳ್ವಿಕೆಯನ್ನು ಆರಂಭಿಸಿದರು. ಕರ್ನಾಟಕ ಪ್ರದೇಶದಲ್ಲಿ ಆಳ್ವಿಕೆ ನಡೆಸಿದ ಅರಸು ಮನೆತನಗಳಲ್ಲಿ ಗಂಗರು ದೀರ್ಘಕಾಲ ಆಳ್ವಿಕೆ ನಡೆಸಿದರು. ರಾಷ್ಟ್ರಕೂಟರ ಕಾಲದಲ್ಲಿ ಗಂಗರ ದೊರೆಗಳಾದ ದುರ್ವಿನೀತ ಮತ್ತು ಶ್ರೀಪುರುಷರು ಬಳ್ಳಾರಿ ಪ್ರದೇಶದಲ್ಲಿ ತಮ್ಮ ರಾಜ್ಯವಿಸ್ತರಿಸಿದರು. ಗಂಗರ ಶ್ರೇಷ್ಠ ದೊರೆಗಳೆಂದರೆ ದುರ್ವಿನೀತ, ಶ್ರೀಪುರುಷ, ೨ನೇ ನೀತಿ ಮಾರ್ಗಯರ ಗಂಗ, ಮೂರನೇ ರಾಚಮಲ್ಲ ಪ್ರಮುಖರು. ಆದರೆ ಗಂಗರು ಎಂದ ತಕ್ಷಣ ನೆನಪಿಗೆ ಬರುವ ವ್ಯಕ್ತಿಯೆಂದರೆ ಗೊಮ್ಮಟೇಶ್ವರ ಮೂರ್ತಿಯ ಸ್ಥಾಪಕ. ಪ್ರಧಾನ ಮಂತ್ರಿ ಮತ್ತು ದಂಡನಾಯಕ ಚಾವುಂಡರಾಯ. ಗಂಗರು ಸುಮಾರು ೬೫೦ ವರ್ಷಗಳ ಕಾಲ ಆಳ್ವಿಕೆ ನಡೆಸಿದರು. ಗಂಗರು ಹೆಚ್ಚಿನ ಕಾಲ ಸಾಮಂತರಾಗಿ ಮಹಾ ಮಂಡಲೇಶ್ವರರಾಗಿ ಆಳ್ವಿಕೆ ನಡೆಸಿದರು.

ಇಂದಿನ ಸಂಪೂರ್ಣ ಕನ್ನಡ ಪ್ರದೇಶವು ಗಂಗರ ಆಳ್ವಿಕೆಗೆ ಒಳಪಟ್ಟಿತ್ತು. ಗಂಗರ ದೊರೆಗಳಾದ ದುರ್ವಿನೀತ ಮತ್ತು ಶ್ರೀಪುರುಷರು ಈ ಪ್ರದೇಶದಲ್ಲಿ ತಮ್ಮ ರಾಜ್ಯವನ್ನು ವಿಸ್ತರಿಸಿದರು. ಆದರೆ ರಾಷ್ಟ್ರಕೂಟರ ಒಂದನೇ ಕೃಷ್ಣನಿಂದ ಸೋತು ರಾಷ್ಟ್ರಕೂಟರ ಸಾಮಂತರಾದರು.[೮] ಇದನ್ನು ಗೆಜೆಟಿಯರ್‌ನಲ್ಲಿ ತಿಳಿಸಲಾಗಿದೆ. ನಂತರ ಇಮ್ಮಡಿ ಶಿವಮಾರನ ಕಾಲದಲ್ಲಿ ಗಂಗರು ಬಲಿಷ್ಠರಾದರು. ಆದರೆ ಧ್ರುವನು ಶಿವಮಾರನನ್ನು ಸೋಲಿಸಿ ಬಂಧನದಲ್ಲಿಟ್ಟನು. ಧ್ರುವನ ನಂತರ ಅಧಿಕಾರಕ್ಕೆ ಬಂದ ಮೂರನೇ ಗೋವಿಂದನು ಶಿವಮಾರನನ್ನು ಬಿಡುಗಡೆ ಮಾಡಿದನು. ಶಿವಮಾರನು ಪುನಃ ರಾಷ್ಟ್ರಕೂಟರ ವಿರುದ್ಧ ಯುದ್ಧ ಸಾರಿದನು. ಆದರೆ ರಾಷ್ಟ್ರಕೂಟರ ಗೋವಿಂದನು ಶಿವಮಾರನನ್ನು ಪುನಃ ಸೋಲಿಸಿದನು. ಆದರೆ ಗೋವಿಂದನು

ಶಿವಮಾರನನ್ನು ಬಂಧಿಸದೆ ಗಂಗವಾಡಿಯ ರಾಜಪಾಲನನ್ನಾಗಿ ನೇಮಿಸಿ ಸಾಮಂತ ಅರಸನನ್ನಾಗಿ ಮಾಡಿಕೊಂಡನು. ಇದನ್ನು ಗೆಜೆಟಿಯರ್ ತಿಳಿಸುತ್ತದೆ.

ಮೂರನೇ ಗೋವಿಂದನು ನಂತರ ರಾಷ್ಟ್ರಕೂಟರ ಆಡಳಿತದಲ್ಲಿ ಸ್ವಲ್ಪಕಾಲ ಗೊಂದಲಮಯ, ವಾತಾವರಣ ಉಂಟಾಯಿತು. ಇದರ ಸದುಪಯೋಗ ಪಡೆಯಲು ಗಂಗರ ರಾಚಮಲ್ಲನು ನೊಳಂಬರೊಡನೆ ವೈವಾಹಿಕ ಸಂಬಂಧ ಬೆಳೆಸಿದನು. ನಂತರ ರಾಚಮಲ್ಲನು ನೊಳಂಬರ ನೆರವಿನಿಂದ ಕಳೆದುಕೊಂಡ ತಮ್ಮ ಪ್ರದೇಶಗಳನ್ನು ಮರಳಿ ಪಡೆದನು. ಆದರೆ ರಾಷ್ಟ್ರಕೂಟರು ಬಹಳ ಬೇಗ ಪ್ರಬಲರಾದರು. ಕ್ರಿ.ಶ. ೮೦೭ರ ವೇಳೆಗೆ ಅಮೋಘವರ್ಷ ಅದಿಕಾರಕ್ಕೆ ಬಂದನು. ಆ ಕಾಲದಲ್ಲಿ ಗಂಗರ ಒಂದನೇ ನೀತಿ ಮಾರ್ಗ ಆಳ್ವಿಕೆ ನಡೆಸುತ್ತಿದ್ದನು. ರಾಷ್ಟ್ರಕೂಟರ ದೊರೆ ಅಮೋಘವರ್ಷನು ಗಂಗರೊಡನೆ ವೈರತ್ವವನ್ನು ಬಿಟ್ಟು ವೈವಾಹಿಕ ಸಂಬಂಧ ಬೆಳೆಸಿದನು. ಅದಕ್ಕಾಗಿ ಅಮೋಘವರ್ಷ ತನ್ನ ಮಗಳನ್ನು ಗಂಗರ ಯುವರಾಜ ಒಂದನೇ ಭೂತುಗನಿಗೆ ಕೊಟ್ಟು ಮದುವೆ ಮಾಡಿದನು. ನಂತರ ೨ನೇ ನೀತಿಮಾರ್ಗನು ನೊಳಂಬರ ಮಹೇಂದ್ರನನ್ನು ಸೋಲಿಸಿದನು. ೨ನೇ ನೀತಿ ಮಾರ್ಗನು ಸಹ ರಾಷ್ಟ್ರಕೂಟರ ಸಾಮಂತನಾಗಿ ಆಳ್ವಿಕೆ ನಡೆಸಿದನು. ಆದರೆ ನಂತರ ಅಧಿಕಾರಕ್ಕೆ ಬಂದ ಮೂರನೇ ರಾಚಮಲ್ಲನು ಸ್ವಾತಂತ್ರ್ಯನಾಗಲು ಪ್ರಯತ್ನಿಸಿದನು. ಅದಕ್ಕಾಗಿ ನೊಳಂಬ ಮತ್ತು ರಾಷ್ಟ್ರಕೂಟರೊಡನೆ ಯುದ್ಧವನ್ನು ಮುಂದುವರೆಸಿದನು. ಮೂರನೇ ರಾಚಮಲ್ಲನ ನಂತರ ಅಧಿಕಾರಕ್ಕೆ ಬಂದ ಇಮ್ಮಡಿ ಭೂತುಗನಿಗೆ ಬನವಾಸಿ ಮತ್ತು ನೊಳಂಬವಾಡಿಯನ್ನು ಬಹುಮಾನವಾಗಿ ನೀಡಲಾಯಿತು ಎಂದು ಗೆಜೆಟಿಯರ್‌ನಲ್ಲಿ ತಿಳಿಸಲಾಗಿದೆ. ಗಂಗರು ರಾಚಮಲ್ಲನ ಕಾಲದಲ್ಲಿ ಪ್ರಬಲರಾದರು. ರಾಚಮಲ್ಲನು ತನ್ನ ದಂಡನಾಯಕ ಚಾವುಂಡರಾಯನೊಡನೆ ಸೇರಿ ಉಚ್ಚಂಗಿಯನ್ನು ಗೆದ್ದು ನೊಳಂಬರ ಆಳ್ವಿಕೆಯನ್ನು ಕೊನೆಗಾಣಿಸಿದನು ಎಂದು ಗೆಜೆಟಿಯರ್‌ನಲ್ಲಿ ತಿಳಿಸಲಾಗಿದೆ. ಕನ್ನಡ ಪ್ರದೇಶವು ಗಂಗರ ಆಳ್ವಿಕೆಗೆ ಒಳಪಟ್ಟಿತ್ತು ಎಂಬುದನ್ನು ಅನೇಕ ಶಾಸನಗಳು ದೃಢಪಡಿಸುತ್ತವೆ. ಅವುಗಳೆಂದರೆ ಕ್ರಿ.ಶ. ೯೬೮ರ ಕುಕ್ಕನೂರಿನ ತಾಮ್ರಾಶಾಸನ, ಕ್ರಿ.ಶ. ೧೦೫೫ ಕೋಗಳಿ ಮತ್ತು ಕ್ರಿ.ಶ. ೧೦೮೭ರ ಅಂಬಳಿ ಶಾಸನಗಳು ಪ್ರಮುಖವಾಗಿವೆ. ಕೋಗಳಿ ಮತ್ತು ಅಂಬಳಿ ಶಾಸನಗಳು ಗಂಗರ ದೊರೆ ದುರ್ವಿನೀತನ ಬಗೆಗೆ ತಿಳಿಸುತ್ತವೆ.[೯]

ಗಂಗರ ಆಳ್ವಿಕೆಯ ಬಗೆಗೆ ಅನೇಕ ಭಿನ್ನಾಭಿಪ್ರಾಯಗಳಿವೆ. ಕೆಲವು ಚರಿತ್ರೆಗಾರರು 'ಗಂಗ ವಂಶದ ದೊರೆಗಳು ಎಂದೂ ಚಕ್ರವರ್ತಿಗಳಾಗಿ ಆಳ್ವಿಕೆ ನಡೆಸಲಿಲ್ಲಾ' ಎಂದು ಹೇಳಿದ್ದಾರೆ. ಗಂಗರು ರಾಷ್ಟ್ರಕೂಟರಿಗೆ ಹೆಚ್ಚು ಕಾಲ ಸಾಮಂತರಾಗಿ ಆಳ್ವಿಕೆ ನಡೆಸಿದರೆಂದು ಹೇಳಿದ್ದಾರೆ. ಇದು ಗಂಗರು ರಾಷ್ಟ್ರಕೂಟರಿಗಿಂತ ಮುಂಚೆ ಹಾಗೂ ರಾಷ್ಟ್ರಕೂಟರ ಅವನತಿಯ ನಂತರ ಕೆಲವು ಕಾಲ ಸ್ವಾತಂತ್ರರಾಗಿದ್ದರೆಂದು ತಿಳಿದುಬರುತ್ತದೆ.

ಕಲ್ಯಾಣಿ ಚಾಲುಕ್ಯರು

ಇಮ್ಮಡಿ ತೈಲಪನು ರಾಷ್ಟ್ರಕೂಟರನ್ನು ಮೂಲೆಗೊತ್ತಿ ಪುನಃ ಚಾಲುಕ್ಯ ಅರಸು ಮನೆತನವನ್ನು ಸ್ಥಾಪಿಸಿದನು. ಇವರ ರಾಜಧಾನಿ ಕಲ್ಯಾಣ ಆಗಿದ್ದರಿಂದ ಇವರನ್ನು ಕಲ್ಯಾಣಿ ಚಾಲುಕ್ಯರು ಎಂದು

ಕರೆಯಲಾಗಿದೆ. ಕಲ್ಯಾಣಿ ಚಾಲುಕ್ಯರ ಪ್ರಮುಖ ಅರಸರೆಂದರೆ ಇಮ್ಮಡಿ ತೈಲಪ, ಸೊಮೇಶ್ವರ, ಎರಡನೇ ಸೊಮೇಶ್ವರ, ಆರನೆಯ ವಿಕ್ರಮಾದಿತ್ಯ ಮತ್ತು ಸತ್ಯಾಶ್ರಯ ಪ್ರಮುಖರು. ಚಾಲುಕ್ಯರ ಅರಸರಲ್ಲಿಯೇ ಹೆಚ್ಚು ಶ್ರೇಷ್ಠವಾದ ಅರಸನೆಂದರೆ ಆರನೇ ವಿಕ್ರಮಾದಿತ್ಯ. ಈತನು ಕ್ರಿ.ಶ. ೧೦೭೬ರಲ್ಲಿ ಸಿಂಹಾಸನಕ್ಕೆ ಬಂದನು.[೧೦] ಅದರ ನೆನಪಿಗಾಗಿ ಹೊಸ 'ವಿಕ್ರಮ ಶಕೆ'ಯನ್ನು ಆರಂಭಿಸಿದನು. ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ದಕ್ಷಿಣದಲ್ಲಿ ಚೋಳರು ಪ್ರಬಲರಾಗಿದ್ದರು. ಆದ್ದರಿಂದ ಈ ಎರಡು ಅರಸು ಮನೆತನಗಳು ನೊಳಂಬವಾಡಿಗಾಗಿ ಮತ್ತು ದಕ್ಷಿಣದ ಪ್ರಾಬಲ್ಯಕ್ಕಾಗಿ ನಿರಂತರ ಹೋರಾಟದಲ್ಲಿ ತೊಡಗಿದ್ದವು. ಇದರಲ್ಲಿ ಕೊನೆಗೆ ಕಲ್ಯಾಣಿ ಚಾಲುಕ್ಯರೇ ಮೇಲುಗೈಸಾಧಿಸಿದರು. ಹಾಗೂ ನೊಳಂಬವಾಡಿ ಅಥವಾ ಬಳ್ಳಾರಿ ಪ್ರದೇಶವನ್ನು ತಮ್ಮ ಹತೋಟಿಯಲ್ಲಿ ಇಟ್ಟುಕೊಳ್ಳುವಲ್ಲಿ ಯಶಸ್ವಿಯಾದರು ಎಂದು ಗೆಜೆಟಿಯರ್‌ನಲ್ಲಿ ತಿಳಿಸಲಾಗಿದೆ. ಕನ್ನಡ ಪ್ರದೇಶವು ಚಾಲುಕ್ಯರ ಆರಂಭ ಕಾಲದಿಂದ ಆಳ್ವಿಕೆಗೆ ಒಳಪಟ್ಟಿದ್ದನ್ನು ದೃಢಪಡಿಸಲು ಹೇರಳವಾದ ಶಾಸನಗಳು ಸಾಕ್ಷಿಯಾಗಿವೆ.

ಕ್ರಿ.ಶ. ೯೭೩ರಲ್ಲಿ ರಾಷ್ಟ್ರಕೂಟರ ಖೊಟ್ಟಿಗನ ಆಳ್ವಿಕೆಯಲ್ಲಿ ಭೂತಗ ದೇವನು ಕೋಗಳಿ ರಾಜ್ಯಪಾಲನಾಗಿದ್ದನು. ಗಂಗರ ಸಾಮಂತ ಪಾಂಚಾಲದೇವನು ಭೂತಗನ ಮೇಲೆ ದಾಳಿ ಮಾಡಿ ಕೋಗಳಿಯಿಂದ ಭೂತುಗನನ್ನು ಹೊರದಬ್ಬಿದನು. ಆಗ ಚಾಲುಕ್ಯರ ಇಮ್ಮಡಿ ತೈಲಪನು ಭೂತಗನೊಡನೆ ಸೇರಿ ಪಾಂಚಾಲ ದೇವನನ್ನು ಸೋಲಿಸಿ ಬಳ್ಳಾರಿ ಪ್ರದೇಶವನ್ನು ಚಾಲುಕ್ಯರ ಆಳ್ವಿಕೆಗೆ ಒಳಪಡಿಸಿದನು. ಗೆಜೆಟಿಯರ್, ಬಳ್ಳಾರಿ ಪ್ರದೇಶದಲ್ಲಿ ಕಲ್ಯಾಣಿ ಚಾಲುಕ್ಯರು ಆರಂಭದಿಂದ ಆಳ್ವಿಕೆ ನಡೆಸಿದರೆಂದು ಮಾತ್ರ ತಿಳಿಸುತ್ತದೆ. ಕ್ರಿ.ಶ. ೧೦೧೦-೧೦೧೧ರಲ್ಲಿ ಚಾಲುಕ್ಯನ ಐದನೇ ವಿಕ್ರಮಾದಿತ್ಯನ ಕಾಲದಲ್ಲಿ ನೊಳಂಬವಾಡಿ ಪಲ್ಲವರು ಕಲ್ಯಾಣಿ ಚಾಲುಕ್ಯರ ಪರವಾಗಿ ಕರ್ನಾಟಕದ ಪ್ರದೇಶದಲ್ಲಿ ಆಳ್ವಿಕೆ ನಡೆಸಿದ್ದನ್ನು ಗೆಜೆಟಿಯರ್‌ನ್ನು ತಿಳಿಸುತ್ತದೆ. ಈ ಕಾಲದಲ್ಲಿ ಚೋಳರು ನೊಳಂಬವಾಡಿಯನ್ನು ಜಯಿಸಿ ಸ್ವಲ್ಪ ಕಾಲ ಹತೋಟಿಯಲ್ಲಿಟ್ಟುಕೊಂಡಿದ್ದರು. ಒಂದನೇ ಸೋಮೇಶ್ವರನ ಕಾಲದಲ್ಲಿ ಚೋಳರು ಚಾಲುಕ್ಯರ ಮೇಲೆ ದಾಳಿ ನಡೆಸಿದರು. 'ಕೊಪ್ಪಂ' ಎಂಬಲ್ಲಿ ನಡೆದ ಕದನದಲ್ಲಿ ಚೋಳರು ಸೋತು ಪಲಾಯನ ಮಾಡಿದರು. ಹಾಗೆಯೇ ಹಿಂತಿರುಗುತ್ತಿದ್ದ ಚೋಳರು ಕಮ್ಮಟದುರ್ಗವನ್ನು ಆಕ್ರಮಿಸಿದರು. ಆದರೆ ಇವರ ಹಿಂದೆಯೇ ಬಂದ ಚಾಲುಕ್ಯರು ಇವರನ್ನು ಕಮ್ಮಟದುರ್ಗದಿಂದ ಸೋಲಿಸಿ ಓಡಿಸಿದರು ಎಂದು ಗೆಜೆಟಿಯರ್‌ನಲ್ಲಿ ತಿಳಿಸಲಾಗಿದೆ.[೧೧] ಕಲ್ಯಾಣಿ ಚಾಲುಕ್ಯರ ದೊರೆ ಒಂದನೇ ಸೋಮೇಶ್ವರನು ಗುಣ ಮುಖವಾಗದ ಕಾಯಿಲೆಯಿಂದ ನರಳುತ್ತಿದ್ದನು ಹಾಗೂ ಕುರುವತ್ತಿ ಸೋಮೇಶ್ವರನಿಗೆ ಪ್ರಿಯವಾದ ಸ್ಥಳವಾಗಿತ್ತು ಅದಕ್ಕಾಗಿ ಸೋಮೇಶ್ವರನು ಕುರುವತ್ತಿಗೆ ಒಂದು ತುಂಗಭದ್ರಾ ನದಿಯಲ್ಲಿ ಜಲಸಮಾಧಿಯಾದನು ಎಂದು ಆಧಾರಗಳು ತಿಳಿಸುತ್ತವೆ.

ಒಂದನೇ ಸೋಮೇಶ್ವರನ ನಂತರ ಹಿರಿಯ ಮಗ ಎರಡನೇ ಸೋಮೇಶ್ವರನು ಅಧಿಕಾರಕ್ಕೆ ಬಂದನು. ಆದರೆ ಎರಡನೇ ಸೋಮೇಶ್ವರನಿಗಿಂತ ಕಿರಿಯ ಸಹೋದರ ಆರನೇ ವಿಕ್ರಮಾದಿತ್ಯ ಪ್ರಬಲನಾಗಿದ್ದನು. ಇದನ್ನು ಮನಗಂಡ ಎರಡನೇ ಸೋಮೇಶ್ವರನು ವಿಕ್ರಮಾದಿತ್ಯನ ಪ್ರಾಂತಗಳನ್ನು ಬೇರೆಯವರಿಗೆ ವರ್ಗಾಯಿಸಿ

ಅವನನ್ನು ಬಂಧಿಸಿಲು ಪ್ರಯತ್ನಿಸಿದನು. ಇದರಿಂದ ವಿಕ್ರಮಾದಿತ್ಯ ಕಲ್ಯಾಣ ತೊರೆಯಬೇಕಾಯಿತು. ಕಲ್ಯಾಣದಿಂದ ತಪ್ಪಿಸಿಕೊಂಡು ಬಂದ ವಿಕ್ರಮಾದಿತ್ಯನಿಗೆ ಬಳ್ಳಾರಿ ಪ್ರದೇಶ ಆಶ್ರಯ ನೀಡಿತು ಎಂದು ನಾಗಯ್ಯ ಅವರು ತಿಳಿಸುತ್ತಾರೆ. ಹಾಗೂ ಆರನೇ ವಿಕ್ರಮಾದಿತ್ಯನ ೧೯ ಜನ ರಾಣಿಯರಲ್ಲಿ ಮೂರು ರಾಣಿಯರು ಬಳ್ಳಾರಿ ಪ್ರದೇಶದವರಾಗಿದ್ದರು. ನಂತರ ವಿಕ್ರಮಾದಿತ್ಯ ಸಿಂದರು ಮತ್ತು ಉಚ್ಚಂಗಿ ಪಾಂಡ್ಯಾರ ನೆರವಿನಿಂದ ಎರಡನೇ ಸೋಮೇಶ್ವರನನ್ನು ಕ್ರಿ.ಶ. ೧೦೭೬ರಲ್ಲಿ ಸೋಲಿಸಿ ಅರಸನಾದನು. ಅರಸನಾದ ವಿಕ್ರಮಾದಿತ್ಯನು ಗೋವಾ ಕದಂಬರ ನೆರವಿನಿಂದ ದಂಡಯಾತ್ರೆ ಕೈಗೊಂಡನು.[೨] ದಂಡಯಾತ್ರೆಯಲ್ಲಿ ಚೋಳರನ್ನು ಸೋಲಿಸಿದನು. ಸೋತ ಚೋಳ ದೊರೆ ವೀರರಾಜೇಂದ್ರ ಚೋಳನು ತನ್ನ ಮಗಳನ್ನು ವಿಕ್ರಮಾದಿತ್ಯನಿಗೆ ಕೊಟ್ಟು ವೈವಾಹಿಕ ಸಂಬಂಧವನ್ನು ಬೆಳೆಸಿದನು. ಆರನೇ ವಿಕ್ರಮಾದಿತ್ಯನ ಕಾಲದಲ್ಲಿ ಹೊಯ್ಸಳರು ಕಳಚೂರಿಗಳು ಸೇವುಣರು ಕಲ್ಯಾಣಿ ಚಾಲುಕ್ಯರ ಸಾಮಂತರಾಗಿದ್ದರು.

ವಿಕ್ರಮಾದಿತ್ಯ ನಂತರ ಚಾಲುಕ್ಯರು ದುರ್ಬಲರಾಗುತ್ತಾ ನಡೆದರು. ನಾಲ್ಕನೇ ಸೋಮೇಶ್ವರನ ಕಾಲದಲ್ಲಿ ಕಳಚೂರಿ ಬಿಜ್ಜಳನ ಪ್ರದೇಶವಾಯಿತು. ಬಿಜ್ಜಳನು ೨೦ ವರ್ಷಗಳ ಕಾಲ ಆಳ್ವಿಕೆ ನಡೆಸಿದನು. ಆದರೆ ನಾಲ್ಕನೇ ಸೋಮೇಶ್ವರನು ಕ್ರಿ.ಶ. ೧೧೮೨ರ ಸುಮಾರಿಗೆ ಪುನಃ ಚಾಲುಕ್ಯ ಸಾಮ್ರಾಜ್ಯ ಸ್ಥಾಪಿಸಿದನು. ಆದರೆ ಆ ವೇಳೆಗಾಗಲೇ ಹೊಯ್ಸಳರು ಮತ್ತು ಸೇವುಣರು ಪ್ರಬಲರಾಗಿದ್ದರು. ಕೊನೆಯಲ್ಲಿ ಚಾಲುಕ್ಯ ಸಾಮ್ರಾಜ್ಯ ಹೊಯ್ಸಳ ಮತ್ತು ಸೇವುಣರ ನಡುವೆ ಹಂಚಿಹೋಯಿತು.

ಕಲ್ಯಾಣಿ ಚಾಲುಕ್ಯರ ಚಕ್ರವರ್ತಿಗಳಿಗೆಲ್ಲಾ ನೊಳಂಬವಾಡಿ ಮತ್ತು ಕೋಗಳಿ ನಾಡುಗಳು ಪ್ರಿಯವಾಗಿದ್ದವೆಂದು ರವಿಕುಮಾರ್ ಮತ್ತು ವೃಷಬೇಂದ್ರಚಾರ್ ಅಭಿಪ್ರಾಯ ಪಡುತ್ತಾರೆ. ಆದರೆ ಚಾಲುಕ್ಯರು ಚೋಳರು ದಕ್ಷಿಣದಲ್ಲಿ ಪ್ರಬಲರಾಗುತ್ತಿದ್ದ ಹೊಯ್ಸಳರನ್ನು ತಡೆಯುವ ಉದ್ದೇಶದಿಂದ ನೊಳಂಬವಾಡಿ ಪ್ರಾಂತ್ಯಗಳಿಗೆ ಒತ್ತು ಕೊಟ್ಟಿರಬಹುದಾಗಿದೆ. ಚೋಳರು ಮತ್ತು ಹೊಯ್ಸಳರು ನೊಳಂಬವಾಡಿಯನ್ನು ಗೆಲ್ಲಲು ನಿರಂತರವಾಗಿ ಪ್ರಯತ್ನಿಸುತ್ತಲೇ ಇದ್ದರು. ಹಾಗೂ ಉತ್ತರದಲ್ಲಿ ತಮ್ಮ ಸಾಮ್ರಾಜ್ಯ ಸ್ಥಾಪಿಸಲು ಪ್ರಯತ್ನಿಸುತ್ತಿರಬಹುದಾಗಿದೆ. ಆದ್ದರಿಂದ ಈ ಪ್ರಾಂತ್ಯದಲ್ಲಿ ಚಾಲುಕ್ಯರು ಈ ಪ್ರಾಂತ್ಯದಲ್ಲಿ ಹೆಚ್ಚಿನ ಸೈನ್ಯ ಜಮಾವಣೆ ಮಾಡಿ ಅದಕ್ಕಾಗಿ ಈ ಪ್ರದೇಶಕ್ಕೆ ನಿರಂತರ ಭೇಟಿ ನೀಡುತ್ತಿರಬಹುದಾಗಿದೆ. ಅವರ ಉದ್ದೇಶ ಚೋಳರ ಮತ್ತು ಹೊಯ್ಸಳರ ದಾಳಿ ತಡೆಯಲು ಇರಬಹುದಾಗಿದೆ. ಅದಕ್ಕಾಗಿ ಇಮ್ಮಡಿ ತೈಲಪನು ೧೫೦ ಗಜ ದಳದೊಂದಿಗೆ 'ರೊದ್ದ'ದಲ್ಲಿ ಬೀಡುಬಿಟ್ಟದ್ದನ್ನು ಇದು ಸಮರ್ಥಿಸುತ್ತದೆ. 'ರೊದ್ದ' ನೊಳಂಬವಾಡಿ ಪ್ರಾಂತ್ಯದ ಒಂದು ಪ್ರದೇಶವಾಗಿರಬಹುದು. ಜಯಸಿಂಹ ರಾಣಿ ದೇವಲದೇವಿ ಬಳ್ಳಾರಿ ಪ್ರದೇಶದವಳು. ಆರನೇ ವಿಕ್ರಮಾದಿತ್ಯನಿಗೆ ೧೯ ಜನ ರಾಣಿಯರಿದ್ದರು. ಅವರಲ್ಲಿ ಮೂವರು ರಾಣಿಯರು ಕನ್ನಡ ಪ್ರದೇಶ.

ಕಳಚೂರಿಗಳು

ಕಲ್ಯಾಣಿ ಚಾಲುಕ್ಯರನ್ನು ಮೂಲೆಗೊತ್ತಿ ಬಿಜ್ಜಳನು ಸ್ವಾತಂತ್ರ ಕಳಚೂರಿ ವಂಶವನ್ನು ಸ್ಥಾಪಿಸಿದನು.

ಬಿಜ್ಜಳನು ಮೊದಲು ಕಲ್ಯಾಣಿ ಚಾಲುಕ್ಯರ ಸಾಮಂತನಾಗಿದ್ದನು. ಚಾಲುಕ್ಯರೊಡನೆ ವೈವಾಹಿಕ ಸಂಬಂಧಗಳನ್ನು ಸಹ ಬೆಳೆಸಿಕೊಂಡಿದ್ದನು. ಕಳಚೂರಿಗಳ ರಾಜಧಾನಿ ಸಹ ಕಲ್ಯಾಣವಾಗಿತ್ತು.[೧೩] ಇವರ ಪ್ರಮುಖ ದೊರೆ ಬಿಜ್ಜಳ ಕಳಚೂರಿ ಅರಸರ ಕಾಲದಲ್ಲಿ ಪ್ರಸಿದ್ಧವಾದ ವ್ಯಕ್ತಿಯೆಂದರೆ ಬಸವಣ್ಣನವರು. ಬಸವಣ್ಣನವರು ೧೨ನೇ ಶತಮಾನದಲ್ಲಿ ಹಿಂದೂ ಧರ್ಮದಲ್ಲಿ ಹೊಸಕ್ರಾಂತಿಯನ್ನೇ ನಡೆಸಿದರು. ಇವರು ಬಿಜ್ಜಳ ಕರಣಿಕರಾಗಿ ನಂತರ ಪ್ರಧಾನ ಮಂತ್ರಿಗಳಾಗಿ ಕೆಲಸ ನಿರ್ವಹಿಸಿದರು.

ಬಿಜ್ಜಳನು ಕ್ರಿ.ಶ. ೧೧೫೭ರ ಸುಮಾರಿಗೆ ಚಾಲುಕ್ಯರ ದೊರೆ ಮೂರನೇ ತೈಲಪನ ನಂತರ ಸ್ವತಂತ್ರ್ಯ ಕಳಚೂರಿ ವಂಶವನ್ನು ಸ್ಥಾಪಿಸಿದನು. ಆ ಕಾಲಕ್ಕೆ ನೊಳಂಬವಾಡಿಯ ಕನ್ನಡ ಪ್ರದೇಶವನ್ನು ಉಚ್ಚಂಗಿ ಪಾಂಡ್ಯರು ಚಾಲುಕ್ಯರ ನಿಷ್ಠಾವಂತ ಸೇವಕರಾಗಿ ಆಳ್ವಿಕೆ ನಡೆಸುತ್ತಿದ್ದರು. ಆರಂಭದಲ್ಲಿ ಪಾಂಡ್ಯರು ಬಿಜ್ಜಳನ ಅರಸೊತ್ತಿಗೆಯನ್ನು ಒಪ್ಪಲಿಲ್ಲಾ. ಅಧಿಕಾರಕ್ಕೆ ಬಂದ ಬಿಜ್ಜಳನು ಪಾಂಡ್ಯರನ್ನು ಸೋಲಿಸಿದನು. ನಂತರ ಒತ್ತಾಯ ಪೂರ್ವಕವಾಗಿ ಸಾಮಂತರನ್ನಾಗಿ ಮಾಡಿಕೊಂಡನು.[೧೪] ಇದನ್ನು ಗೆಜೆಟಿಯರ್ ಮೂಲಕ ತಿಳಿಯಬಹುದಾಗಿದೆ. ನಂತರ ಬಂದಂತಹ ಕೃತಿಗಳೆಲ್ಲವು ಇದನ್ನೇ ತಿಳಿಸುತ್ತವೆ. ಕುರುಗೋಡಿನ ಸಿಂಧರನ್ನು ಸಹ ಬಿಜ್ಜಳನು ಸಾಮಂತರನ್ನಾಗಿ ಮಾಡಿಕೊಂಡನು. ನಂತರ ಕ್ರಿ.ಶ. ೧೧೮೪ರ ಸುಮಾರಿಗೆ ನಾಲ್ಕನೇ ಸೋಮೇಶ್ವರನು ಪುನಃ ಚಾಲುಕ್ಯ ವಂಶವನ್ನು ಸ್ಥಾಪಿಸಿದನು. ಆಗ ಕಳಚೂರಿ ಅರಸರ ಆಳ್ವಿಕೆ ಕೊನೆಗೊಂಡಿತು. ಕನ್ನಡ ಪ್ರದೇಶದಲ್ಲಿ ಕಳಚೂರಿಗಳ ಆಳ್ವಿಕೆಯನ್ನು ಸಮರ್ಥಿಸಲು ಅನೇಕ ಶಾಸನಗಳು ಲಭಿಸಿವೆ. ಅವುಗಳೆಂದರೆ ಕ್ರಿ.ಶ. ೧೧೬೨ರ ನೀಲಗುಂದ. ೧೧೭೬ ಮತ್ತು ೧೧೭೭ರ ಕುರುಗೋಡು ಶಾಸನಗಳು ಪ್ರಮುಖವಾಗಿವೆ ಎಂದು ನಾಗಯ್ಯ ಅವರು ತಿಳಿಸುತ್ತಾರೆ. ಕುಂಬಾಸ ಅವರು ಕುರುಗೋಡು ಶಾಸನದ ಬಗೆಗೆ ಮಾತ್ರ ಪ್ರಸ್ತಾಪಿಸುತ್ತಾರೆ.

ಹೊಯ್ಸಳರು

ದ್ವಾರಸಮುದ್ರವನ್ನು ರಾಜಧಾನಿಯಾಗಿ ಮಾಡಿಕೊಂಡು ಹೊಯ್ಸಳರು ಅಧಿಕಾರಕ್ಕೆ ಬಂದರು. ಆರಂಭದಲ್ಲಿ ಕಲ್ಯಾಣಿ ಚಾಲುಕ್ಯರ ಸಾಮಂತರಾಗಿ ಹೊಯ್ಸಳರು ಅಧಿಕಾರಕ್ಕೆ ಬಂದರು. ಇವರ ಜೊತೆಗೆ ಉತ್ತರದ ದೇವಗಿರಿಯ ಯಾದವರು ಅಥವಾ ಸೇವುಣರು ಸಹ ಪ್ರಬಲರಾದರು. ಚಾಲುಕ್ಯರ ಅವನತಿಯ ನಂತರ ಹೊಯ್ಸಳರು ಸ್ವಾತಂತ್ರ್ಯರಾದರು. ಚಾಲುಕ್ಯರ ನಂತರ ದಕ್ಷಿಣದಲ್ಲಿ ಪ್ರಾಬಲ್ಯಕ್ಕಾಗಿ ಹೊಯ್ಸಳರ ಮತ್ತು ಸೇವುಣರ ನಡುವೆ ತಿಕ್ಕಾಟ ಆರಂಭವಾಯಿತು. ಆದ್ದರಿಂದ ಈ ಎರಡು ಅರಸು ಮನೆತನಗಳ ನಡುವೆ ಕದನಗಳು ಅನಿವಾರ್ಯವಾಗಿದ್ದವು. ಆ ಕಾಲದಲ್ಲಿ ಬಳ್ಳಾರಿ ಪ್ರದೇಶವು ಒಮ್ಮೆ ಹೊಯ್ಸಳರ ವಶದಲ್ಲಿದ್ದರೆ ಮತ್ತೊಮ್ಮೆ ಯಾದವರ ವಶದಲ್ಲಿರುತ್ತಿತ್ತು. ಆದ್ದರಿಂದ ಹೊಯ್ಸಳರ ಮತ್ತು ಯಾದವರ ಕಾಲದಲ್ಲಿ ಕನ್ನಡ ಪ್ರದೇಶ ಈ ಎರಡು ಅರಸು ಮನೆತನಗಳ ಹೋರಾಟದ ಕೇಂದ್ರಬಿಂದುವಾಗಿತ್ತು.[೧೫] ಹೊಯ್ಸಳ ವಂಶದ ಪ್ರಮುಖ ಅರಸರುಗಳೆಂದರೆ ವಿಷ್ಣುವರ್ಧನ ಮತ್ತು ಇಮ್ಮಡಿ ಬಲ್ಲಾಳ.

ಹೊಯ್ಸಳರ ಪ್ರಮುಖ ಅರಸರಲ್ಲಿ ಒಬ್ಬನಾದ ವಿಷ್ಣುವರ್ಧನನು ಕನ್ನಡ ಪ್ರದೇಶದ ಉಚ್ಚಂಗಿ ಪ್ರಾಂತವನ್ನು ವಶಪಡಿಸಿಕೊಳ್ಳಲು ಪ್ರಯತ್ನಿಸಿದನು. ಆಗ ಪ್ರಾಂತ್ಯವು ಚಾಲುಕ್ಯರ ದೊರೆ ಆರನೇ ವಿಕ್ರಮಾದಿತ್ಯನಿಗೆ ಸೇರಿತ್ತು. ವಿಷ್ಣುವರ್ಧನನ ಪ್ರಯತ್ನವನ್ನು ವಿಕ್ರಮಾದಿತ್ಯನು ವಿಫಲಗೊಳಿಸಿದನು. ವಿಕ್ರಮಾದಿತ್ಯನ ನಂತರ ವಿಷ್ಣುವರ್ಧನನು ಅನೇಕ ಸಲ ಈ ಪ್ರದೇಶ ಗೆಲ್ಲಲು ಪ್ರಯತ್ನಿಸಿದನು.[೧೬] ಆದರೆ ವಿಷ್ಣುವರ್ಧನನ ಪ್ರಯತ್ನವನ್ನು ಚಾಲುಕ್ಯರು ಸಫಲವಾಗಲು ಬಿಡಲಿಲ್ಲ ಎಂದು ತಿಳಿಯಬಹುದು. ಆದರೆ ವಿಷ್ಣುವರ್ಧನನು ರಾಯಚೂರು ಮತ್ತು ಬಳ್ಳಾರಿ ಪ್ರದೇಶಗಳನ್ನು ಗೆದ್ದುಕೊಂಡನು. ರಾಯಚೂರು ಮತ್ತು ಬಳ್ಳಾರಿ ಕೋಟೆಗಳು ವಿಷ್ಣುವರ್ಧನನ ಉತ್ತರ ಗಡಿಗಳಾಗಿದ್ದವು ಎಂದು ಗೆಜೆಟಿಯರ್‌ನಲ್ಲಿ ತಿಳಿಸಲಾಗಿದೆ. ಕ್ರಿ.ಶ.೧೧೭೩ರಲ್ಲಿ ಇಮ್ಮಡಿ ಬಲ್ಲಾಳ ಅಧಿಕಾರಕ್ಕೆ ಬಂದನು. ಈ ವೇಳೆಗಾಗಲೇ ಕಲ್ಯಾಣೀ ಚಾಲುಕ್ಯರು ದುರ್ಬಲರಾಗಿದ್ದರು. ಈ ಅವಕಾಶ ಬಳಸಿಕೊಂಡ ಇಮ್ಮಡಿ ಬಲ್ಲಾಳ ಸ್ವಾತಂತ್ರನಾದನು. ನಂತರ ಕ್ರಿ.ಶ. ೧೧೮೯ರ ಸುಮಾರಿಗೆ ಚಾಲುಕ್ಯರ ಸಾಮಂತ ದೊರೆ ಪಾಂಡ್ಯರ ಕಾಮದೇವನನ್ನು ಸೋಲಿಸಿ ಉಚ್ಚಂಗಿಯನ್ನು ಗೆದ್ದುಕೊಂಡನು. ಬಲ್ಲಾಳ ಉಚ್ಚಂಗಿಯನ್ನು ಜಯಿಸುವುದರೊಂದಿಗೆ ಕನ್ನಡ ಪ್ರದೇಶದಲ್ಲಿ ತನ್ನ ರಾಜ್ಯವನ್ನು ವಿಸ್ತರಿಸಿದನು. ಪಾಂಡ್ಯರು ಕಾಮದೇವನನ್ನು ಸಾಮಂತನಾಗಿ ಮುಂದುವರಿಯಲು ಅವಕಾಶ ನೀಡಲಾಯಿತು ಎಂದು ಗೆಜೆಟಿಯರ್‌ನಲ್ಲಿ ತಿಳಿಸಾಲಗಿದೆ. ಚಾಲುಕ್ಯರ ಅಸಮರ್ಥತೆ ಬಳಸಿಕೊಂಡು ಹೊಯ್ಸಳರು ಕನ್ನಡ ಪ್ರದೇಶದಲ್ಲಿ ಹೊಯ್ಸಳ ರಾಜ್ಯ ವಿಸ್ತರಿಸಿದರೆಂದು ಆಧಾರಗಳಿಂದ ತಿಳಿದುಬರುತ್ತದೆ. ವಾಸುದೇವ ಬಡಿಗೇರ ಅವರು ಕ್ರಿ.ಶ. ೧೧೩೫ರಲ್ಲಿ ಹೊಯ್ಸಳರು ಉಚ್ಚಂಗಿಯನ್ನು ಮುತ್ತಿ ನೊಳಂಬವಾಡಿ ಜಯಿಸುವುದರೊಂದಿಗೆ ಬಳ್ಳಾರಿ ಪ್ರದೇಶದಲ್ಲಿ ಹೊಯ್ಸಳರು ಆಳ್ವಿಕೆ ನಡೆಸಿದರೆಂದು ತಿಳಿಸುತ್ತಾರೆ. ವೀರ ಬಲ್ಲಾಳನ ರಾಣಿ ಪದುಮಲದೇವಿ ಹಡಗಲಿ ಪ್ರದೇಶದಲ್ಲಿದ್ದಳು. ಹಡಗಲಿ ಪದುಮಲದೇವಿಯ ಹುಟ್ಟಿದ ಸ್ಥಳವಾಗಿತ್ತು. ಹಡಗಲಿಯಲ್ಲಿ ಪದುಮಲದೇವಿ ಆಳ್ವಿಕೆ ನಡೆಸಿದಳು ಎಂಬುದಾಗಿ ಹೇಳಲಾಗಿದೆ. ಇದನ್ನು ಗೆಜೆಟಿಯರ್ ಮೂಲಕ ತಿಳಿಯಬಹುದಾಗಿದೆ. ಕುಂಬಾಸ ಅವರು ಪೊಸಾಂಡಂಗಿಲೆಯನ್ನು ಹೀಗಿನ ಹಿರೇ ಹಡಗಲಿ ಆಗಿದೆ ಎಂದು ತಿಳಿಸುತ್ತಾರೆ. ವೀರ ಬಲ್ಲಾಳನ ನಂತರ ವೀರ ನರಸಿಂಹ ಅಧಿಕಾರಕ್ಕೆ ಬಂದನು. ವೀರನರಸಿಂಹನು ಈ ಪ್ರದೇಶವನ್ನು ತನ್ನ ಹತೋಟಿಯಲ್ಲಿ ಇಟ್ಟುಕೊಳ್ಳಲು ಯಶಸ್ವಿಯಾದನು. ನಂತರ ಕ್ರಿ.ಶ. ೧೨೯೧ರಲ್ಲಿ ಮೂರನೇ ಬಲ್ಲಾಳ ಅಧಿಕಾರಕ್ಕೆ ಬಂದನು. ಇವನು ಸಹ ಸಮರ್ಥ ಮತ್ತು ದಕ್ಷ ಆಡಳಿತಗಾರ. ಆದರೆ ಬಲ್ಲಾಳ ಅಧಿಕಾರಕ್ಕೆ ಬಂದಾಗ ಕಂಪಿಲನು ಕುಮ್ಮಟದುರ್ಗದಲ್ಲಿ ಪ್ರಬಲನಾದನು. ದಾಯಾದಿ ರಾಮನಾಥ ನಿರಂತರ ಕಿರುಕುಳ ನೀಡುತ್ತಿದ್ದನು. ಯಾದವರು ಮೊದಲಿನಿಂದಲೂ ಪ್ರತಿಸ್ಪರ್ಧಿಗಳಾಗಿ ನಿಂತಿದ್ದರು. ಈ ದಂಗೆಗಳನ್ನೆಲ್ಲಾ ಮೂರನೇ ಬಲ್ಲಾಳ ಯಶಸ್ವಿಯಾಗಿಯೇ ಹತ್ತಿಕ್ಕಿದನು. ಆದರೆ ಉತ್ತರದಿಂದ ಆರಂಭವಾದ ದೆಹಲಿ ಸುಲ್ತಾನರ ದಾಳಿಯನ್ನು ಎದುರಿಸುವಲ್ಲಿ ವಿಫಲನಾದನು. ಕ್ರಿ.ಶ.೧೩೧೦ರಲ್ಲಿ ಮಲ್ಲಿಕಾಫರನು ಹೊಯ್ಸಳರನ್ನು ಸೋಲಿಸಿ ದ್ವಾರಸಮುದ್ರವನ್ನು ವಶಪಡಿಸಿಕೊಂಡನು. ಮಲ್ಲಿಕಾಫುರನು ಖಿಲ್ಜಿವಂಶದ ಅಲ್ಲಾವುದ್ದೀನ್ ಖಿಲ್ಜಿಯ ದಂಡನಾಯಕನಾಗಿದ್ದನು. ಖಿಲ್ಜಿ ವಂಶದ ಪತನದ ನಂತರ ತೊಘಲಕ್ ವಂಶ ಅಧಿಕಾರಕ್ಕೆ ಬಂದಿತು. ಈ ವಂಶದ ಮಹಮ್ಮದ್ ಬಿನ್ ತೊಘಲಕನು

ಕ್ರಿ.ಶ. ೧೪ನೇ ಶತಮಾನದಲ್ಲಿ ದಕ್ಷಿಣದ ಕಡೆಗೆ ದಂಡಯಾತ್ರೆ ಕೈಗೊಂಡನು. ಅದರ ಪ್ರತಿಫಲವಾಗಿ ಕ್ರಿ.ಶ. ೧೩೨೭ರಲ್ಲಿ ದ್ವಾರಸಮುದ್ರ ಮತ್ತೊಮ್ಮೆ ದೆಹಲಿ ಸುಲ್ತಾನ ಮಹಮ್ಮದ್ ಬಿನ್ ತೊಘಲಕ್‌ನ ವಶವಾಯಿತು. ಮೂರನೇ ಬಲ್ಲಾಳನ ನಂತರ ಹೊಯ್ಸಳ ಸಾಮ್ರಾಜ್ಯ ದುರ್ಬಲವಾಗುತ್ತ ನಡೆಯಿತು. ಅದೇ ವೇಳೆಗೆ ಸ್ಥಾಪನೆಯಾದ ವಿಜಯನಗರದಲ್ಲಿ ಹೊಯ್ಸಳ ಸಾಮ್ರಾಜ್ಯ ವಿಲೀನವಾಯಿತು.[೬] ಕನ್ನಡ ಪ್ರದೇಶದಲ್ಲಿ ಹೊಯ್ಸಳರ ಆಡಳಿತವನ್ನು ಪುಷ್ಟೀಕರಿಸುವ ಅನೇಕ ಶಾಸನಗಳು ಲಭಿಸಿವೆ. ಆ ಶಾಸನಗಳು ನೀಲಗುಂದ, ಕುರುಗೋಡು, ಬಾಗಳಿ, ಕುರುವತ್ತಿ, ಸಂಡೂರು, ಹಿರೇಹಡಗಲಿ, ಕೊಟ್ಟೂರು, ಅಣೆಜಿಗೆರೆ ಮತ್ತು ಬೆಣ್ಣೆಕಲ್ಲು ಸ್ಥಳಗಳಲ್ಲಿ ದೊರಕಿವೆ. ಗೆಜೆಟಿಯರ್‌ನಲ್ಲಿ ಕುರುಗೋಡು, ಬಾಗಳಿ, ಕುಡಿತಿನಿ, ಓರುವಾಯಿ ಶಾಸನಗಳನ್ನು ಹೆಸರಿಸಲಾಗಿದೆ. ನಂತರ ೨೦೦೨ರಲ್ಲಿ ನಾಗಯ್ಯ ಅವರ ಕೃತಿಯಲ್ಲಿ ಕುರುವತ್ತಿ ಸಂಡೂರು, ಹಿರೇಹಡಗಲಿ ನೀಲಗುಂದ, ಕೊಟ್ಟೂರು, ಅಣೆಜಿಗೆರಿ ಮತ್ತು ಬೆಣ್ಣೆ ಕಲ್ಲು ಶಾಸನಗಳ ಬಗೆಗೆ ತಿಳಿಸುತ್ತಾರೆ.

೨.೨. ಚಾರಿತ್ರಿಕ ಕೃತಿಗಳು: ೧೯ನೇ ಶತಮಾನ

ಭಾರತದಲ್ಲಿ 'ಇತಿಹಾಸ' ಎಂಬ ಶಬ್ದವು ಆಂಗ್ಲ ಭಾಷೆಯ 'ಹಿಸ್ಟರಿ' ಎಂಬ ಶಬ್ದಕ್ಕೆ ತತ್ಸಮಾನ. ಈ ಶಬ್ದವನ್ನು 'ಇತಿ+ಹ+ಆಸ' ಎಂದು ವಿಭಜಿಸಲಾಗಿದೆ. ಇದು ಹಿಂದೆ ವಾಸ್ತವಿಕವಾಗಿ ನಡೆದ ಘಟನೆಗಳ ನಿರೂಪಣೆ ಎಂದು ಅರ್ಥವಾಗುತ್ತದೆ. ಈ ಶಬ್ದವು ಪ್ರಪ್ರಥಮವಾಗಿ ಪ್ರಮುಖ ಉಪನಿಷತ್ತುಗಳಲ್ಲಿ ಒಂದಾದ ಛಾಂದೋಗ್ಯ ಉಪನಿಷತ್ತಿನಲ್ಲಿದೆ. ಇತಿಹಾಸವನ್ನು 'ಪಂಚಮ ವೇದ' ಪರಿಗಣಿಸಿ ಇದರ ಗಾಂಭೀರ್ಯ ಮತ್ತು ಮಹತ್ವವನ್ನು ಎತ್ತಿ ತೋರಿಸಲಾಗಿದೆ. ವೇದಾಂಗಗಳಲ್ಲಿ ಒಂದಾದ ನಿರುಕ್ತವನ್ನು ರಚಿಸಿದ ಯಾಸ್ಕ ಚಾರ್ಯರು, ಋಗ್ವೇದ ಮಂತ್ರಗಳನ್ನು ವಿವರಿಸುವ ಸಂದರ್ಭದಲ್ಲಿ ಅವುಗಳಿಗೆ ಸಂಬಂಧಿಸಿದ ಬ್ರಾಹ್ಮಣ ಗ್ರಂಥಗಳು ಮತ್ತು ಇಂತಹ ಗ್ರಂಥಗಳನ್ನು ರಚಿಸಿದ ಆಚಾರ್ಯರುಗಳು ಕ್ರಮವಾಗಿ 'ಇತಿಹಾಸ' ಮತ್ತು 'ಇತಿಹಾಸಕಾರ'ರೆಂದು ವಿವರಿಸಿದ್ದಾರೆ. ನಿರುಕ್ತದ ಕೆಲವೊಂದೆಡೆಗಳಲ್ಲಿ 'ಇತಿ ಐತಿಹಾಸಿಕಾ'. ಅಂದರೆ ಇತಿಹಾಸಕಾರರ ಪ್ರಕಾರ ಎಂಬ ಪದ ಸಮುಚ್ಚಯವನ್ನು ಬಳಸಿದ್ದಾರೆ. ಇದು ವೇದಾಧ್ಯಯನದಲ್ಲಿ ಐತಿಹಾಸಕ ದೃಷ್ಟಿ ಕೋನದಿಂದ ನೋಡುವಂಥ ಒಂದು ಪಂಡಿತ ವರ್ಗವೇ ಇದ್ದಂತೆ ಕಾಣುತ್ತದೆ. ಮಹಾಭಾರತದಲ್ಲಿ ಇತಿಹಾಸ ಮತ್ತು ಪುರಾಣಗಳ ಜ್ಞಾನವಿಲ್ಲದ ಜನರ ಬಗ್ಗೆ ವೇದಗಳು ಭಯಭೀತವಾಗಿವೆ ಎಂದು ಹೇಳಿದೆ.[೮] ೧೦ನೇ ಶತಮಾನದ ಲಕ್ಷಣ ಗ್ರಂಥಕರ್ತನಾದ ರಾಜಶೇಖರನು ಉಪವೇದಗಳಲ್ಲಿ ಇತಿಹಾಸವನ್ನು ಅತ್ಯಂತ ಹೆಚ್ಚಿನ ವೇದವೆಂದು ಪರಿಗಣಿಸಿದ್ದಾನೆ. ಆದ್ದರಿಂದ ನಮ್ಮ ದೇಶದಲ್ಲಿ ಪ್ರಾಚೀನ ಕಾಲದಿಂದಲೂ ಐತಿಹಾಸಿಕ ವಿಷಯಗಳಿಗೆ ಹಾಗೂ ಇತಿಹಾಸದ ಅಧ್ಯಯನಕ್ಕೆ ತಕ್ಕ ಸ್ಥಾನವನ್ನು ಮತ್ತು ಮಹತ್ವವನ್ನು ಕೊಡಲಾಗಿತ್ತು. ಯಾವುದೇ ಪ್ರದೇಶದ ಜನಸಮುದಾಯದ ಇತಿಹಾಸ ರಚಿಸಬೇಕಾದರೆ ತತ್ಸಂಬಂಧ ಸಮಕಾಲೀನ ಹಾಗೂ ಇತಿಹಾಸದ ಅಧ್ಯಯನಕ್ಕೆ ತಕ್ಕ ಸ್ಥಾನ ಮತ್ತು ಮಹತ್ವವನ್ನು ಕೊಡಲಾಗಿತ್ತು ಯಾವುದೇ ಪ್ರದೇಶದ ಜನಸಮುದಾಯದ ಇತಿಹಾಸವನ್ನು ರಚಿಸಬೇಕಾದರೆ

ತತ್ಸಂಬಂಧ ಸಮಕಾಲೀನ ಹಾಗೂ ಮತ್ತು ಬೃಹತ್‌ಕೋಶ ಮೊದಲಾದ ಕೃತಿಗಳ ಉಲ್ಲೇಖಗಳಿವೆ. ನಿಜವೇದಗಳು ವೇದಾಂಗಗಳು ಅನಂತರ ಕಾಲದ ಪ್ರತ್ಯಕ್ಷ ಪರೋಕ್ಷ ಆಕರಗಳು ಅವಶ್ಯಬೇಕಾಗುವುದು. ಆಕರಗಳಲ್ಲಿ ಮುಖ್ಯವಾಗಿ ಮೂರು ವರ್ಗಗಳು: ಗ್ರಂಥಗಳು, ಸಾಂಸ್ಕೃತಿಕ ವಸ್ತು ಅವಶೇಷಗಳು, ಪರದೇಶಿಯರ ಬರವಣಿಗೆಗಳು. ಇತ್ತೀಚೆಗೆ ಸ್ಥಳೀಯ ದಂತಕಥೆಗಳು, ಪರಂಪರಾನುಗತ ಪುರಾಣಗಳಲ್ಲಿ ಕೂಡ ಆಯಾಯ ಪ್ರದೇಶದ ಐತಿಹಾಸಿಕ ಅಂಶಗಳಿಂದ ಕೂಡಿರುವ ಸಾಧ್ಯತೆ ಕಂಡುಬಂದಿದೆ. ಆದ್ದರಿಂದ ಇಂಥವುಗಳನ್ನು ಗಮನಕ್ಕೆ ತೆಗೆದುಕೊಳ್ಳಬೇಕಾಗುತ್ತದೆ.

ಸಾಹಿತ್ಯಕ ಆಕರಗಳು

ಈ ಪ್ರದೇಶದಲ್ಲಿ ಆದಿ ಇತಿಹಾಸ ಕಾಲದಲ್ಲಿ ರಚನೆಯಾಗಿದ್ದಿರಬಹುವಾದ ಯಾವುದೇ ಸಂಸ್ಕೃತ, ಪ್ರಾಕೃತ ಇಲ್ಲವೆ ಕನ್ನಡ ಗ್ರಂಥಗಳು ಇದುವರೆಗೆ ಬೆಳಕಿಗೆ ಬಂದಿಲ್ಲ. ಆದರೆ ಆದಿ ಕದಂಬರ ತಾಮ್ರ ಶಾಸನಗಳಲ್ಲಿ, ರಾಮಗೀತೆ, ಭೀಷ್ಮಗೀತೆ, ಮನುಗೀತೆ ಹಾಗೂ ಗಂಗ ಅರಸು ದುರ್ವಿನೀತನ ತಾಮ್ರಶಾಸನದಲ್ಲಿ ಭಾರವಿ ಮಹಾಕವಿಯ ಕಿರಾತಾರ್ಜುನೀಯಂ ಎಂಬ ಮಹಾಕಾವ್ಯದ ಮೇಲೆ ಆ ಅರಸನು ಬರೆದ ವ್ಯಾಖ್ಯಾನ ಹಾಗೂ ಶಬ್ದಾವತಾರ ಕೌಟಿಲ್ಯನ ಅರ್ಥಶಾಸ್ತ್ರ, ವಾತ್ಸ್ಯಾಯನನ ಕಾಮಸೂತ್ರ ಮೊದಲಾದ ಮಹಾಕೃತಿಗಳ ಅಧ್ಯಯನವನ್ನು ಸಾಮಾನ್ಯವಾಗಿ ಎಲ್ಲ ಅರಸರುಗಳು ಮಾಡುತ್ತಿದ್ದರು. ಆದರೆ ಇವುಗಳು ಇಡೀ ಭಾರತಕ್ಕೆ ಅನ್ವಯವಾಗುವಂಥ ಅತೀ ಪ್ರಾಚೀನ ಕೃತಿಗಳು. ರಾಮಗೀತೆ, ವಿದುರಗೀತೆ, ಮನುಗೀತೆ ಮುಂತಾದವುಗಳು ರಾಮಾಯಣ, ಮಹಾಭಾರತ ಮತ್ತು ಮನುಸ್ಮೃತಿಯ ಭಾಗಗಳಾಗಿದ್ದು ಎನ್ನುವುದು ಆರಾಜರುಗಳಿಗೆ ವೈಯಕ್ತಿಕ ಜೀವನದಲ್ಲಿ ಮುಖ್ಯವಾಗಿ ಆಡಳಿತದಲ್ಲಿ ಇವೆಲ್ಲವೂ ಮಾರ್ಗದರ್ಶಕವಾಗಿದ್ದ, ದುರ್ವಿನೀತನ ವ್ಯಾಖ್ಯಾನ ಗ್ರಂಥವು ಇದುವರೆಗೆ ಸಿಕ್ಕಿಲ್ಲ.[೯]

ರಾಷ್ಟ್ರಕೂಟ ಚಕ್ರವರ್ತಿ ಅಮೋಘವರ್ಷ ನೃಪತುಂಗ (ಸು ೮೧೪-೮೮೦)ನಿಂದ ರಚಿತವಾಯಿತೆನ್ನಲಾದ ಕವಿರಾಜಮಾರ್ಗವು ಕನ್ನಡ ಸಾಹಿತ್ಯದ ಅತ್ಯಂತ ಪ್ರಾಚೀನ ಲಕ್ಷಣಗ್ರಂಥ. ಇದರ ಕರ್ತೃವಿನ ಬಗ್ಗೆ ವಾದ ವಿವಾದಗಳಿವೆ. ಇತ್ತೀಚಿನ ಶೋಧನೆ ಮತ್ತು ಅಧ್ಯಯನಗಳ ಪ್ರಕಾರ ಇದಕ ಕರ್ತೃ ಶ್ರೀವಿಜಯನೆಂಬ ಬಲವಾದ ಅಭಿಪ್ರಾಯವಿದೆ. ಪ್ರಾಚೀನ ಕನ್ನಡ ವಿವಿಧ ಲಾಕ್ಷಣಿಕ ವಿಷಯಗಳನ್ನು ಇದರಲ್ಲಿ ಚರ್ಚಿಸಲಾಗಿದೆ. ಮುಖ್ಯವಾಗಿ ಅತಿ ವಿಶಿಷ್ಟವಾದ ಕನ್ನಡ 'ಚತ್ತಾನಂ ಮತ್ತು ಬೆಡಂದೆಗಬ್ಬಂ ಹಾಗೂ ಪಗರಣ' ಪ್ರಾಚೀನ ಕನ್ನಡದ ಛಂದಸ್ಸು ಮೊದಲಾದವುಗಳನ್ನು ಸೂಕ್ತ ಉದಾಹರಣೆಗಳಿಂದ ವಿಮರ್ಶಿಸಲಾಗಿದೆ. ಸಂದರ್ಭೋಚಿತವಾಗಿ ಪ್ರಾಚೀನ ಕವಿಗಳನ್ನು ಹಾಗು ಅವರ ಕೃತಿಗಳ ಬಗ್ಗೆ ವಾದ ವಿವಾದಗಳಿವೆ. ವಿಮಲ, ನಾಗಾರ್ಜುನ ಜಯಬಂಧು ಮೊದಲಾದ ಗದ್ಯಕವಿಗಳು ಶ್ರೀವಿಜಯ, ರವಿವರ, ಶಂಕರ ಮೊದಲಾದ ಪದ್ಯ ಕವಿಗಳು ಉಲ್ಲೇಖಿತರಾಗಿದ್ದಾರೆ. ಕ್ರಮವಾಗಿ ಇವರ ಕೃತಿಗಳು ಪ್ರಶ್ನೋತ್ತರ ಮಾಲಾ, ಸುಹೃಲೇಖ ಕರ್ನಾಟಕ ಮಣಿದರ್ಪಣ ಮೊದಲಾದವು. ಇವೆಲ್ಲವೂ ಆಯಾಯ ಕಾಲದಲ್ಲಿಯ ಕನ್ನಡ ಭಾಷೆ ಮತ್ತು ಸಾಹಿತ್ಯದ ಬೆಳವಣಿಗೆ ಹಾಗೂ ಅರಳುವಿಕೆಯನ್ನು ಸೂಚಿಸುತ್ತವೆ.

ಈ ಪ್ರದೇಶದ ಅತ್ಯಂತ ಪ್ರಾಚೀನ ಶಾಸನ ಕವಿಗಳೆಂದರೆ ತಾಳಗುಂದದಲ್ಲಿಯ ಕದಂಬ ಅರಸು ಶಾಂತಿವರ್ಮನ ಕಾಲದ ಸ್ಥಂಬ ಶಾಸನದ ಹಾಗೂ ಐಹೊಳೆಯಲ್ಲಿಯ ಚಾಲುಕ್ಯ ಪ್ರಶಸ್ತಿ ಶಾಸನದ ಕರ್ತೃಗಳಾದ ಕುಬ್ಜ ಮತ್ತು ರವಿಕೀರ್ತಿಯರು ಈ ಶಾಸನಗಳಲ್ಲಿ ಸ್ರಗ್ದರ, ಮತ್ತೇಭವಿಕ್ರೀಡಿತ ಮೊದಲಾದ ಸಂಸ್ಕೃತ ಭಾಷೆಯ ಅತ್ಯುತ್ತಮ ಛಂದಸ್ಸುಗಳನ್ನು ಲೀಲಾಜಾಲವಾಗಿ, ಸಮಯೋಚಿತವಾಗಿ ಈ ಶಾಸನಗಳಲ್ಲಿ ಉಪಯೋಗಿಸಲ್ಪಟ್ಟಿವೆ. ಪಟ್ಟದಕಲ್ಲು ವಿರೂಪಾಕ್ಷ ದೇವಾಲಯದ ಒಂದು ಶಾಸನದಲ್ಲಿ ಉಲ್ಲೇಖಿತವಾದ ದೇವಯ್ಯನ ಮಗ ಅಚಲ ಇವನು ಚಾಲುಕ್ಯ ಅರಸು ಇಮ್ಮಡಿ ವಿಕ್ರಮಾದಿತ್ಯನ ಅಸ್ಥಾನ ಕವಿಯಾಗಿದ್ದನು.[೨೦] ಸಂಸ್ಕೃತ ಶಾಸನಗಳನ್ನು ಬಿಟ್ಟರೆ ಮತ್ತೆ ಯಾವ ಕಾವ್ಯಗಳಾಗಲಿ, ಗ್ರಂಥಗಳಾಗಲಿ ದೊರೆತಿಲ್ಲ.

ಕರ್ನಾಟಕ ಪ್ರದೇಶವನ್ನು ಅಥವಾ ಸ್ಥಳಗಳನ್ನು ಉಲ್ಲೇಖಿಸುವ ಹಾಗೂ ಕೆಲವು ಕನ್ನಡ ಶಬ್ದಗಳುಳ್ಳ ಕೃತಿಗಳು ಲಭ್ಯವಿವೆ. ಅವು ಪರದೇಶಿಯ ಹಾಗೂ ಈ ದೇಶದವು. ಶಾತವಾಹನ ಅರಸು ಹಾಲ ಶಾತಕರ್ಣಿ (ಸು. ಕ್ರಿ.ಶ. ೨೦-೨೪) ರಚಿಸಿದ ಗಾಥಾ ಸತ್ಯಸ ಈ (ಗಾಥಾ ಸಪ್ತಶತೀ) ಎಂಬ ಪ್ರಾಕೃತ ಕಾವ್ಯವು ಉಲ್ಲೇಖನೀಯ ಇದರಲ್ಲಿ ಕೆಲವು ಶಬ್ದಗಳು ಬಹುಮಟ್ಟಿಗೆ ಕನ್ನಡ ಉದಾ. ಅಗ್ಗಳ (ಅಗಳಿ) ತುಪ್ಪ ತುವರಿ (ತೊಗರಿ) ಮೊದಲಾದವು ಈ ಕೃತಿಯಿಂದ ಉತ್ತರ ಕರ್ನಾಟಕವೂ ಸೇರಿಕೊಂಡಂತೆ ದಖನ್ನಿನ ಜನಜೀವನ ಶೈಲಿಯನ್ನು ತಿಳಿಯಲು ತುಂಬಾ ಸಹಾಯಕವಾಗಿದೆ. ಆದಿ ಇತಿಹಾಸ ಕಾಲದ ನೆಲೆಗಳ ಉತ್ಖನನಗಳಲ್ಲಿ ಕಂಡುಬಂದ ಮಾಹಿತಿಗಳು ಗಾಥಾ ಸಪ್ತಶತಿಯ ಚಿತ್ರವನ್ನು ಪುಷ್ಟೀಕರಿಸುತ್ತವೆ. ಇಲ್ಲದೆ ಸನ್ನತಿ, ಮೊದಲಾದೆಡೆಗಳಲ್ಲಿಯ ೧-೨ನೇ ಶತಮಾನದ ಶಾಸನಗಳೂ ಕೂಡ ಪೂರಕ ಆಕರಗಳಾಗಿವೆ. ಇದುವರೆಗೆ ತಿಳಿದ ಮಟ್ಟಿಗೆ ಇಮ್ಮಡಿ ಚಾಲುಕ್ಯ ಪುಲಿಕೇಶಿಯ ಮಗಚಂದ್ರಾದಿತ್ಯನ ಮಡದಿ ವಿಜಯಭಟ್ಟಾರಿಕಾ ಅಥವಾ ವಿಜ್ಜಿಕಾಕರ್ನಾಟಕದ ಪ್ರಥಮ ಕವಯಿತ್ರಿಯೆಂದು ಹೇಳಬಹುದು. ಇವಳು ರಚಿಸಿದ ಕೌಮುದಿ ಮಹೋತ್ಸವ ಎಂಬ ಒಂದು ಸಂಸ್ಕೃತ ನಾಟಕವು ಈಗ ಲಭ್ಯವಿಲ್ಲ. ಮಹಾಕವಿ ಕಾಳಿದಾಸನ ತುರವಾಯ ವೈದರ್ಭಿ ಶೈಲಿಯನ್ನು ಅಷ್ಟೆ ಜಾಣ್ಮೆಯಿಂದ ಪರಿಣಾಮಕಾರಿಯಾಗಿ ಉಪಯೋಗಿಸಿದವಳೆಂದರೆ ಇವಳೊಬ್ಬಳೆ.

ಮೇರು ಕೃತಿಗಳಾದ ೨-೩ನೇ ಶತಮಾನದ ವಾತ್ಸ್ಯಾಯನನ ಕಾಮಸೂತ್ರ, ಮಾಮೂಲನಾರರ ಅಹನಾನೂರು, ವರಾಹಮಿಹಿರನ (ಸು. ೫೦೫-೫೮೭) ಬೃಹತ್ ಸಂಹಿತಾ ಸು ೭ನೇ ಶತಮಾನದ ಪ್ರಪಂಚ ಹೃದಯ ಹಾಗೂ ಅರೆ ಐತಿಹಾಸಿಕ ಗ್ರಂಥಗಳಾದ ಮತ್ಸ್ಯ, ಮಾರ್ಕಂಡೇಯ, ಬ್ರಹ್ಮಾಂಡ, ಪದ್ಮ ಪುರಾಣಗಳಲ್ಲಿ ಕರ್ನಾಟಕದ ವಿಂಗಡನೆಗಳು ಮತ್ತು ಐತಿಹಾಸಿಕ ಘಟನೆಗಳು ಅಲ್ಲಲ್ಲಿ ಉಲ್ಲೇಖಿತವಾಗಿವೆ. ಮೊದಲ ಎರಡರಲ್ಲಿ ಶಾತವಾಹನ ಅರಸು ಕುಂತಲ ಶಾತಕರ್ಣಿಯು ಮಲಯವತಿ ಮಹಾದೇವಿಯನ್ನು ನಿರ್ನಾಮ ಮಾಡಿದುದು.[೨೧] ವಸುಂಪನ್ ಪಾಂಡ್ಯನು ಪುನ್ನಾಟದ ಆಳರಸರನ್ನು ಸೋಲಿಸಿದುದು. ನೆಡುಂಜೆಳಿಯನ್, ಎರುಮೈಯೂರನ್ನು, ನೆಡುನ್ ನೆರಲತನ್ ಪಶ್ಚಿಮಕಡಲತೀರದ ಕದಂಬರನ್ನು ಜಯಿಸಿದ ವಿಷಯಗಳಿವೆ. ಇವುಗಳ ಸತ್ಯಾಸತ್ಯತೆಯು ಚರ್ಚಾಸ್ಪದ ಇತರ ಗ್ರಂಥಗಳಲ್ಲಿ

ವನವಾಸಿ ಕರ್ನಾಟಕ ಸಹ್ಯಾದ್ರಿ ಶ್ರೇಣಿಯ ಬದಿಯಲ್ಲಿಯ ಪರಶುರಾಮ ಭೂಮಿ, ಕುಂತಳ, ಮಹಿರ್ಷಿಕ ಮೊದಲಾದ ಪ್ರದೇಶಗಳನ್ನು ಸಂಕ್ಷಿಪ್ತವಾಗಿ ವರ್ಣಿಸಲಾಗಿದೆ.

ಶ್ರೀಲಂಕಾದ ಸು. ೪ನೇ ಶತಮಾನದ ಐತಿಹಾಸಿಕ ಕಥಾನಕವಾದ ಮಹಾವಂಶದಲ್ಲಿ ಮೌರ್ಯ ಚಕ್ರವರ್ತಿ ಅಶೋಕನು ತನ್ನ ರಾಜಧಾನಿ ಪಾಟಲಿ ಪುತ್ರದಿಂದ ಬನವಾಸಿಗೆ ಒಂದು ಬೌದ್ಧ ಧರ್ಮೋಪದೇಶ ಪ್ರಚಾರಕ ತಂಡವನ್ನು ಕಳುಹಿಸಿದ. ಬನವಾಸಿಯಿಂದ ಥೇರಾರಖ್ಖಿತನ ನೇತೃತ್ವದಲ್ಲಿ ಒಂದು ದೊಡ್ಡ ಬೌದ್ಧ ಭಿಕ್ಷುಗಳ ತಂಡವು ಶ್ರೀಲಂಕಾದ ಅನುರಾಧಪುರದಲ್ಲಿಯ ಅರಸು ವಠ್ಠಗಾಮಿಣಿಯು (ಸು. ೯೯-೧೭ ಕ್ರಿ.ಪೂ) ಕಟ್ಟಿಸಿದ ಮಹಾಸ್ತೂಪದ ಪ್ರತಿಷ್ಠಾಪನೆ ಸಮಾರಂಭದಲ್ಲಿ ಭಾಗವಹಿಸಲು ಹೋದ ವಿಷಯಗಳಿವೆ.

ಇವೆಲ್ಲ ಗ್ರಂಥ ಉಲ್ಲೇಖಗಳನ್ನು ಪರಿಶೀಲಿಸುವಾಗ ಒಂದು ಗಮನಾರ್ಹ ಸಂಗತಿಯು ಕಾಣುತ್ತದೆ. ಬೇರೆ ಬೇರೆ ಗ್ರಂಥಕರ್ತರ, ಪ್ರದೇಶಗಳ, ಕಾಲಮಾನಗಳ ಇವುಗಳಲ್ಲಿ ದಕ್ಷಿಣ ಭಾರತದ ವಿಭಾಗಗಳನ್ನು ಹೇಳುವುದರಲ್ಲಿ ಏಕ ಪ್ರಕಾರವಾಗಿ ಹೊಂದಾಣಿಕೆಯಿರುವುದರಿಂದ ಇವು ಐತಿಹಾಸಕ ತ್ಯವೆಂದು ಹೇಳಲಡ್ಡಿಯಿಲ್ಲ.

ಈ ಸಂದರ್ಭದಲ್ಲಿ ಇನ್ನೊಂದು ಕೃತಿಯನ್ನು ಗಮನಿಸಬೇಕಾಗಿದೆ. ಮಹಾಕವಿ ಕಾಳಿದಾಸನಿಂದ ರಚಿತವಾದ್ದೆಂದು ಹೇಳಲಾದ ಕುಂತಳೇಶ್ವರ ದೌತ್ಯದ ಪ್ರಕಾರ, ಕಾಳಿದಾಸನು ಒಬ್ಬ ಕುಂತಳಾಧಿಪನ ಆಸ್ಥಾನಕ್ಕೆ ಹೋಗಿದ್ದನಂತೆ ಮತ್ತು ಆ ರಾಜನ ಮಗಳು ಅಜಿತಭಟ್ಟಾರಿಕಾ ಉತ್ತರ ಭಾರತದ ಒಬ್ಬ ರಾಜನನ್ನು ಮದುವೆಯಾಗಿದ್ದಳಂತೆ ತಾಳಗುಂದದ ಕದಂಬ ಅರಸು ಶಾಂತಿವರ್ಮನ ಶಾಸನದಲ್ಲಿ ಸೂಚ್ಯವಾಗಿ ಹೇಳಿರುವಂತೆ,[೨೨] ಆ ಅರಸನ ತಂದೆ ಕಾಕುಸ್ಥವರ್ಮನ ಮಗಳು ಗುಪ್ತ ವಂಶದ ರಾಜನನ್ನು ಮದುವೆಯಾದ ಸಂಗತಿಯಿದೆ. ಹೀಗೆ ಗ್ರಂಥ ಹಾಗೂ ಸ್ವಲ್ಪ ಹೆಚ್ಚು ಕಡಿಮೆ ಸಮಕಾಲೀನ ಶಾಸನದ ಉಲ್ಲೇಖಗಳನ್ನು ಸಮನ್ವಯಿಸಿದಾಗ ಆ ಕುಂತಳಾಧಿಪನು ಬಹುಶಃ ಕಾಕುಸ್ಥವರ್ಮನೆಂದು ಮತ್ತು ಇವನ ಮಗಳನ್ನು ಮದುವೆಯಾದ ರಾಜನು ಗುಪ್ತವಂಶದ ಇಮ್ಮಡಿ ಚಂದ್ರಗುಪ್ತನೆಂದು ಬಹುಮಟ್ಟಿಗೆ ಗುರುತಿಸಬಹುದು. ಈ ಕಾವ್ಯದಲ್ಲಿ ಈ ವಿಷಯವುಳ್ಳ ಒಂದು ಪದ್ಯವನ್ನು ಕ್ಷೇಮೇಂದ್ರನ ಔಚಿತ್ಯ ವಿಚಾರಾಚಾರ, ಭೋಜನ ಶೃಂಗಾರ ಪ್ರಕಾಶ ಮತ್ತು ರಾಜಶೇಖರನ ಸರಸ್ವತಿ ಕಂಠಾಭರಣ ಮತ್ತು ಕಾವ್ಯಮೀಮಾಂಸೆಯಲ್ಲಿ ಉಲ್ಲೇಖಿಸಲಾಗಿದೆ. ಕ್ರಿ.ಶ. ಆರಂಭ ಶತಕಗಳ ದಕ್ಷಿಣ ಭಾರತದ ಜೈನಚಾರ್ಯರುಗಳಾದ ೧-೨ನೇ ಶತಮಾನದ ಪುಷ್ಪದಂತ ಭೂತಲಿ, ಕುಂದಕುಂದ ಹಾಗೂ ಸುಮಾರು ೫ನೇ ಶತಮಾನದ ಸಿದ್ಧಸೇನ ಯತೀಶ್ವರ ಮೊದಲಾದವರ ಕೆಲವು ಜೈನ ಗ್ರಂಥಗಳಿವೆ. ಅವುಗಳು ಚ್ಛಖ್ಖಂಡಾಗಮ (ಷಟ್‌ಖಂಡಾಗಮ), ಮೂಲಾಚಾರ ಸಮ್ಮಯಿ ಸುತ್ತ (ಸನ್ಮತಿಸೂತ್ರ), ತ್ರಿಲೋಯ ಪನ್ನತ್ತಿ (ತ್ರಿಲೋಕ ಪ್ರಜ್ಞಪ್ತಿ) ಮೊದಲಾದ ಕೆಲವು ತತ್ವಗ್ರಂಥಗಳಿವೆ. ಇವರಲ್ಲದೆ ಅನಂತರ ಕಾಲದ ಕನ್ನಡ ಕವಿಗಳು ಪ್ರಶಂಸಿಸಿದ ಸಮಂತಭದ್ರ (ಸು. ಕ್ರಿ.ಶ. ೫ನೇ ಶತಮಾನ), ಕವಿಪರಮೇಷ್ಠಿ (ಸು. ೫೫೦) ಹಾಗೂ ಪೂಜ್ಯ ಪಾದರು (ಸು. ೭ನೇ ಶತಮಾನ) ಕನ್ನಡದಲ್ಲಿ ಕೃತಿಗಳನ್ನು ರಚಿಸಿದ್ದು, ಅವು ತರುವಾಯ ಕಾಲದ ಕನ್ನಡ ಕವಿಗಳಿಗೆ

ಸ್ಫೂರ್ತಿದಾಯಕವಾಗಿದ್ದುವೆಂದು ಬಗೆಯಲಾಗಿದೆ. ಆದರೆ ಅವು ಯಾವ ಕನ್ನಡ ಗ್ರಂಥಗಳೆಂಬುದು ತಿಳಿದಿಲ್ಲ. ಇವರು ನಿಜವಾಗಿಯೂ ಕನ್ನಡ ಕವಿಗಳೆಂಬ ವಿಷಯವು ಇನ್ನೂ ಚರ್ಚಾಸ್ಪದ ಆದಾಗ್ಯೂ ವಾಗರ್ಥ ಸಂಗ್ರಹ ಮಹಾಪುರಾಣ ಕನ್ನಡ ಗ್ರಂಥವನ್ನು ಕವಿ ಪರಮೇಷ್ಠಿಯು ರಚಿಸಿದ್ದಿರಬೇಕು. ಆಪ್ತಮಿಮಾಂಸೆ ರತ್ನ ಕರಂಡಕ, ಶ್ರಾವಕಾಚಾರ, ಸಮಂತಭದ್ರರ ಪೂಜ್ಯವಾಹಕ ಕಲ್ಯಾಣಕಾರಕ, ವೈದ್ಯಕೀಯ ವಿಷಯದ ಕಲ್ಯಾಣಕಾರಕ, ಆಗಮ ವಿಷಯದ ತತ್ವಾರ್ಥ ವೃತ್ತಿ ಎಂಬ ಮೊದಲಾದ ಕೆಲವು ಸಂಸ್ಕೃತ ಗ್ರಂಥಗಳು ಲಭ್ಯವಿವೆ.[೨೩]

ಇಂದ್ರನಂದಿಯು ಪ್ರಾಚೀನ ಕಾಲದ ಶ್ರುತಾವತಾರದಲ್ಲಿ ಶ್ಯಾಮಕಾಚಾರ್ಯ ಮತ್ತು ತುಂಬುಲುರಾಚಾರ್ಯರು ಎಂಬ ಇಬ್ಬರು ಜೈನಾಚಾರ್ಯರು ಷಟ್ ಖಂಡಾಗಮದ ಮೇಲೆ ಕನ್ನಡದಲ್ಲಿಯೂ ವ್ಯಾಖ್ಯಾನವನ್ನು ಬರೆದಿರುವುದಾಗಿ ಹೇಳಿದೆ. ಮೊದಲನೆಯವರು ಈ ಗ್ರಂಥದ ಮೇಲೆ ಸಂಸ್ಕೃತ ಹಾಗೂ ಪ್ರಾಕೃತದಲ್ಲಿ ಅಲ್ಲದೆ ಕನ್ನಡದಲ್ಲಿಯೂ ಪದ್ಧತಿಗಳು ಎಂಬ ವ್ಯಾಖ್ಯಾನವನ್ನು ಬರೆದಿರುವಂತೆ, ತುಂಬುಲುರಾಚಾರ್ಯರ ಕನ್ನಡ ವ್ಯಾಖ್ಯಾನದ ಹೆಸರು ಚೂಡಾಮಣಿ, ಆದರೆ ವ್ಯಾಖ್ಯಾನಕಾರರ ಕಾಲಮಾನವು ಇನ್ನೂ ಅಸ್ಪಷ್ಟವಾಗಿಯೇ ಇದೆ. ಕೆಲವು ವಿದ್ವಾಂಸರು ಇವರು ಸು. ಕ್ರಿ.ಶ. ೧-೨ನೇ ಶತಮಾನದವರೆಂದು ತರ್ಕಿಸಿದರೆ ಮತ್ತೆ ಕೆಲವರು ಇವರನ್ನು ೭ನೇ ಶತಮಾನದವರೆಗೂ ಒಯ್ಯುತ್ತಾರೆ. ಹಾಗೆಯೇ ತುಂಬುಲುರಾಚಾರ್ಯರು ಸು. ೪ನೇ ಇಲ್ಲವೆ ೭ನೇ ಶತಮಾನದವರೆಂದು ವಾದಗಳಿವೆ. ಇವರೆಲ್ಲರ ಬಹಳಷ್ಟು ಕೃತಿಗಳು ದೊರೆತಿಲ್ಲ. ಇಲ್ಲವೆ ಉಳಿದಿಲ್ಲ. ಇವೆಲ್ಲವೂ ಸಾಮಾನ್ಯವಾಗಿ ಜೈನಧರ್ಮದ ನೀತಿ, ನಡತೆ, ತತ್ವಗಳಿಗೆ ಸಂಬಂಧಿಸಿವೆ. ಆದರೆ ಕರ್ನಾಟಕ ಪ್ರದೇಶದ ಸಂಸ್ಕೃತಿ ಮತ್ತು ಇತಿಹಾಸ ದೃಷ್ಟಿಯಿಂದ ಈ ಅಲ್ಪ ಸಂಖ್ಯೆಯ ಕೃತಿಗಳ ಅಧ್ಯಯನವನ್ನು ಆಗಬೇಕಾಗಿದೆ.[೨೪] ಕರ್ನಾಟಕದಲ್ಲಿ ಬೌದ್ಧಧರ್ಮದ ಒಂದೇ ಒಂದು ಗ್ರಂಥವೂ ಕೂಡ ಇದುವರೆಗೆ ಸಿಕ್ಕಿಲ್ಲ.

ಇನ್ನು ಪರದೇಶಿಯರ ಬರವಣಿಗೆಗಳನ್ನು ಸ್ವಲ್ಪ ನೋಡೋಣ. ಟಾಲೇಮಿಯ ಎ ಗೈಡ್ ಟು ಜಿಯಾಗ್ರಫಿಯಲ್ಲಿ ಸಮಕಾಲೀನ ದಕ್ಷಿಣ ಭಾರತದಲ್ಲಿ ಪ್ರಸಿದ್ಧ ವಾಣಿಜ್ಯ ಕೇಂದ್ರಗಳಾಗಿದ್ದ ಕೆಲವು ಸ್ಥಳಗಳ ಬಗ್ಗೆ ಸಂಕ್ಷಿಪ್ತ ಮಾಹಿತಿಗಳಿವೆ. ರೋರಿ ಹಾಗೂ ಸುತ್ತಮುತ್ತಲಿನ ದೇಶಗಳ ವರ್ತಕರು ದಕ್ಷಿಣ ಭಾರತ, ಸಿಂಹಳ ದ್ವೀಪ, ಆಗ್ನೇಯ ರಾಷ್ಟ್ರಗಳು ಹಾಗೂ ಚೈನಾ ದೇಶಗಳೊಡನೆ ವ್ಯಾಪಾರ ವ್ಯವಹಾರ ನಡೆಸುತ್ತಿದ್ದ ವರ್ತಕರುಗಳಿಂದ ವಾಣಿಜ್ಯ ಕೇಂದ್ರಗಳ ಬಗ್ಗೆ ವಿಷಯಗಳನ್ನು ಸಂಗ್ರಹಿಸಿ ಸಿದ್ಧಮಾಡಿದ ಆ ಗ್ರಂಥಗಳಲ್ಲಿ ಕರ್ನಾಟಕ ಪ್ರದೇಶದಲ್ಲಿ ವೈಜಯಂತಿ ಹಾಗೂ ಬನವಾಸಿ. ಅಲೊ ಫಲಾಶಿಕಾ, ನಗರೂರು, ತವಸಿ, ಇಂಡಿ, ಗಡಹಿಂಗ್ಲಜ, ಸವಡಿ, ಹಿಪ್ಪರಿ, ಕಲ್ಬೇರಿ, ಮುದುಗಲ್, ಪಟ್ಟದಕಲ್, ಚಿಮ್ಮಲಗಿ, ಬಾದಾಮಿ, ಪಾಂಕ್ತಿಪುರ, ಪುನ್ನಾಟ, ಆಳುಪಖೇಡ, ನಿತ್ರ ಮೊದಲಾದ ಕೇಂದ್ರಗಳನ್ನು ಉಲ್ಲೇಖಿಸಲಾಗಿದೆ. ಈ ಕೇಂದ್ರಗಳ ಅಕ್ಷಾಂಶ, ರೇಖಾಂಶಗಳನ್ನು ಹೇಳಿ ಇವುಗಳ ಸನ್ನಿವೇಶಗಳನ್ನು ಸೂಚಿಸಿದೆ. ಆದರೆ ಈ ಅಕ್ಷಾಂಶ ರೇಖಾಂಶಗಳು ಸರಿಯಾಗಿಲ್ಲ. ಬನವಾಸಿ ಹೆಸರಿಗೆ ಸಂಬಂಧಿಸಿದ ಶಾಸನಗಳಲ್ಲಿಯ ಉಲ್ಲೇಖಗಳನ್ನು

ಗಮನಿಸಿದಾಗ ವೈಜಯಂತಿ ಮತ್ತು ಬನವಾಸಿ ಒಂದೇ. ಆದರೆ ಟಾಲೆಮಿಯ ಕೃತಿಯಲ್ಲಿ ಈ ಹೆಸರುಗಳನ್ನು ಭಿನ್ನ ಅಕ್ಷಾಂಶಗಳಲ್ಲಿ ತೋರಿಸಲಾಗಿದೆ. ವೈಜಯಂತಿಯು ಅಕ್ಷಾಂಶದಂತೆ ಅದು ಮಂಗಳೂರು ಹತ್ತಿರವಿತ್ತು. ಹೀಗೆ ಈ ಉಲ್ಲೇಖಗಳು ಸ್ವಲ್ಪಮಟ್ಟಿಗೆ ದೋಷಪೂರಿತವಾಗಿವೆ.

ಮೇಲೆ ಉಲ್ಲೇಖಿಸಿದ ೧೮ ಸ್ಥಳಗಳಲ್ಲಿ ೧೨ ಈಗಿನ ಉತ್ತರ ಕರ್ನಾಟಕದಲ್ಲಿ ಕೃಷ್ಣಾ ಬಯಲು ಪ್ರದೇಶದಲ್ಲಿವೆ. ಎರಡು ಕಡಲುತೀರ ಪ್ರದೇಶದಲ್ಲಿ ಒಂದು ಮಾತ್ರ ದಕ್ಷಿಣ ಕರ್ನಾಟಕದಲ್ಲಿ ಮೈಸೂರಿನ ಬಳಿ ಇದೆ. ಬಹಳಷ್ಟು ಈ ಸ್ಥಳಗಳಲ್ಲಿ ಆದಿ ಇತಿಹಾಸ ಕಾಲದ ಜನ ವಾಸ್ತವ್ಯ ನಗರ ನೆಲೆಗಳಿರುವುದು ಗಮನಾರ್ಹ. ಉದಾಹರಣೆಗೆ ಬನವಾಸಿ ಬಾದಾಮಿ, ಹಾನಗಲ್, ಪಟ್ಟದಕಲ್, ಇಂಡಿ ಇತ್ಯಾದಿ, ಆಳುಪಖೇಡ ಉಡುಪಿ ಹತ್ತಿರದ ಈಗಿನ ಉದ್ಯಾವರವಾಗಿದ್ದು, ಇಲ್ಲಿ ಪ್ರಾಚೀನ ಜನವಸತಿಯ ಕುರುಹುಗಳಿವೆ. ಮಂಗಳೂರು ಹತ್ತಿರದ ಮಣಿ ಮತ್ತು ಉಪ್ಪಿನಂಗಡಿಯಲ್ಲಿ ಅತೀ ಪ್ರಾಚೀನ ಅಂದರೆ ಹಳೇ ಶಿಲಾಯುಗದ ಸೂಕ್ಷ್ಮಶಿಲಾಯುಗದ ಕಲ್ಲಿನ ಉಪಕರಣಗಳು ಈಚೆಗೆ ಶೋಧವಾಗಿವೆ.[೨೫] ಆದ್ದರಿಂದ ಈ ಪ್ರದೇಶದಲ್ಲಿ ಅನಂತರ ಪೂರ್ವಭಾವಿ ಹಾಗೂ ಆದಿ ಇತಿಹಾಸಕಾಲದ ಜನವಸತಿಯು ಸ್ಥಾನಗಳಿರುವ ಸಾಧ್ಯತೆಯಿದೆ. ಜೊತೆಗೆ ಕೆಲವೊಂದೆಡೆಗಳಲ್ಲಿ ಅಂದರೆ ಬನವಾಸಿ ಹಾನಗಲ್ ಹತ್ತಿರದ ಅಕ್ಕಿ ಆಲೂರಿನಲ್ಲಿ ರೋಂ ಸಾಮ್ರಾಜ್ಯದ ೧-೫ನೇ ಶತಮಾನದ ಬೆಳ್ಳಿ ಚಿನ್ನದ ನಾಣ್ಯಗಳ ಹುಂಡಿಗಳು ಆಕಸ್ಮಿಕವಾಗಿ ಬೆಳಕಿಗೆ ಬಂದಿವೆ.

ಇನ್ನೂ ಸು ೨ನೇ ಶತಮಾನದ ಒಂದು ಗ್ರೀಕ್ ಪ್ರಹಸನದ ಕಡೆಕಣ್ಣು ಹಾಯಿಸೋಣ. ೧೮೯೯ರಲ್ಲಿ ಈಜಿಪ್ಟದ ಅಕ್ಸಿರಿಂಕಸ್ ಬಳಿ ಆಕಸ್ಮಿಕವಾಗಿ ಕಂಡುಬಂದ ಪ್ರಾಚೀನ ಲೇಖನ ಸಂಕಲನದ ಮೂರನೇ ಭಾಗದ ೪೧೨ನೇ ವಿಭಾಗದಲ್ಲಿ ಈ ಪ್ರಹಸನವಿದೆ. ಪಶ್ಚಿಮ ಕಡಲ ತೀರ ಪ್ರದೇಶದಲ್ಲಿ ಗ್ರೀಕರ ಹಡಗುದುರಂತ; ಉದ್ಯಾವರ ಸಮೀಪದ ಅಲ್ಪೆ ಅಥವಾ ಮಲ್ಪೆಯ ನಾಯಕನಿಂದ ಸ್ತ್ರೀಯರೂ ಸೇರಿದಂತೆ ಆ ಹಡಗಿನ ಜನರವಶಪಡಿಸುವಿಕೆ, ಮತ್ತೆ ಕ್ರಮೇಣ ಈ ಜನರು ಚತುರತೆಯಿಂದ ತಪ್ಪಿಸಿಕೊಂಡು ತಮ್ಮ ಜನ್ಮಭೂಮಿಗೆ ಹಿಂದಿರುಗಿದುದು; ಈ ಘಟನೆಗಳನ್ನು ಹೆಣೆದು ಸೃಷ್ಟಿಸಿದ ಪ್ರಹಸನವಾಗಿದೆ ಆ ಗ್ರೀಕ್ ಜನಗಳು ನಾಯಕನ ವಶದಲ್ಲಿದ್ದ ಸ್ವಲ್ಪ ಸಮಯದಲ್ಲಿ ಸ್ಥಳೀಯರೊಡನೆ ಮಾತನಾಡುವ ಪ್ರಯತ್ನದಲ್ಲಿ ಅವರು ಕಲಿತಿದ್ದಿರಬಹುದಾದಲಲ್ಲೆ, ಮೀನ್ಯೆ, ಲಸು ಬಡಿಯ ಮೊದಲಾದ ಕೆಲವು ಸ್ಥಳೀಯ ಶಬ್ದಗಳು ಕನ್ನಡವೆಂದು ವಾದವಿದೆ. ಆದರೆ ಈ ಪ್ರಹಸನದ ಘಟನೆಗಳು ನಡೆದ ಸ್ಥಳವನ್ನು ಗುರುತಿಸುವ ಹಾಗೂ ಅಪರಿಚಿತ ಶಬ್ದಗಳು ಕನ್ನಡವೆಂಬುದರ ಬಗ್ಗೆ ಇನ್ನೂ ಚರ್ಚೆಯಿದೆ.

ಪುರಾತತ್ವ ಆಕರಗಳು

ಹೀಗೆ ಈ ಕಾಲದಗ್ರಂಥ ಆಕರಗಳು ತೀರಕಡಿಮೆ ಹಾಗೂ ಅಷ್ಟಾಗಿ ಉಪಯುಕ್ತವಾಗಿರದ ಸ್ಥಿತಿಯಲ್ಲಿ ಪುರಾತತ್ವ ಆಕರಗಳು ತಕ್ಕಮಟ್ಟಿಗೆ ಆಶಾದಾಯಕವಾಗಿವೆ. ಅಲ್ಲಲ್ಲಿಯ ಕೆಲವು ತೆರವುಗಳನ್ನು ನಿಖರವಾಗಿ ಪೂರ್ಣ ಮಾಡಲು ಉಪಯುಕ್ತವಾಗಿವೆ. ಅಷ್ಟೇ ಅಲ್ಲ. ಈಗ ತಿಳಿದಿರುವ ಮಟ್ಟಿಗೆ ಆದಿ ಇತಿಹಾಸ

ಕಾಲದ ಆರಂಭದ ಕಾಲಕ್ಕಿಂತಲೂ ಬಹಳ ಹಿಂದಿನಿಂದಲೂ ಅಂದರೆ ಪ್ರಾಗಿತಿಹಾಸ ಕಾಲದಿಂದ ಬೆಳೆದು ಬಂದ ಜನಸಾಮಾನ್ಯರ ಜೀವನ ಶೈಲಿ ಸಾಧನೆಗಳನ್ನು ಮತ್ತು ಸಂಸ್ಕೃತಿಯ ಮುಖ್ಯ ಘಟ್ಟಗಳನ್ನು ತಿಳಿಯಲು ಸಾಧ್ಯವಾಗಿದೆ.[೨೧] ಆದರೆ ಇಂಥ ಎಲ್ಲ ಪ್ರಕಾರಗಳ ಪುರಾತತ್ವ ಕುರುಹುಗಳ ಆಕಸ್ಮಿಕ ಹಾಗೂ ವ್ಯವಸ್ಥಿತ ಶೋಧನೆ ಮತ್ತು ಇವುಗಳ ಮಹತ್ವ ಗೊತ್ತಾಗಲು ತೊಡಗಿದ್ದು ಹೆಚ್ಚು ಕಡಿಮೆ ೧೯ನೇ ಶತಮಾನದ ಮಧ್ಯಭಾಗದಿಂದ ಪ್ರಾದೇಶಿಕ ಅನ್ವೇಷಣೆ ಹಾಗೂ ಉತ್ಖನನಗಳಿಂದ ಶೋಧವಾದ ಪುರಾತತ್ವ ಸಾಂಸ್ಕೃತಿಕ ಅವಶೇಷಗಳಲ್ಲಿ ಕಾಲಾನುಕ್ರಮವಾಗಿ ಎರಡು ಭಾಗಗಳಿವೆ. ೧. ಪ್ರಾಗೈತಿಹಾಸಿಕ ಮತ್ತು ೨. ಐತಿಹಾಸಿಕ

ಯೂರೋಪ್, ಆಫ್ರಿಕಾ ಮತ್ತು ಭಾರತದಲ್ಲಿಯ ಪ್ರಾಗೈತಿಹಾಸಿಕ ಅನ್ವೇಷಣೆ ಹಾಗೂ ಅನಂತರ ಉದ್ದೇಶಿತ ವೈಜ್ಞಾನಿಕ ಅಧ್ಯಯನಗಳಿಂದ ನಂಬಲಸಾಧ್ಯವಾದಷ್ಟು ಪ್ರಾಚೀನತಮ ಕಾಲದಿಂದ ಇತಿಹಾಸ ಕಾಲದವರೆಗಿನ ಮಾನವ ಸಂಸ್ಕೃತಿಯ ವಿಕಸನ ಹಂತಗಳು ಸ್ಪಷ್ಟವಾಗುತ್ತಾ ಬಂದಿವೆ. ಪ್ರಾಗೈತಿಹಾಸಿಕ ಸಂಸ್ಕೃತಿ ಪ್ರಗತಿಯಲ್ಲಿ ಕಾಲಾನುಕ್ರಮವಾಗಿ ೧. ಆದಿ ಮಧ್ಯ ಮತ್ತು ಅಂತ್ಯ ಎಂದು ಗುರುತಿಸಬಹುದಾದ ಮೂರು ಅನುಕ್ರಮ ಉಪಹಂತಗಳುಳ್ಳ ಹಳೆ ಶಿಲಾಯುಗ. ೨. ಸೂಕ್ಷ್ಮಶಿಲಾಯುಗ. ೩. ಹೊಸ ಶಿಲಾಯುಗ. ೪. ಕಂಚಿನ ಇಲ್ಲವೆ ಶಿಲಾ-ತಾಮ್ರಯುಗ ಮತ್ತು ಕೊನೆಯದಾಗಿ ೫. ಆದಿ, ಕಬ್ಬಿಣಯುಗದ ಮಾನವರು ಎಂಬ ಐದು ಪ್ರಮುಖ ಘಟ್ಟಗಳನ್ನು ಸ್ಪಷ್ಟವಾಗಿ ಗುರುತಿಸಲಾಗಿದೆ.[೨೨]

ಇಂದಿನ ಕರ್ನಾಟಕದಲ್ಲಿಯ ಪ್ರತಿಯೊಂದು ಭಾಗದಲ್ಲಿಯ ನದಿ ಬಯಲುಗಳಲ್ಲಿ ಆದಿ ಹಳೆ ಶಿಲಾಯುಗ ನೆಲೆಗಳಿವೆ. ಮಲಪ್ರಭೆಯ ಖ್ಯಾಡ ಡಾಣಕ ಶಿರೂರು (ಬಿಜಾಪುರ ಜಿಲ್ಲೆ), ಘಟಪ್ರಭೆಯ ಅನಗವಾಡಿ (ಬಾಗಲಕೋಟೆ ಹತ್ತಿರ), ಕೃಷ್ಣೆಯ ಹುಣಸಗಿ (ಗುಲ್ಬರ್ಗಾ ಜಿಲ್ಲೆ), ತುಂಗಭದ್ರೆಯ ನಿಟ್ಟೂರು (ಬಳ್ಳಾರಿ ಜಿಲ್ಲೆ), ಕಿಬ್ಬನಹಳ್ಳಿ, (ತುಮಕೂರು ಜಿಲ್ಲೆ), ನೇತ್ರಾವತಿಯ ಮಣಿ (ಮಂಗಳೂರು ಜಿಲ್ಲೆ) ಮೊದಲಾದವು, ಅನಗವಾಡಿ ಮತ್ತು ಹುಣಸಗಿಯಲ್ಲಿ ಈ ಸಾಂಸ್ಕೃತಿಕ ಹಂತದ ಕೆಲವು ಮಹತ್ವ ಅಂಶಗಳು ಗಮನಾರ್ಹ ಇವು ಆದಿಹಳೆ ಶಿಲಾಯುಗ ಮಾನವ ಕಾರ್ಯಗಾರದ ಮೂಲ ನೆಲೆಗಳು. ಅನಗವಾಡಿಯಲ್ಲಿ ಆದಿ ಹಳೆಶಿಲಾಯುಗ ಹಂತದಿಂದ ಮಧ್ಯ ಹಳೆ ಶಿಲಾಯುಗ ಹಂತವನ್ನು ತಲುಪಿದ ಬಗ್ಗೆ ಒಂದೆರಡು ಸುಳುವುಗಳಿವೆ. ಹುಣಸಗಿಯಲ್ಲಿ ಕೆಲವು ಸ್ವಾರಸ್ಯ ಸಂಗತಿಗಳಿವೆ. ಆದಿ ಹಳೆ ಶಿಲಾಯುಗ ಮಾನವ ತನ್ನ ಉಪಕರಣ ತಯಾರಿಕೆಯ ತಂತ್ರದಲ್ಲಿ ಉಪಯೋಗಿಸಿದ ಪೀಠ ಹಾಗೂ ಇದರ ಎದುರಿನಲ್ಲಿ ತಂತ್ರಗಾರನು ಕೆಲಸ ಮಾಡುವಾಗ ಕುಳಿತುಕೊಂಡಿದ್ದಿರಬಹುದಾದ ಕಲ್ಲಿನ ಆಸನ, ತಯಾರಿಕೆಯಲ್ಲಿ ಉಂಟಾದ ಪುಡಿ ಚಕ್ಕೆಗಳು, ಅನುಪಯುಕ್ತ ಕಲ್ಲು ಚೂರುಗಳು, ಅರೆ ಉಪಕರಣಗಳು ಹೊಸಸಿದ್ಧ ಉಪಕರಣಗಳು ಮೊದಲಾದವು ಒಂದೆಡೆಯಲ್ಲಿದ್ದು, ಇದೊಂದು ಉಪಕರಣಗಳ ಕಾರ್ಯಗಾರದ ಮೂಲನೆಲೆಯೆಂಬುದು ಖಚಿತವಾಗಿದೆ.[೨೩] ಇವುಗಳೊಡನೆ ಸ್ವಲ್ಪ ದೂರದಿಂದ ಉದ್ದೇಶಪೂರ್ವಕವಾಗಿ ತಂದ ಕೆಮ್ಮಣ್ಣಿನ ತುಂಡುಗಳಿದ್ದವು. ಪ್ರಾಯಶಃ ಆಯ್ದ ಕೆಲವು ಉಪಕರಣಗಳಿಗೆ ಬಣ್ಣ ಹಾಕಿರಬಹುದೆಂದು ತರ್ಕ. ಇದುವರೆಗೆ

ತಿಳಿದ ಮಟ್ಟಿಗೆ, ಆದಿ ಹಳೆಶಿಲಾಯುಗ ಮಾನವನು ಕೃತಕವಾಗಿ ಆಶ್ರಯವನ್ನು ನಿರ್ಮಿಸಿಕೊಂಡು ಕುರುಹುಗಳುಳ್ಳ ನೆಲೆಯು ಇಡಿ ಭಾರತದಲ್ಲಿ ಇದೊಂದೆ.

ನಿಟ್ಟೂರಿನಲ್ಲಿ (ಬಳ್ಳಾರಿ ಜಿಲ್ಲೆ) ದೊರೆತ ಆದಿ ಹಳೆಶಿಲಾಯುಗದ ಉರುಟುಕಲ್ಲಿನ ಉಪಕರಣಗಳು ಇತರ ನೆಲೆಗಳಲ್ಲಿಯ ತಿರುಳು ಕಲ್ಲಿನ ಇಲ್ಲವೆ ದಪ್ಪ ಚಕ್ಕೆ ಉಪಕರಣಗಳಿಂದ ತಾಂತ್ರಿಕವಾಗಿ ಮತ್ತು ಆಕರಗಳಲ್ಲಿ ಬಿನ್ನವಾಗಿದ್ದು ಬೇರೆ ಒಂದು ಪದ್ಧತಿಯನ್ನೆ ಸೂಚಿಸುತ್ತವೆ.[೨೯] ಮಧ್ಯ ಹಲೆ ಶಿಲಾಯುಗ ವಿಶೇಷವಾಗಿ ಅಂತ್ಯ ಹಳೆ ಶಿಲಾಯುಗದ ನೆಲೆಗಳು ವಿರಳವೆಂದೇ ಹೇಳಬಹುದು. ಸಾಲ್ವಡಗಿ, ಇಂಗಳೇಶ್ವರ, ತಕ್ಕನ ಹಳ್ಳಿ, ಕಟ್ಟೆಬೆಳಗಲಿ ಮೊದಲಾದವು ಪ್ರಮುಖವಾದವು. ಬೀದರ ಜಿಲ್ಲೆಯ ಮಾಂಜ್ರಾ ಕಾರಂಜಾ ಭಾಗದಲ್ಲಿಯೂ ಈ ಸಾಂಸ್ಕೃತಿಕ ನೆಲೆಗಳಿವೆ.

ಮಲೆನಾಡಿನ ಭಾಗದಲ್ಲಿಯ ಸೂಕ್ಷ್ಮ ಶಿಲಾಯುಗ ನೆಲೆಗಳನ್ನು ಸ್ವಲ್ಪ ಹೆಚ್ಚು ಕಡಿಮೆ ಕಾಲಾನುಕ್ರಮದಲ್ಲಿ ಮೂರು ವರ್ಗಗಳನ್ನಾಗಿ ವಿಂಗಡಿಸಲಾಗಿದೆ. ಇವಲ್ಲದೆ ಸಂಗನಕಲ್ಲು ಜಾಲಹಳ್ಳಿ, ಉಪ್ಪಿನಂಗಡಿ, ಕಿಬ್ಬನಹಳಳಿ, ಮೊದಲಾದವು ಮಹತ್ವದ ನೆಲೆಗಳು, ಸಂಗನಕಲ್ಲಿನ ಉತ್ಖನನಗಳಲ್ಲಿ ಸ್ಪಷ್ಟವಾಗಿ ಸೂಕ್ಷ್ಮ ಶಿಲಾಯುಗ ಹಂತ ಮತ್ತು ಇದಕ್ಕೂ ಪೂರ್ವದ ಅಪರೂಪದ ಹಂತವೊಂದು ಇದೆ. ಮರಳಬಾವಿಯು ಒಂದು ವಿಶೇಷವಾದ ನೆಲೆ. ಇಲ್ಲಿ ಮಾತ್ರ ಸ್ಪಷ್ಟವಾಗಿ ಹಳೆಶಿಲಾಯುಗದ ಆದಿ, ಮಧ್ಯ ಮತ್ತು ಅಂತ್ಯ ಹಾಗೂ ಸೂಕ್ಷ್ಮಶಿಲಾಯುಗ ಹಂತಗಳ ಉಪಕರಣಗಳು ಕ್ರಮವಾಗಿ ಒಂದರ ಮೇಲೆ ಒಂದರಂತೆ ನಾಲ್ಕು ಪದರುಗಳಲ್ಲಿದ್ದುದು ಖಚಿತವಾಗಿ ಕಂಡುಬಂದದ್ದರಿಂದ ಪ್ರಥಮವಾಗಿ ಈ ಹಂತಗಳ ಕಾಲಾನುಕ್ರಮ ಮತ್ತು ಸಾಂಸ್ಕೃತಿಕ ಅನುಕ್ರಮನಿಸ್ಸಂಶಯವಾಗಿ ಗೊತ್ತಾಯಿತು.

ಮಾಂಜ್ರಾ-ಕಾರಂಜಾದಿಂದ ಕಾವೇರಿಯವರೆಗೆ ವಿವಿಧ ಪರಂಪರೆಯ ಪೂರ್ವಭಾವಿ ಇತಿಹಾಸ ಸಂಸ್ಕೃತಿಯ ನೂರಾರು ನೆಲೆಗಳಿವೆ. ತಿರುಮಕೂಡಲು ನರಸೀಪುರ, ಬನಹಳ್ಳಿ ಮತ್ತು ಹಳ್ಳೂರು ಮುಖ್ಯವಾಗಿ ನೂತನ ಶಿಲಾಯುಗ ನೆಲೆಗಳು ಕೃಷ್ಣಾ-ತುಂಗಭದ್ರ ಬಯಲಿನ ಬ್ರಹ್ಮಗಿರಿ, ತೆಕ್ಕಲಕೋಟೆ, ಮಸ್ಕಿ, ಪಿಕ್ಕಿಹಾಳ, ಕೃಷ್ಣಾ-ಭೀಮಾ ಪ್ರದೇಶದ ಬೂದಿಹಾಳ, ಕೊಡೆಕಲ್ ಇವು ತಾಮ್ರ ಉಪಕರ್ರಾಭರಣಗಳ ಬಳಕೆಯಿದ್ದ ಸುಧಾರಿಸಿದ ಹಂತದ ನೂತನ ಶಿಲಾಯುಗ ನೆಲೆಗಳು, ಕೃಷ್ಣಾ ಮೇಲ್ದಂಡೆ ಭಾಗದ ತೇರದಾಳ್, ಮಂಗಸೂಳಿ, ಸತ್ತಿ, ಕಡಚಿ ಮೊದಲಾದವು ಸ್ಪಷ್ಟವಾಗಿ ಶಿಲಾ-ತಾಮ್ರಯುಗ ನೆಲೆಗಳು. ಟಿ. ನರಸೀಪುರ, ಬ್ರಹ್ಮಗಿರಿ, ಮಸ್ಕಿ ಮೊದಲಾದ ನೆಲೆಗಳ ಉತ್ಖನನಗಳಲ್ಲಿ ಸ್ಪಷ್ಟವಾಗಿ ಕಂಡುಬಂದಂತೆ ಶಿಲಾ-ತಾಮ್ರಯುಗ, ಇಲ್ಲವೇ ಮುಂದುವರೆದ ನೂತನ ಶಿಲಾಯುಗ, ಕಬ್ಬಿಣಯುಗದ ಬೃಹತ್ ಶಿಲಾ ಸಂಸ್ಕೃತಿ ಮತ್ತು ಆದಿ ಇತಿಹಾಸ ಹಂತಗಳ ಸಾಂಸ್ಕೃತಿಕ ಅವಶೇಷಗಳು ಈ ಅನುಕ್ರಮದಲ್ಲಿ ಮಣ್ಣಿನ ಪದರುಗಳಲ್ಲಿದ್ದವು.[೩೦] ಈ ಉತ್ಖನನಗಳಲ್ಲಿ ಇನ್ನೊಂದು ಸೂಕ್ಷ್ಮ ಅಂಶವು ತಿಳಿದಿದೆ. ಶಿಲಾ ತಾಮ್ರದ ಹಂತದಲ್ಲಿಯ ನೂತನ ಶಿಲಾಯುಗದ ಹಾಗೂ ಕಬ್ಬಿಣಯುಗದ ಬೃಹತ್ ಶಿಲಾ ಸಂಸ್ಕೃತಿಯ ಕೊನೆಯ ಅವಧಿಯಲ್ಲಿ ಕ್ರಮವಾಗಿ ಎರಡನೆಯ ಸಂಸ್ಕೃತಿಯ ಮತ್ತು ಆದಿ ಇತಿಹಾಸಕಾಲದ ಸಂಸ್ಕೃತಿಯ ವಿಶಿಷ್ಟ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ.

ಇದು ಆಯಾ ಭಾಗಗಳಲ್ಲಿಯ ನಿರಂತರ ಸಾಂಸ್ಕೃತಿಕ ಬೆಳವಣಿಗೆ ಮತ್ತು ಆಯಾಯ ಹಂತದ ಸ್ಥೂಲ ಕಾಲಮಾನವನ್ನು ತಿಳಿದುಕೊಳ್ಳಲು ಸಹಾಯಕಾರಿಯಾಗಿದೆ. ಈ ಉತ್ಖನನಗಳಿಂದ ಈ ಸಂಸ್ಕೃತಿಗಳ ಹೆಚ್ಚು ಕಡಿಮೆ ಸರಿಯಾದ ಕಾಲಮಾನಗಳನ್ನಲ್ಲದೆ, ಆಯಾಯ ಜನ ಸಮುದಾಯಗಳ ವಾಸ್ತವ್ಯದ ಕ್ರಮ, ವಸತಿಗಳು, ಆಹಾರ ಪದ್ಧತಿ, ಉದ್ಯೋಗ, ಕಲೆ, ಕಟ್ಟುಕಟ್ಟಳೆಗಳು, ಶವಸಂಸ್ಕಾರ ಕ್ರಮ, ಚಲನವಲನ, ಇತರ ಸಮುದಾಯಗಳೊಡನೆ ಸಂಪರ್ಕ ಮೊದಲಾದ ಸಾಮಾಜಿಕ ವಿಷಯಗಳನ್ನು ತಿಳಯಲು ಸಾಧ್ಯವಾಗಿದೆ. ಸಂಗನಕಲ್ಲಿನ ನೂತನ ಶಿಲಾಯುಗ ಜನರು ವಾಸಿಸುತ್ತಿದ್ದ ಗುಡಿಸಲಿನ ನಿರ್ಮಿತಿ, ವಿನ್ಯಾಸ, ಉಪಯೋಗಿಸಿದ ಸರಕುಗಳು, ಮಂಗಸೂಳಿಯ ಮನೆಗಳ ಬಳಿ ಮಣ್ಣನ್ನು ಹಾಕಿ ದಮ್ಮಸ್ಸು ಮಾಡಿದ ನೆಲೆಗಳು ಶಿಲಾತಾಮ್ರಯುಗ ಜನರ ಮಣ್ಣಿನ ಪಾತ್ರೆಗಳ ಮೇಲಿನ ಒಳ್ಳೆ ಕಲಾ ಅಭಿರುಚಿಯನ್ನು ತೋರಿಸುವ ನಾನಾ ಪ್ರಕಾರಗಳ ವರ್ಣ ರೇಖಾಚಿತ್ರಗಳು, ಈ ಒಂದೊಂದೂ ಆಯಾಯ ಜನಸಮುದಾಯದ ಜೀವನಶೈಲಿಯ ವೈಶಿಷ್ಟ್ಯವನ್ನು ತೋರಿಸುತ್ತದೆ.[೩೧]

ಬಿದರ ಜಿಲ್ಲೆ ಹಾಗೂ ಗುಲ್ಬರ್ಗಾ ಮತ್ತು ಬಿಜಾಪುರ ಜಿಲ್ಲೆಗಳ ಉತ್ತರ ಭಾಗಗಳನ್ನು ಹೊರತುಪಡಿಸಿ ಇತರೆ ಎಲ್ಲೆಡೆಗಳಲ್ಲಿ ಬೃಹತ್ ಶಿಲಾ ಸಂಸ್ಕೃತಿ ನೆಲೆಗಳಿವೆ. ಬಹುಸಂಖ್ಯೆಯ ಇವು ವಿವಿಧ ರೀತಿಯ ಕಲೆಗಳ ನೆಲೆಗಳು. ಈ ಜನರ ವಾಸ್ತವ್ಯದ ನೆಲೆಗಳು ತೀರಾ ಕಡಿಮೆ ಸಂಖ್ಯೆಯಲ್ಲಿ ಕಂಡುಬಂದಿರುವುದು ಕುತೂಹಲಕಾರಿ. ತಡಕನಹಳ್ಳಿ, ಕೊಮಾರನಹಳ್ಳಿ, ತೇರವಾಳ, ಹಳಿಂಗಳಿ ಮೊದಲಾದ ಬೃಹತ್ ಶಿಲಾ ಗೋರಿ ನೆಲೆಗಳ ಉತ್ಖನಗಳಿಂದ ನಾನಾ ವಿಧದ ಬೃಹತ್ ಶಿಲಾಗೋರಿಗಳ ರಚನೆ ಮತ್ತು ವಿನ್ಯಾಸ. ಶವಸಂಸ್ಕಾರ ವಿಧಾನಗಳು ಹಾಗೂ ಶವಸಂಸ್ಕಾರಗಳಲ್ಲಿ ಉಪಯೋಗಿಸಿದ ಮಣ್ಣಿನ ಪಾತ್ರೆಗಳ ಕಬ್ಬಿಣ ಉಪಕರಣಗಳುಳ್ಳ ಮತ್ತು ಅಸ್ಥಿ ಅವಶೇಷಗಳಿಂದ ಒಂದೇ ಕಲ್ಮನೆಯಲ್ಲಿ ಅಥವಾ ಶವಕೋಣೆಯಲ್ಲಿ ಒಬ್ಬ ವ್ಯಕ್ತಿಗಿಂತ ಹೆಚ್ಚು ವ್ಯಕ್ತಿಗಳ ಅಸ್ಥಿ ಸಂಸ್ಕಾರವಾಗಿರುವ ಮೊದಲಾದ ಸ್ವಾರಸ್ಯಕರ ವಿಷಯಗಳು ತಿಳಿದಿವೆ. ಮಸ್ಕಿ, ಬ್ರಹ್ಮಗಿರಿ, ಸಂಗನಕಲ್ಲು ಮೊದಲಾದೆಡೆಗಳಲ್ಲಿಯ ಈ ಜನರ ಕೆಲವೇ ವಾಸ್ತವ್ಯ ನೆಲೆಗಳ ಉತ್ಖನನಗಳಿಂದ ಇವರ ಸಾಮಾನ್ಯ ನಿತ್ಯ ಜೀವನದ ಸ್ವರೂಪವೂ ಶೈಲಿಯೂ ತಿಳಿದುಬಂದಿದೆ. ಇನ್ನೊಂದು ಗಮನಾರ್ಹ ಅಂಶವೆಂದರೆ, ಹಳ್ಳೂರು, ತಡಕನಹಳ್ಳಿ, ಕೊಮಾನರಹಳ್ಳಿ ನೆಲೆಗಳಲ್ಲಿಯ ಬೃಹತ್ ಸಂಸ್ಕೃತಿಯ ಸಂಕೀರ್ಣದಲ್ಲಿ ಒಂದು ವಿಶಿಷ್ಟ ಮಾದರಿಯ ಮಣ್ಣಿನ ಪಾತ್ರೆಗಳು ಗುಜರಾತ್ ಪ್ರದೇಶದಲ್ಲಿಯ ಹರಪ್ಪಾ ನಾಗರೀಕತೆ ಮತ್ತು ಸಮಕಾಲೀನ ಸಂಸ್ಕೃತಿಯ ಸಂಕೀರ್ಣಗಳಲ್ಲಿ ಬಳಕೆಯಲ್ಲಿದ್ದವು. ಆದ್ದರಿಂದ ಇಂಥ ಪಾತ್ರೆ ಕರ್ನಾಟಕದಲ್ಲಿಯೂ ಆದಿ ಕಬ್ಬಿಣಯುಗದ ಹಂತದಲ್ಲಿ ಕಂಡುಬಂದಿರುವುದು ಕೂತೂಹಲಕಾರಿಯಾಗಿದೆ. ಈ ನೆಲೆಗಳ ಮಣ್ಣು, ಸುಟ್ಟಕಾಳು ಕಡ್ಡಿಗಳು, ಪ್ರಾಣಿ ಎಲುಬುಗಳು, ಕಲ್ಲಿನ ಮಣಿಗಳು, ಲೋಹದ ಸಾಮಾನುಗಳು, ಮೊದಲಾದವುಗಳ ಪ್ರಯೋಗಶಾಲೆಯ ವೈಜ್ಞಾನಿಕ ಅಧ್ಯಯನಗಳಿಂದ ಆಯಾಯ ಕಾಲದ ವಾಯುಗುಣ, ಪರಿಸರ, ಕಾಡು, ಹಾಗೂ ಸಾಕಿದ ಪ್ರಾಣಿ ಸಂಪತ್ತು. ಅರಣ್ಯ ಹಾಗೂ ಕೃಷಿ ಉತ್ಪನ್ನಗಳು ಹಾಗೂ ತತ್‌ಸಂಬಂಧಗಳಿಂದ ಜನರ ಉದ್ಯೋಗ, ಆಹಾರ, ಪದ್ಧತಿ, ಕಚ್ಚಾವಸ್ತುಗಳ ಮೂಲ ನೆಲೆಗಳು ಮತ್ತು ಸಂಸ್ಕೃತಿಗಳ ಕಾಲಮಾನ ಮೊದಲಾದವುಗಳನ್ನು ತಿಳಿದುಕೊಳ್ಳಲು ಸಾಧ್ಯವಾಗಿದೆ.[೩೨]

ಮಾನವ ಅಸ್ಥಿಗಳ ಅಧ್ಯಯನದಿಂದ ಲಿಂಗ, ವಯಸ್ಸುಗಳಲ್ಲದೆ ಆ ವ್ಯಕ್ತಿಗಳ ದೇಹಸ್ಥಿತಿ, ಅವರಿಗೆ ತಗುಲಿದ್ದ ರೋಗರುಜಿನಗಳು ಹಾಗೂ ಶ್ರಮ ಮೊದಲಾದವುಗಳು ಗೊತ್ತಾಗಿವೆ.

ಪ್ರಾಗಿತಿಹಾಸ ಕಾಲದ ಕಲ್ಲಾಸರೆ/ಗವಿ ವರ್ಣ ಚಿತ್ರಗಳು, ಬಯಲು ಬಂಡೆಕಟ್ಟು ಚಿತ್ರಗಳು ಹೆಚ್ಚಾಗಿ ಕೊಪ್ಪಳ ಹಿರೆಜಿನಕಲ್, ಹಂಪಿ ಭಾಗ, ಪಟ್ಟದಕಲ್ ಕುಟ ಕನಕೇರಿ, ಐಹೋಳೆ ಭಾಗ ಹಾಗೂ ವಿರಳವಾಗಿ ಪಶ್ಚಿಮ ಘಟ್ಟ ಕಡಲ ಪ್ರದೇಶದಲ್ಲಿ ಇದುವರೆಗೆ ಸುಮಾರು ೮೦ ನೆಲೆಗಳಲ್ಲಿ ಶೋಧವಾಗಿವೆ. ಇವು ವಿಶೇಷವಾಗಿ ಮೊದಲ ಎರಡು ಭಾಗಗಳಲ್ಲಿ ಇನ್ನೂ ಇಂಥ ನೂರಾರು ನೆಲೆಗಳಿಂದ ಸೂಚನೆಯಿದೆ. ಇವು ಮುಖ್ಯವಾಗಿ ಅಂತ್ಯ ಹಳೆ ಶಿಲಾಯುಗದಿಂದ ಆದಿ ಇತಿಹಾಸ ಕಾಲದವರೆಗಿನ ಚಿತ್ರಕಲೆ ಹಾಗೂ ಸಾಮಾಜಿಕ ಮನರಂಜನೆ ಕಟ್ಟುಕಟ್ಟಳೆ ಮೊದಲಾದ ವಿಷಯಗಳನ್ನು ಹೆಚ್ಚು ಸ್ಪಷ್ಟವಾಗಿ ತಿಳಿಯಲು ಪ್ರಮುಖ ಆಕರಗಳಾಗಿವೆ.

ಹೀಗೆ ಪ್ರಾದೇಶಿಕ ಅನ್ವೇಷಣೆ ಮತ್ತು ಉತ್ಖನನಗಳಿಂದ ತೋರಿಬಂದ ನೆಲೆಗಳ ನಿರ್ಮಿತಿಗಳ, ನಾನಾ ಪ್ರಕಾರದ ಅವಶೇಷಗಳ ವೈಜ್ಞಾನಿಕ ಅಧ್ಯಯನಗಳಿಂದ ವಿವಿಧ ಪರಿಸರಗಳು, ಸೌಂದರ್ಯ ಪ್ರಜ್ಞೆ, ಕಲೆ, ಸ್ವಲ್ಪ ಮಟ್ಟಿಗೆ ಸಾಮಾನ್ಯ ನಂಬಿಕೆಗಳು, ಸಾಧನೆಗಳು ಹಾಗೂ ಜೀವನ ಪದ್ಧತಿಯ ಮತ್ತು ತಂತ್ರಗಾರಿಕೆಗಳ ವೈಜ್ಞಾನಿಕ ಪ್ರಗತಿಗಳನ್ನು ಸ್ಥೂಲವಾಗಿ, ವ್ಯವಸ್ಥಿತವಾಗಿ ಪುನರ್ ರಚಿಸಲು ಸಾಧ್ಯವಾಗಿದೆ.[೨]

ಇತಿಹಾಸ ಕಾಲದ ಪುರಾತತ್ವ

ಇತಿಹಾಸ ಹಾಗೂ ಪೂರ್ವಭಾವಿ ಇತಿಹಾಸದ ಸಂಸ್ಕೃತಿಗಳು: ಜನರ ಮುಂದಿನ ಪೀಳಿಗೆಗಳು ಹಾಗೂ ಇತರರು ಇತಿಹಾಸ ಕಾಲದಲ್ಲಿ ಅಲ್ಲಲ್ಲಿ ವಾಸ್ತವ ಮಾಡಿದ ನೆಲೆಗಳು ಬಹಳವಾಗಿವೆ. ಮೌರ್ಯ ಶಾತವಾಹನ, ಆದಿ ಕದಂಬ-ಗಂಗ, ಆದಿ ಚಾಲುಕ್ಯ, ರಾಷ್ಟ್ರಕೂಟ ಹಾಗೂ ಕಲ್ಯಾಣ ಚಾಲುಕ್ಯ, ಹೊಯ್ಸಳ ವಿಜಯನಗರ ಕಾಲದ ರಾಜಧಾನಿಗಳ ನಗರಗಳ, ಗ್ರಾಮಗಳ,ಹಲವಾರು ನೆಲೆಗಳಿವೆ. ಅಷ್ಟೇ ಅಲ್ಲ ಕೆಲವು ನೆಲೆಗಳ ಆದಿ ಇತಿಹಾಸ ಕಾಲದಿಂದ ಬಂದ ಹೆಸರುಗಳೂ ಲಭ್ಯವಿವೆ. ಉದಾಹರಣೆಗೆ ಮೌರ್ಯ ಸಾಮ್ರಾಜ್ಯದ ಆಡಳಿತ ಕೇಂದ್ರವಾಗಿದ್ದ ಬ್ರಹ್ಮಗಿರಿಗೆ ಆ ಕಾಲದಲ್ಲಿ ಇದ್ದ ಹೆಸರು 'ಇಸಿಲಾ',ಆ ಸ್ಥಳದ ಮೌರ್ಯ ಚಕ್ರವರ್ತಿಯ ಕಿರು ಬಂಡೆಶಾಸನದಲ್ಲಿ ಉಲ್ಲೇಖವಾಗಿರುವುದು. ಅಪರೂಪವೇ ಸರಿ. ಅಷ್ಟೆ ಅಲ್ಲ, ಇದು ಆ ಸಾಮ್ರಾಜ್ಯದ ಸುವರ್ಣಗಿರಿ ಪ್ರಾಂತ್ಯದಲ್ಲಿದ್ದುದು ಉಲ್ಲೇಖವಾಗಿದೆ. ಈ ಸುವರ್ಣಗಿರಿ ನಿರ್ವಿವಾದವಾಗಿ ಗುರುತಿಸಲಾಗಿಲ್ಲ. ಆದರೂ ಕೂಡ ಇದು ಮಸ್ಕಿಯೇ ಆಗಿರಬಹುದೆಂಬ ಅಭಿಪ್ರಾಯಕ್ಕೆ ಹೆಚ್ಚು ಒತ್ತು ಇದೆ. ಇದರಂತೆಯೆ ಶಾತವಾಹನ ಕಾಲದ ಕೆಲವು ನಗರಗಳ ಹೆಸರುಗಳ ಇಂತಿವೆ. ಇಂಡಿ, ಬಾದಾಮಿ, ಪಟ್ಟದಕಲ್ಲು, ಬನವಾಸಿ ಮೊದಲಾದ ಸ್ಥಳಗಳಲ್ಲಿ ಶಾತವಾಹನ ಕಾಲದ ನಗರಗಳಿದ್ದ ಕುರುಹುಗಳಿವೆ. ಬಾದಾಮಿಯ ಹೆಸರಿನ ಸಂಸ್ಕೃತ ರೂಪ ವಾತಾಪಿ. ಈ ಹೆಸರು ಬಾದಾಮಿಯಲ್ಲಿಯ ಒಂದನೆಯ ಪುಲಿಕೇಶಿ ಶಾಸನದಲ್ಲಿ ಉಲ್ಲೇಖವಾಗಿದೆ. ಬಾದಾಮಿಗೆ ಇನ್ನೊಂದು ಹೆಸರು ವೈಜಯಂತಿ ಹೀಗೆಯೆ ಇತರ ಹೆಸರುಗಳು ಅಂದರೆ ಪಲಾಶಿಕಾ, ಪಾಂಕ್ತಿಪುರ, ಕೊಳನೂರು ಮೊದಲಾದವುಗಳು.

ಇಂಥ ಮಹತ್ವದ ನೆಲೆಗಳಲ್ಲಿ ಕೆಲವೊಂದು ಮಾತ್ರ ಹೈಗುಂದ, ಬನವಾಸಿ, ಗುಡ್ನಾಪುರ, ಚಂದ್ರವಳ್ಳಿ, ವಡಗಾಂವ್ ಮಾಧವಪುರ, ತಲಕಾಡು ಮೊದಲಾದ ಕೆಲವೇ ನಗರಗಳನ್ನು ಪ್ರಾದೇಶಿಕ ಅನ್ವೇಷಣೆ ಹಾಗೂ ಉತ್ಖನನಗಳಿಂದ ಹೆಚ್ಚು ಅಧ್ಯಯನ ಮಾಡಲಾಗಿದೆ. ಆಯಾಯ ಕಾಲದ ಜನರ ನಿತ್ಯಬಳಕೆಯ ಅವಶೇಷಗಳಲ್ಲದೆ ದೊಡ್ಡ-ದೊಡ್ಡ ಇಟ್ಟಿಗೆ ಕಟ್ಟಡಗಳು ಮಣ್ಣಿನ, ದಂತದ, ಕಲ್ಲಿನ ಕಲಾತ್ಮಕ ಗೊಂಬೆಗಳು, ಆಯಾಯ ಕಾಲದಲ್ಲಿ ಚಲಾವಣೆಯಲ್ಲಿದ್ದ ವಿವಿಧ ನಾಣ್ಯಗಳೂ ಕೂಡ ದೊರೆತಿವೆ.[೩೪] ಇವೆಲ್ಲದರ ಸಮನ್ವಯ ಅಧ್ಯಯನದಿಂದ ಆಯಾಯ ಕಾಲದ ಸಾಮಾಜಿಕ, ಆರ್ಥಿಕ ಮತ್ತು ಧಾರ್ಮಿಕ ವಿಷಯಗಳು, ವಾಸ್ತುಶಿಲ್ಪ ಮಾದರಿಗಳು ಮತ್ತು ಪ್ರಕಾರಗಳು, ವ್ಯಾಪಾರ ವ್ಯವಹಾರಗಳು, ನಾಣ್ಯ ಪದ್ಧತಿ ಮೊದಲಾದವುಗಳನ್ನು ತಿಳಿಯಲು ಆಗುವುದು ಜಟ್ಟಿಂಗ ರಾಮೇಶ್ವರದಲ್ಲಿಯ ಅಶೋಕ ಚಕ್ರವರ್ತಿಯ ಕಿರು ಬಂಡೇಶಾಸನದ ಅಡಿಯಲ್ಲಿ ಪವಿತ್ರ ಬುದ್ಧಪಾದ ಜೋಡಿಯನ್ನು ರೇಖೆಯಲ್ಲಿ ಬಿಡಿಸಲಾಗಿದೆ. ಇದು ಸಾಂಕೇತಿಕವಾಗಿ ಇತಿಹಾಸಕಾಲದ ಅತ್ಯಂತ ಪ್ರಾಚೀನ ಹಂತದ ಸಾಮಾನ್ಯ ಪ್ರಯತ್ನ ಇತ್ತೀಚೆಗೆ ಸನ್ನತಿಯ ಶಾತವಾಹನ ಕಾಲದ ನಗರದ ನೆಲೆಯ ಉತ್ಖನನದಲ್ಲಿ ಅತ್ಯಂತ ಅಪರೂಪದ ಹಾಗೂ ಮಹತ್ವದ ಒಂದು ಚಿತ್ರಿತ ವೃತ್ತ ಫಲಕವು ದೊರೆತಿದೆ ಈ ಫಲಕದ ಮೇಲಿನ ಹೊಳಪು ಹಾಗೂ ಚಿತ್ರಗಳ ಶೈಲಿಯು ಮೌರ್ಯ ಕಾಲದ ಕಲೆಯ ವಿಶೇಷ ಲಕ್ಷಣಗಳಾಗಿವೆ. ಆದ್ದರಿಂದಲೇ ಇದುಬಹುಮಟ್ಟಿಗೆ ಮೌರ್ಯ ಕಾಲದ್ದಾಗಿರಬಹುದು. ಇದಲ್ಲದೆ ಆ ಕಾಲದ ವಿಶಿಷ್ಟ ಪ್ರಕಾರದ ಅತ್ಯಂತ ಹೊಳಪಿನ ಕಪ್ಪು ಬಣ್ಣದ ಪಾತ್ರೆಗಳ ಚೂರುಗಳು ಕೂಡ ಕಂಡು ಬಂದಿರುವುದು ಗಮನಾರ್ಹ. ಇಂತಹ ಪಾತ್ರೆಗಳು ಉತ್ತರ ಭಾರತದ ಗಂಗಾನದಿಯ ಬಯಲಿನಲ್ಲಿ ಕ್ರಿ.ಪೂ. ಸುಮಾರು ೬-೩ನೇ ಶತಮಾನದ ಅಂತರದಲ್ಲಿ ಬಳಕೆಯಲ್ಲಿದ್ದುವು. ಆದ್ದರಿಂದ ಈ ವಿಶಿಷ್ಟ ಪಾತ್ರೆಯನ್ನು 'ಔತ್ತರೇಯ ಕಾಂತಿಮಯ ಪಾತ್ರೆಗ'ಳೆಂದು ವರ್ಣಿಸಲಾಗಿದೆ. ಹೀಗೆ ಪ್ರಪ್ರಥಮ ಮೌರ್ಯ ಕಾಲದ ಕಲಾತ್ಮಕ ಕುರುಹುಗಳು ದೊರೆಯುತ್ತಿರುವುದು ಇದೆ ಪ್ರಥಮ.

ಬ್ರಹ್ಮಗಿರಿ, ಐಹೊಳೆ, ಪಟ್ಟದಕಲ್ಲು, ತಲಕಾಡು ಮೊದಲಾದೆಡೆಗಳಲ್ಲಿ ಶಾತವಾಹನ, ಆದಿ ಕದಂಬ, ಗಂಗ ನಿರ್ಮಿತಿಗಳು ಬಹಳಷ್ಟು ಇತ್ತೀಚಿನ ವರ್ಷಗಳಲ್ಲಿ ಬೆಳಕಿಗೆ ಬಂದಿವೆ. ಇವುಗಳಿಂದ ಇತ್ತೀಚಿನವರೆಗೆ ಗೊತ್ತಿರದ ಬಾದಾಮಿ ಚಾಲುಕ್ಯ ಪೂರ್ವದ ವಾಸ್ತು/ಮೂರ್ತಿ ಶಿಲ್ಪಕಲೆ, ವಿನ್ಯಾಸ, ಕೆಲವೊಂದು ಧಾರ್ಮಿಕ ವಿಷಯಗಳನ್ನು ಪ್ರಪ್ರಥಮವಾಗಿ ತಿಳಿಯಲು ಸಾಧ್ಯವಾಗಿದೆ.[೩೫]

ಚಾಲುಕ್ಯರ ರಾಜಧಾನಿಯಾಗಿದ್ದ ಬಾದಾಮಿ ಮತ್ತು ಇದರ ಸಮೀಪದ ಪಟ್ಟದಕಲ್ಲು, ಹಳೆ ಮತ್ತು ಹೊಸ ಮಹಾಕೂಟ, ಬಿ.ಎಸ್. ಜಾಲಿಹಾಳ, ಐಹೊಳೆ, ಲಕ್ಷ್ಮೇಶ್ವರ, ಬನವಾಸಿ, ಮಣ್ಣೆ, ಮೊದಲಾದ ಸ್ಥಳಗಳಲ್ಲಿ ಚಾಲುಕ್ಯ-ಗಂಗಕಾಲದ ಬೆಟ್ಟದಲ್ಲಿ ಕೊರೆದು ಹಾಗೂ ಕಟೆದಕಲ್ಲುಗಳಿಂದ ಕಟ್ಟಿದ ವೈವಿಧ್ಯಮಯ ವಿನ್ಯಾಸಗಳ ಅನೇಕ ವಾಸ್ತುನಿರ್ಮಿತಿಗಳಿವೆ. ಅಷ್ಟೇ ಅಲ್ಲ. ಪಟ್ಟದಕಲ್ಲಿನಲ್ಲಿ ಹೆಸರೇ ಸೂಚಿಸುವಂತೆ ಬಾದಾಮಿ ಚಾಲುಕ್ಯ ಅರಸರು ತಮ್ಮ ಪಟ್ಟಬಂಧ ಮಹೋತ್ಸವವನ್ನು ನೆರವೇರಿಸಿಕೊಳ್ಳುತ್ತಿದ್ದರೆಂದು ಅನಂತರ ಕಾಲದ ಶಾಸನಗಳಲ್ಲಿ ಹೇಳಿದೆ. ಐಹೊಳೆ ಶ್ರೀಮಂತರ ವರ್ತಕರ ಕೇಂದ್ರ ಕ್ರಮೇಣ ಇಲ್ಲಿಯ

ಪ್ರಬಲ ವಣಿಕ ಸಂಘವು 'ಅಯ್ಯಾವೊಳೆ ಐನೂರ್ವರು' ಎಂದು ಇಡೀ ದಕ್ಷಿಣ ಭಾರತದಲ್ಲಿಯೇ ಸುಪ್ರಸಿದ್ಧವಾಗಿತ್ತು. ಇಲ್ಲಿ ಬಾದಾಮಿ ಚಾಲುಕ್ಯರ ಕಾಲದ ವಿಕಸನದ ಹಂತದ ದೇವಾಲಯದ ವಿವಿಧ ಪ್ರಕಾರಗಳ ಆಕೃತಿಗಳು ಹಾಗೂ ಅನಂತರ ಕಾಲದ ರಾಷ್ಟ್ರಕೂಟ ಕಲ್ಯಾಣ ಚಾಲುಕ್ಯ ದೇವಾಲಯಗಳ ವೈವಿಧ್ಯ ವಾಸ್ತುಶಿಲ್ಪ ಹಂತಗಳು ವೀಕ್ಷಕರನ್ನು, ಅಧ್ಯಯನಶೀಲರನ್ನು ಆಶ್ಚರ್ಯ ಚಕಿತರನ್ನಾಗಿ ಮಾಡುತ್ತವೆ. ದೇವಾಲಯ ವಾಸ್ತುಶಿಲ್ಪ ತಜ್ಞರು ಈ ನೆಲೆಯನ್ನು 'ಭಾರತೀಯ ದೇವಾಲಯಗಳ ಪ್ರಯೋಗ ಶಾಲೆ', 'ದೇವಾಲಯ ವಾಸ್ತುಶಿಲ್ಪದ ತೊಟ್ಟಿಲು' ಎಂದೆಲ್ಲ ವರ್ಣಿಸಿದ್ದಾರೆ. ಭಾರತದ ಪ್ರಾಚೀನ ದೇವಾಲಯದ ವಾಸ್ತು ಶಿಲ್ಪದ ಎರಡು ಪ್ರಮುಖ ವಿನ್ಯಾಸಗಳಾದ 'ರೇಖಾನಾಗರ ಅಥವಾ ಭಾರತೀಯ ಆರ್ಯ ಅಥವಾ ಔತ್ತರೇಯ' ಮತ್ತು 'ವಿಮಾನ ಅಥವಾ 'ದ್ರಾವಿಡ, ದಾಕ್ಷಿಣಾತ್ಯ' ಇವು ಒಂದೆಡೆಯಲ್ಲಿರುವಂಥ ಸ್ಥಳವು ಬಾದಾಮಿ-ಐಹೊಳೆ ಪಟ್ಟದಕಲ್ ಇಂಥ ದೇವಾಲಯಗಳಲ್ಲಿಯ ಕಣ್ಣಿಗೆ ಕಟ್ಟುವಂತೆ ಲೌಕಿಕ ವಾಸ್ತುಶಿಲ್ಪಕೃತಿಗಳು ಗೃಹಪೀಠೋಪಕರಣಗಳು, ಲಲಿತ ಕಲೆಗಳು, ಸಂಗೀತ ವಾದ್ಯಗಳು, ವೇಷ ಭೂಷಣಗಳು, ಕೇಶವಿನ್ಯಾಸ ವಾಹನಗಳ ಪ್ರಕಾರಗಳು, ಯುದ್ಧ ಕೌಶಲ್ಯ, ಶಾಸ್ತ್ರಾಸ್ತ್ರಗಳು, ಗುರುಕುಲಾಶ್ರಮ ಮೊದಲಾದ ಸಾಮಾಜಿಕ ರಚನೆ, ಆರ್ಥಿಕ ಮತ್ತು ಧಾರ್ಮಿಕ ದೃಶ್ಯಗಳು ಅಂದಿನ ಸಮಾಜದ ಸ್ವಾರಸ್ಯಕರ ವಿಷಯಗಳನ್ನು ತಿಳಿಯಲು ತುಂಬಾ ಸಹಾಯಕಾರಿಯಾಗಿವೆ. ಇವುಗಳಲ್ಲಿಯ ಕೆಲವೊಂದು ವಿಷಯಗಳನ್ನು ಬೇರೆ ಸರಿಯಾದ ಮೂಲಗಳಿಂದ ತಿಳಿಯಲಾಗುವುದಿಲ್ಲ. ಶಾತವಾಹನ ಅರಸರ ಕಾಲದ ನಾಣ್ಯ ಚಲಾವಣೆ ಮತ್ತು ಪದ್ಧತಿಗಳನ್ನು ಬಿಟ್ಟರೆ ಆದಿಕದಂಬ ಹಾಗೂ ಬಾದಾಮಿ ಚಾಲುಕ್ಯರ ಕಾಲದಲ್ಲಿ ಈ ಸಂಗತಿಗಳು ಕೂಡ ಇದುವರೆಗೆ ಸ್ವಲ್ಪವೂ ಇಳಿದಿಲ್ಲ. ಇತ್ತೀಚೆಗೆ ಚಾಲುಕ್ಯ ಅರಸು ಕಾಲದ್ದೆಂದು ಹೇಳಬಹುದಾದ ಒಂದು ನಾಣ್ಯವು ಪ್ರಥಮ ಬಾರಿಗೆ ಪತ್ತೆಯಾಗಿದೆ.

ಶಾಸನ ಆಕರಗಳು

ಬಹಳ ಕಾಲದವರೆಗೂ ಉಳಿಯುವಂಥ ಕಲ್ಲು, ಲೋಹ ಮೊದಲಾದ ಸರಕುಗಳ ಮೇಲೆ ಸಮಕಾಲೀನ ಜವಾಬ್ದಾರಿಯುತ ಅಧಿಕಾರಿಗಳು ತಮ್ಮ ಕಾಲದ ಅರಸು ಮನೆತನ ಆಶ್ರಯದಾತನಾಗಿದ್ದ ಅರಸನ ಯೋಗ್ಯತೆ, ಸಾಧನೆ ಹಾಗೂ ಘನ ಉದ್ದೇಶಕ್ಕಾಗಿ ಮಾಡಿದ ದಾನಧರ್ಮಗಳು, ಕೆರೆಕಟ್ಟೆಗಳ ನಿರ್ಮಾಣ, ವಿದ್ಯಾಕೇಂದ್ರಗಳ ಸ್ಥಾಪನೆ ಮೊದಲಾದ ವಿಷಯಗಳನ್ನು ಆಡಳಿತ ಅಧಿಕೃತ ದಾಖಲೆಗಳಾಗಿ, ಸಾರ್ವಜನಿಕರ ಪ್ರಕಟಣೆಯಾಗಿ ಬರೆದಿಟ್ಟ ರಾಜಾಜ್ಞೆಗಳೆ ಶಾಸನಗಳು. ಈ ಪ್ರಕಾರದ ಶಾಸನಗಳೇ ಅತ್ಯದಿಕ. ಇವಲ್ಲದೆ ಘನವ್ಯಕ್ತಿಗಳ ಮರಣವನ್ನು ಸೂಚಿಸುವ ವೀರಗಲ್ಲುಗಳು ಮೊದಲಾದ ಸ್ಮಾರಕ ಶಾಸನಗಳೂ ಇವೆ. ಸಹಜವಾಗಿಯೇ ಇವುಗಳಲ್ಲಿ ಉತ್ಪ್ರೇಕ್ಷೆಯಿದ್ದರೂ ಕಾವ್ಯಮಯ ವರ್ಣನೆಯಿದ್ದರೂ ಇವು ಅಸೂಯೆ ಪಡುವಂಥ ಮಹತ್ವವನ್ನು ಪಡೆದಿವೆ ಎನ್ನುವುದು ಮತ್ತು ವಿಮರ್ಶೆ ಮಾಡುವುದರಿಂದ ಇತಿಹಾಸ ಕಾಲದ ರಾಜ್ಯಗಳು, ವಿಸ್ತಾರಗಡಿಗಳು ರಾಜಕೀಯ ಸ್ಥಿತಿ, ರಾಜ್ಯಾಡಳಿತ, ಸಮಾಜ, ಕಲೆ, ಧರ್ಮ, ಆರ್ಥಿಕ ಪರಿಸ್ಥಿತಿ, ತೆರಿಗೆ ಪದ್ಧತಿ ಮೊದಲಾದ ವಿಷಯಗಳನ್ನು ಹೆಚ್ಚು ಕಡಿಮೆಯಾಗಿದ್ದರೂ ಕೂಡ ಎಡೆಬಿಡದೆ

ನಮ್ಮ ದೇಶದ ಮತ್ತು ಪ್ರದೇಶಗಳ ನಂಬಲರ್ಹವಾದ ಇತಿಹಾಸವನ್ನು ಪುನರ್ರಚಿಸಲು ವಾಸ್ತವಿಕವಾಗಿ ಸಾಧ್ಯವಾಗಿದೆ. ಕರ್ನಾಟಕದಲ್ಲಿಯೂ ವ್ಯವಸ್ಥಿತವಾಗಿ ೧೮೮೫ರಿಂದ ಈ ಶಾಸನಗಳ ಅಧ್ಯಯನವೂ ಚುರುಕುಗೊಂಡಿತು.[೩೬] ಜೆ.ಎಫ್. ಫ್ಲೀಟ್, ಬಿ.ಎಲ್. ರೈಸ್, ಆರ್. ನರಸಿಂಹಾಚಾರ್ಯ, ಎಂ.ಹೆಚ್. ಕೃಷ್ಣ, ಆರ್.ಎಸ್. ಪಂಚಮುಖಿ, ಪಿ.ಬಿ. ದೇಸಾಯಿ, ಕೆ.ವಿ. ರಮೇಶ, ಎಸ್.ಎಚ್. ರಿತ್ತಿ, ಬಿ.ಆರ್. ಗೋಪಾಲ, ಸೀತರಾಮ ಜಾಗೀರದಾರ, ಎಂ.ಎಂ.ಕಲ್ಬುರ್ಗಿ ಮೊದಲಾದವರು. ಈ ಕ್ಷೇತ್ರದಲ್ಲಿ ಸತತವಾಗಿ ಶಾಸನಗಳ ಶೋಧನೆ, ಪರಿಶೋಧನೆ, ಅಧ್ಯಯನವನ್ನು ಮಾಡಿ ಶಾಸನ ಅಧ್ಯಯನವು ಒಂದು ಗಟ್ಟಿನೆಲೆಯಲ್ಲಿ ನಿಲ್ಲುವ ಹಾಗೆ ಮಾಡಿದ್ದಾರೆ. ಇಷ್ಟಾದರೂ ಇಂದಿಗೂ ಹೊಸ ಶಾಸನಗಳು ಬೆಳಕಿಗೆ ಬರುತ್ತಲ್ಲಿವೆ. ಶಾಸನಗಳನ್ನು ಇಂದಿನ ಹೊಸ ದೃಷ್ಟಿಕೋನದಲ್ಲಿ ಮತ್ತೆ ಮತ್ತೆ ವಿಮರ್ಶಿಸಲಾಗುತ್ತಿದೆ. ಇವೆಲ್ಲವೂ ಶಾಸನ ಅಧ್ಯಯನದಲ್ಲಿ ಸದಾ ಹೆಚ್ಚಿನ ಅಧ್ಯಯನಕ್ಕೆ ಅವಕಾಶ ಇರುವುದನ್ನು ಸೂಚಿಸುತ್ತದೆ. ಇತಿಹಾಸ ರಚನೆಯಲ್ಲಿ ಈ ಶಾಸನಗಳು ಎಂಥ ಮಹತ್ವದ ಪಾತ್ರವನ್ನು ವಹಿಸುತ್ತವೆ ಎಂಬುದನ್ನು ಕೆಲವೊಂದು ಉದಾಹರಣೆಗಳಿಂದ ತಿಳಿದುಕೊಳ್ಳಬಹುದು.[೩೭]

ಕರ್ನಾಟಕದಲ್ಲಿಯ ಮೌರ್ಯ ಚಕ್ರವರ್ತಿ ಅಶೋಕನ ಶಾಸನಗಳು ಖಚಿತವಾಗಿ ರಾಜಾ ಶಾಸನ ವರ್ಗಕ್ಕೆ ಸೇರಿದವು. ಈ ಅರಸನ ಒಟ್ಟು ಹತ್ತು ಬಂಡೆಶಾಸನಗಳು, ಬ್ರಹ್ಮಗಿರಿ, ಜಟ್ಟಿಂಗ ರಾಮೇಶ್ವರ, ಸಿದ್ಧಪುರ, ಕೊಪ್ಪಳ ಮತ್ತು ಮಸ್ಕಿ ಮೊದಲಾದ ಸ್ಥಳಗಳಲ್ಲಿ ಹಿಂದೆ ಪತ್ತೆ ಹಚ್ಚಲಾಯಿತು. ೧೯೭೭ರಲ್ಲಿ ನಿಟ್ಟೂರು ಮತ್ತು ಉದೆಗೋಳಂನಲ್ಲಿ ಇಂಥ ಶಾಸನಗಳಿದ್ದುದು ಗೊತ್ತಾಯಿತು. ಈ ಶಾಸನಗಳಲ್ಲಿಯ ವಿಷಯ ಸ್ವಲ್ಪ ಹೆಚ್ಚುಕಡಿಮೆ ಒಂದೇ. ಜನಸಾಮಾನ್ಯರಿಗೆ ಅವರ ಉತ್ಕರ್ಷಕ್ಕಾಗಿ ನೀತಿಭೋಧನೆ ಆದರೂ ಇವುಗಳಿರುವ ಸ್ಥಳಗಳಿಂದ ದಕ್ಷಿಣದಲ್ಲಿ ಆ ಚಕ್ರವರ್ತಿಯ ಕಾಲದಲ್ಲಿ ಮೌರ್ಯ ಸಾಮ್ರಾಜ್ಯದ ಗಡಿಯನ್ನು ಗುರುತಿಸಲು ಸಹಾಯಕರವಾಗಿವೆ. ೧೯೧೫ರಲ್ಲಿ ಈ ಅರಸನ ಶಾಸನವು ಮಸ್ಕಿಯಲ್ಲಿ ಪತ್ತೆಯಾಗುವುದಕ್ಕೆ ಮುಂದೆ ಉಳಿದ ಶಾಸನಗಳಲ್ಲಿ ಅರಸನನ್ನು ಅವನ ವಿಶೇಷ ನಾಮದಿಂದ 'ದೇವಾನಾಂಪ್ರಿಯ ಪ್ರಿಯದರ್ಶಿ' ಎಂದು ಸೂಚಿಸಲಾಗಿದೆ. ಅಶೋಕ ಮೌರ್ಯನ ಸಮಕಾಲೀನ ಸಿಲೋನಿನ ಒಬ್ಬ ಅರಸು ತಿಸ್ಸನು ದೇವಾನಂಪ್ರಿಯನೆಂದು ಕರೆಯಲ್ಪಟ್ಟಿದ್ದನು. ಇದಲ್ಲದೆ ಅಶೋಕನ ತಂದೆ ಬಿಂದುಸಾರನಿಗೂ ಈ ವಿಶೇಷ ಪದನಾಮವಿತ್ತೆಂದು ಪ್ರತೀತಿ. ಆದ್ದರಿಂದ ಈ ಅರಸು ಅಶೋಕ ಚಕ್ರವರ್ತಿ ಎಂದು ನಿಶ್ಚಯವಾಗಿ ಹೇಳಲಾಗುತ್ತಿರಲಿಲ್ಲ. ಮಸ್ಕಿಯಲ್ಲಿರುವ ಈ ಅರಸನ ಶಾಸನದಲ್ಲಿ ಇವನ ಅನ್ವರ್ಥನಾಮವಾದ 'ಅಶೋಕ' ಎಂಬ ಹೆಸರು ವಿಶೇಷ ನಾಮದೊಂದಿಗೆ ಇರುವುದರಿಂದ ಈ ದೇವಾನಾಂಪ್ರಿಯ ಪ್ರಿಯದರ್ಶಿಯು ಮೌರ್ಯ ಚಕ್ರವರ್ತಿ ಅಶೋಕನೆಂದೆ ಖಚಿತವಾತು. ನಿಟ್ಟೂರು ಮತ್ತು ಉದೆಗೋಳು ಶಾಸನದಲ್ಲಿಯೂ 'ಅಸೋಕ' 'ರಾಜ'ನೆಂಬ ಉಲ್ಲೇಖವಿದೆ. ೧೯೯೦ರಲ್ಲಿ ಸನ್ನತಿಯಲ್ಲಿ ಈ ಚಕ್ರವರ್ತಿಯು ಆಗಲೆ ಪ್ರಸಿದ್ಧವಾಗಿದ್ದ ೧೪ ಬಂಡೆಶಾಸನಗಳಲ್ಲಿ ೧೩-೧೪ನೇ ಬಂಡೆಶಾಸನಗಳು ಮತ್ತು ಕಳಿಂಗ ಎರಡು ಪ್ರತ್ಯೇಕ ಶಾಸನಗಳ ಪ್ರತಿಗಳು ಭಾಗಶಃ ಇದ್ದುದು ಆಕಸ್ಮಿಕವಾಗಿ ತಿಳಿಯಿತು.

ಬ್ರಹ್ಮಗಿರಿಯ ಶಾಸನದಲ್ಲಿ ಸುವರ್ಣಗಿರಿ ಮಹಾಮಾತ್ರರ ಮೂಲಕ ಇಸಿಲದ ಮಹಾಮಾತ್ರರಿಗೆ ಕಳುಹಿಸಿದ ರಾಜಾಜ್ಞೆಯೇ ಶಾಸನದ ವಿಷಯ. ಆದ್ದರಿಂದ ಆ ಚಕ್ರವರ್ತಿಯ ಕಾಲದಲ್ಲಿ 'ಇಸಿಲಾ' ಎಂದು ಕರೆಯಲ್ಪಟ್ಟ ಈಗಿನ ಬ್ರಹ್ಮಗಿರಿ ಭಾಗವು ಅಶೋಕ ಚಕ್ರವರ್ತಿಯ ಮಹಾಮಾತ್ರ ಆಡಳಿತ ಕೇಂದ್ರವಾಗಿತ್ತೆಂಬುದು ಸ್ಪಷ್ಟವಾಯಿತು. ಆಗಲೇ ಅಂಕಿಗಳಿಗೆ ಸಂಖ್ಯೆ ಸಂಕೇತದ ಸಾಮಾನ್ಯವಾಗಿ ಬಳಕೆಯಲ್ಲಿದ್ದುದು ಗೊತ್ತಾದುದು ಈ ಶಾಸನದಿಂದಲೆ. ಅಶೋಕನು ಧರ್ಮ ಪ್ರಚಾರಕ್ಕೋಸ್ಕರ ಕೈಗೊಂಡ ಪ್ರವಾಸ ದಿನಗಳು ೨೫೬ ಎಂದು ತಿಳಿಸಲು ಅಂಕೆ ಸಂಕೇತಗಳನ್ನು ಬಳಸಲಾಗಿದೆ. ಸನ್ನತಿಯ ಶೋಧನೆಯ ಕೆಲವು ಮಹತ್ವದ ಪ್ರಶ್ನೆಗಳಿಗೆ ಅವಕಾಶ ಮಾಡಿಕೊಡುತ್ತದೆ. ಬಹುಶಃ ಈ ಭಾಗವನ್ನು ಕಳಿಂಗ ರಾಜ್ಯಗೆದ್ದ ನಂತರ ಅಲ್ಲಿ ಹಾಕಿಸಿದ ಪ್ರತ್ಯೇಕ ಶಾಸನಗಳ ಪ್ರತಿಗಳನ್ನು ಇಲ್ಲಿಯೂ ಹಾಕಿಸುವ ಅನಿವಾರ್ಯತೆ ಕಂಡುಬಂದಿರಬೇಕು. ಇದು ಸತ್ಯವಾಗಿದ್ದಲ್ಲಿ ಇವನ ಅಜ್ಜನಾದ ಮೌರ್ಯ ಚಕ್ರವರ್ತಿ ಚಂದ್ರಗುಪ್ತನ ರಾಜ್ಯದಲ್ಲಿ ಈ ಭಾಗವು ಸೇರಿತ್ತಿತ್ತೆಂಬುದು ಸತ್ಯಕ್ಕೆ ದೂರದ ಮಾತಾಗುತ್ತದೆ.

ದಖಿನ್ ಪ್ರಸ್ಥಭೂಮಿಯಲ್ಲಿ ಮೌರ್ಯರ ನಂತರ ರಾಜ್ಯವನ್ನು ಕಟ್ಟಿ ಆಳಿದ ಶಾತವಾಹನರ ಕಾಲದ ಕೆಲವು ಶಾಸನಗಳು ಉತ್ತರ ಕರ್ನಾಟಕದಲ್ಲಿವೆ. ಇವೆಲ್ಲವೂ ಹೆಚ್ಚಾಗಿ ದಾನ ಶಾಸನಗಳು. ನಾಸಿಕದಲ್ಲಿಯ ವಾಸಿಷ್ಟೀಪುತ್ರ ಪುಳಮಾವಿಯ ರಾಜ್ಯಾಡಳಿತದ ೧೯ನೇ ವರ್ಷದಲ್ಲಿ ಇವನ ಹಿಂದಿನ ಅರಸು ಗೌತಮಿ ಪುತ್ರ ಶಾತಕರ್ಣಿಯ ದಂಡಯಾತ್ರೆಗಳು ರಾಜ್ಯ ವಿಸ್ತಾರ ಮೊದಲಾದ ವಿವರಗಳನ್ನ ಕೊಡುವಂಥ ಶಾಸನವು ತೀರ ಅಪರೂಪ. ಸನ್ನತಿಯಲ್ಲಿ ಮೂರು, ಮ್ಯಾಕೆ ದೋಣಿ, ವಾಸನ ಮತ್ತು ಬನವಾಸಿಯಲ್ಲಿ ಒಂದೊಂದು ಈ ಅರಸರ ಕಾಲದ ಶಿಲಾಶಾಸನಗಳಿವೆ. ಸನ್ನತಿಯ ಒಂದು ಶಾಸನವು ಗೌತಮಿಪುತ್ರ ಶಾತಕರ್ಣಿಗೆ ಸಂಬಂಧಿಸಿದ್ದೂ ಇದೊಂದು ಅಪರೂಪ ಶಾಸನ. ಇದು ನಾಸಿಕ ಶಾಸನದಂತೆ ಒಂದು ಪ್ರಶಸ್ತಿ. ಈ ಅರಸನ ಹಲವಾರು ಪ್ರಾಂತಗಳ ಮೇಲಿನ ಅಧಿಕಾರ ಮತ್ತು ಕ್ಷಹರಾತ ಕುಲದ ಉಚ್ಚಾಟನೆ ಮೊದಲಾದ ವಿಷಯಗಳಿವೆ. ಇದರಿಂದ ಈ ಭಾಗವು ನೇರವಾಗಿ ಶಾತವಾನರ ಆಡಳಿತಕ್ಕೆ ಒಳಪಟ್ಟಿರಬೇಕೆಂದು ದೃಡವಾಗುತ್ತದೆ. ಇದುವರೆಗೆ ಈ ಸ್ಥಳದಲ್ಲಿ ಕ್ರಿ.ಶ. ೧-೨ನೇ ಶತಮಾನದ ೫-೬ಕ್ಕೂ ಹೆಚ್ಚು ಪ್ರಾಕೃತ ಶಾಸನಗಳು ಹಾಗೂ ಹಲವಾರು ಬೌದ್ಧಶಿಲ್ಪಗಳು ಪ್ರಕಟವಾಗಿವೆ. ಆದ್ದರಿಂದ ಈ ನಗರವು ಬೌದ್ಧಧರ್ಮ ಮತ್ತು ಕಲೆಯ ಒಂದು ಪ್ರಮುಖ ಕೇಂದ್ರವಾಗಿತ್ತೆಂಬುದು ಸ್ಪಷ್ಟವಾಗುತ್ತದೆ.

ಶಾತವಾಹನ ಅರಸರ ವಂಶದ ಮೂಲಸ್ಥಳದ ಬಗ್ಗೆ ಚರ್ಚೆ ಇದೆ. ಮ್ಯಾಕೆದೋಣಿ ಶಾಸನವು ಈ ದಿಶೆಯಲ್ಲಿ ಸ್ವಲ್ಪ ಆಶಾದಾಯಕವಾಗಿದೆ. ವಾಸನದ ಶಾಸನವು ಚಂಡಶಿವ ದೇವಾಲಯದ ನಿರ್ಮಾಣ ವಿಷಯವನ್ನು ತಿಳಿಸುತ್ತದೆ. ಶೈವ ಧರ್ಮ ಮತ್ತು ಶಿವದೇವಾಲಯದ ನಿರ್ಮಾಣದ ವಿಷಯವನ್ನು ತಿಳಿಸುತ್ತದೆ. ಶೈವಧರ್ಮ ಮತ್ತು ಶಿವದೇವಾಲಯ ನಿರ್ಮಾಣದ ಬಗ್ಗೆ ತಿಳಿಸುವಂಥ ಅತ್ಯಂತ ಪ್ರಾಚೀನ ಶಾಸನವೂ ಇದಾಗಿದೆ. ಪ್ರಾಯಶಃ ಒಬ್ಬ ಶಾತವಾಹನ ಅರಸನ ಹೆಸರಿನಲ್ಲಿ ದೇವಾಲಯವು ನಿರ್ಮಾಣವಾಗಿರಬಹುದು. ಬನವಾಸಿಯಲ್ಲಿ ಈ ವಾಸಿಷ್ಠಿಪುತ್ರ ಶಿವಶ್ರೀ ಪುಳುಮಾವಿಯ ಮಹಾರಾಣಿಯ

ಹೆಸರಿನಲ್ಲಿಯ ಸ್ಮಾರಕ ಶಾಸನವು ಬಹುಶಃ ಇವಳು ಈ ಪ್ರದೇಶದವಳಾಗಿರಬಹುದೆಂಬ ವಿಚಾರಕ್ಕೆ ಎಡೆ ಮಾಡಿಕೊಡುತ್ತದೆ. ಬನವಾಸಿಯಲ್ಲಿ ಶಾತವಾನರ ಅರಸರ ಮಾಂಡಲೀಕರಾದ ಚುಟುಕುಕುಲ ಆನಂದ ವಂಶದ ಎರಡು ಶಾಸನಗಳು ಒಂದು ಮಳವಳ್ಳಿಯಲ್ಲಿ, ಮತ್ತೊಂದು ಬನವಾಸಿಯಲ್ಲಿವೆ.[೬೮] ಇವೆರಡೂ ಕೂಡ ವಿಣ್ಣುಕಡ ಚುಟುಕುಲಾನಂದ ಸಾತಕರ್ಣಿ ಆಡಳಿತ ಕಾಲದವು. ಮೊದಲನೆಯದರಲ್ಲಿ ಒಂದು ಪ್ರಕಾರದ ಬ್ರಹ್ಮದೇಯ ಮತ್ತು ದೇವಸ್ವದಾನಗಳ ವಿಷಯ ವಿದೆ. ಈ ಪ್ರಕಾರ ದಾನಗಳ ಬಗ್ಗೆ ತಿಳಿಸುವಂಥ ಅತ್ಯಂತ ಪ್ರಾಚೀನ ತಮ ಶಾಸನವಿದು. ಎರಡನೆಯದಲ್ಲಿ ಈ ಅರಸನ ಮಗಳಾದ ಶಿವಕದ ನಾಗಸಿರಿಯು ಒಂದು ಬೌದ್ಧ ನಾಗಶಿಲ್ಪ, ಒಂದು ವಿಹಾರ ಮತ್ತು ಒಂದು ಕೆರೆಗಳನ್ನು ಮಾಡಿಸಿ ದಾನ ಕೊಟ್ಟ ವಿಷಯವಿದೆ ಹಾಗೂ ಮುಚಲಿಂಗ ನಾಗಶಿಲ್ಪವನ್ನು ರೂಪಿಸಿದ ಸಂಜಯತಿಯದ ಮೋರಕನ ಶಿಷ್ಯ ನಟಕನೆಂದು ಶಿಲ್ಪಿಯ ಹೆಸರನ್ನು ಹೇಳಿದೆ. ನಾಗಾರ್ಜುನಕೊಂಡದಲ್ಲಿಯ ಕೆಲವು ಪ್ರಾಕೃತ ಶಾಸನಗಳು ಕರ್ನಾಟಕದಲ್ಲಿಯ ಬೌದ್ಧಧರ್ಮದ ಬಗ್ಗೆ ಸ್ವಲ್ಪ ಬೆಳಕನ್ನು ಚೆಲ್ಲುತ್ತವೆ.

ಮೌರ್ಯ ಶಾತವಾಹನ ಕಾಲದ ಶಾಸನಗಳೆಲ್ಲವೂ ಪ್ರಾಕೃತಿ ಭಾಷಯಲ್ಲಿದ್ದರೆ, ಇವರ ತರುವಾಯ ಸ್ವತಂತ್ರ ರಾಜ್ಯ ಸ್ಥಾಪನೆಯನ್ನು ಮಾಡಿ ಆಳಿದ ಕದಂಬ ಮತ್ತು ಗಂಗ ಅರಸು ವಂಶಜರ ಶಾಸನಗಳೆಲ್ಲವೂ ಸಂಸ್ಕೃತ ಭಾಷೆಯಲ್ಲಿವೆ. ಕೆಲವೊಂದು ಶಿಲಾಶಾಸನಗಳನ್ನು ಬಿಟ್ಟರೆ ಹೆಚ್ಚಾಗಿ ಉಳಿದೆಲ್ಲವೂ ತಾಮ್ರಪಟ ಶಾಸನಗಳು ಇವುಗಳಲ್ಲಿ ಬಹಳಷ್ಟು 'ದೇವಸ್ವ' ಇಲ್ಲವೆ 'ಬ್ರಹ್ಮದೇಯ' ದಾನಗಳಿಗೆ ಸಂಬಂಧಿಸಿದವು. ಚಂದ್ರವಳ್ಳಿ ಬಂಡೆಶಾಸನವು ಕದಂಬ ರಾಜ್ಯ ಸ್ಥಾಪಕ ಮತ್ತು ಮೊದಲ ದೊರೆ ಮಯೂರ ಶರ್ಮನ ಕಾಲದ್ದು, ಈ ಶಾಸನವು ಪ್ರಾಕೃತ ಭಾಷೆಯಲ್ಲಿದ್ದು, ಮಯೂರ ಶರ್ಮನು ಗೆದ್ದ ರಾಜ್ಯಗಳ ಸರಮಾಲೆ ಇದೆ ಎಂದು ಈ ಹಿಂದೆ ಅದನ್ನು ಅಥೈಸಲಾಗಿತ್ತು.[೬೯] ಆದರೆ ಈಚಿನ ಹೆಚ್ಚು ಸೂಕ್ಷ್ಮವಾದ ಅಧ್ಯಯನದಿಂದ ಈ ಶಾಸನವು ಸಂಸ್ಕೃತ ಭಾಷೆಯಲ್ಲಿದೆಯೆಂದು ಇದರಲ್ಲಿ ಮಯೂರವರ್ಮನ ಕಾಲದಲ್ಲಿ ಕೂಪಣದ 'ಚಾಮ'ನೆಂಬುವನು ಇಲ್ಲಿದ್ದ ಒಂದು ಕೆರೆಯನ್ನು ದುರಸ್ತಿ ಮಾಡಿದ ವಿಷಯವಿದೆಯೆಂದೂ ಸ್ಪಷ್ಟವಾಗಿದೆ.

ಕದಂಬ ಅರಸು ಮನೆತನದ ಇತಿಹಾಸವನ್ನು ತಿಳಿಯಲು ತಾಳಗುಂದದ ಮತ್ತು ಗುಡ್ನಾಪುರದ ಒಂದೊಂದು ಸ್ತಂಭ ಶಾಸನಗಳು ಅತಿ ಮುಖ್ಯವಾದುವು. ಮೊದಲನೆಯದು ಕದಂಬವಂಶದ ಮೂಲ ಕಾಂಚಿಯಲ್ಲಿ ಕದಂಬ ಮಯೂರಶರ್ಮನ ವಿದ್ಯಾಭ್ಯಾಸ, ಅಲ್ಲಿ ಒಂದು ಅವಮಾನಿತ ಪ್ರಸಂಗದಲ್ಲಿ ಅವನು ಕ್ರಮೇಣ ಬನವಾಸಿ ಪ್ರದೇಶದ ಮೇಲಿನ ಪಲ್ಲವರ ಅಧಿಕಾರದ ಕೊನೆಗಾಣಿಸುವಿಕೆ, ಕದಂಬ ರಾಜ್ಯ ಸ್ಥಾಪನೆ, ಈ ಅರಸು ಮನೆತನದ ಐದನೇ ಅರಸು ಶಾಂತಿವರ್ಮನ ತನಕ ವಂಶಾವಳಿ ಮತ್ತು ಈ ಅರಸನ ತಂದೆ ಕಾಕುಸ್ಥವರ್ಮನು ತಾಳಗುಂದದಲ್ಲಿ ಕೆರೆ ಕಟ್ಟಿಸಿದ ವಿಷಯವನ್ನು ತಿಳಿಸಲಾಗಿದೆ. ಈ ಪ್ರಶಸ್ತಿಯನ್ನು ಕಬ್ಜನೆಂಬ ಕವಿಯು ಉತ್ತಮ ಸಂಸ್ಕೃತ ಕಾವ್ಯಶೈಲಿಯಲ್ಲಿ ರಚಿಸಿದನು. ಗುಡ್ನಾಪುರದಲ್ಲಿಯ ಶಾಸನವು ಇತರ ಕೆಲವು ಮಹತ್ವದ ವಿಷಯಗಳನ್ನು ತಿಳಿಸುತ್ತದೆ. ತಾಳಗುಂದ ಶಾಸನದಲ್ಲಿ ನಿರೂಪಿಸಿದ ಕದಂಬ ವಂಶಾವಳಿಯನ್ನು ಈ ಶಾಸನವು ಇನ್ನೂ ಹಿಂದಕ್ಕೆ ತೆಗೆದುಕೊಂಡು ಹೋಗುತ್ತದೆ.

ಮಯೂರವರ್ಮನ ತಂದೆ ವೀರಶರ್ಮ ಮತ್ತು ಅಜ್ಜ ಬಂಧಷೇಣ, ಇಲ್ಲಿಯ ಅರಮನೆಯ ಪಕ್ಕದಲ್ಲಿಯೇ ಒಂದು ಮನ್ಮಥ ದೇವಾಲಯದ ನಿರ್ಮಾಣ, ವಸಂತೋತ್ಸವದ ಆಚರಣೆ ಗುಡ್ನಪುರದಲ್ಲಿ ಕೆರೆಯ ನಿರ್ಮಾಣ ಮೊದಲಾದ ವಿಷಯಗಳಿವೆ. ವಿಶೇಷವಾಗಿ ೧ರಿಂದ ೯ರ ತನಕ ಸಂಖ್ಯೆಗಳಿರುವುದು ಗಮನಾರ್ಹ. ಈ ಅರಸು ಮನೆತನದ ಶಾಸನಗಳು ಸಮಕಾಲೀನ ಸಾಮಾನ್ಯ ಜನರ ಕನ್ನಡ ಭಾಷೆಯ ಬೆಳವಣಿಗೆಯನ್ನಲ್ಲದೆ ಪ್ರಬುದ್ಧ ಉತ್ತಮ ಕನ್ನಡ ಶಾಸನವು ಹಲ್ಮಿಡಿಯಲ್ಲಿದೆ. ಇದರಂತೆ ಈ ಕಾಲದ ಕೆಳಗುಂದಲಿ ಮತ್ತು ಕಂಪ್ಲಿ ಕನ್ನಡ ಶಾಸನಗಳು ಈ ದಿಶೆಯಲ್ಲಿ ಉಪಯುಕ್ತ.

ಇದರಂತೆಯ ಆದಿ ಗಂಗರ ಶಾಸನಗಳೂ ಕೂಡ ಇವುಗಳಿಂದ ಅರಸು ಮನೆತನದ ರಾಜ್ಯ ಸ್ಥಾಪನೆ, ವಂಶಾವಳಿ, ಕದಂಬ ಮತ್ತು ಪುನ್ನಾಟರೊಡನೆ ಅವರ ಸಂಬಂಧ ಮೊದಲಾದ ವಿಷಯಗಳನ್ನು ತಿಳಿಸುತ್ತವೆ. ಈ ಅರಸರ ವಿದ್ಯಾಭ್ಯಾಸವನ್ನು ತಿಳಿಸುವಾಗ ಇವರ ಪ್ರಾವೀಣ್ಯತೆ ಹಾಗೂ ಸ್ವಂತ ರಚನೆಗಳನ್ನು ಕೂಡ ಹೇಳುತ್ತವೆ. ಈಗಾಗಲೇ ಗಂಗ ದುರ್ವಿನೀತನ ಕಿರಾತಾರ್ಜುನೀಯಮ್ ಕಾವ್ಯದ ಮೊದಲನೇ ಹದಿನೈದು ಸರ್ಗಗಳ ಮೇಲಿನ ವ್ಯಾಖ್ಯಾನ, ಶಬ್ದಾವತಾರ ಮೇಲೆ ಗಮನಿಸಲಾಗಿದೆ. ಈ ಶಾಸನಗಳಲ್ಲಿಯೂ ಕೂಡ ಕೊನೆಯ ಭಾಗವು ಸಾಮಾನ್ಯ ಕನ್ನಡ ಭಾಷೆಯಲ್ಲಿದ್ದು, ಆ ಕಾಲದ ಗಡಿನಾಡಿನ ಭಾಗದಲ್ಲಿದ್ದ ಕನ್ನಡ-ತಮಿಳು ಮಿಶ್ರಹಂತ ಲಕ್ಷಣ ಸ್ವರೂಪವನ್ನು ತಿಳಿಯಲು ಸಾಧ್ಯ.

ವಾತಾಪಿ ಚಾಲುಕ್ಯರ ಶಾಸನಗಳು ಅಧಿಕ ಸಂಖ್ಯೆಯಲ್ಲಿದ್ದು ಆ ಕಾಲದ ರಾಜಕೀಯ ಸಾಮಾಜಿಕ ಆರ್ಥಿಕ ಮತ್ತು ಸಾಂಸ್ಕೃತಿಕ ಇತಿಹಾಸಗಳನ್ನು ತಿಳಿಯಲು ಬಹುಮುಖ್ಯ ಆಕರಗಳಾಗಿವೆ. ತಾಮ್ರ ಶಾಸನಗಳಲ್ಲಿ ಸಂಸ್ಕೃತ ಭಾಷೆಯನ್ನು ಬಳಸಿದ್ದಾರೆ. ಶಿಲಾಶಾಸನಗಳಲ್ಲಿ ಕನ್ನಡ ಮತ್ತು ತೆಲುಗು ಭಾಷೆಗಳನ್ನು ಸಮಯೋಚಿತವಾಗಿ ಬಳಸಲಾಗಿದೆ. ಇವರ ಶಾಸನಗಳು ಶಕವರ್ಷಗಳಲ್ಲಿರುವುದರಿಂದ ಕಾಲಮಾನವನ್ನು ನಿರ್ಧರಿಸುವಲ್ಲಿ ಶಾತವಾಹನ, ಆದಿ ಗಂಗ-ಕದಂಬರ ಶಾಸನದಲ್ಲಿ ಕಾಣುವ ತೊಂದರೆಗಳು ಇವುಗಳಲ್ಲಿಲ್ಲ. ಇವರ ಶಾಸನಗಳಲ್ಲಿ ಇದುವರೆಗೆ ತಿಳಿದ ಮೊಟ್ಟಮೊದಲನೆಯದು ಶಕವರ್ಷ ೪೬೫ರ ಮೊದಲನೇ ಪುಲಿಕೇಶಿ ಶಾಸನ. ಇವನು ಬಾದಾಮಿಯ ಅಧಿಷ್ಠಾನದಲ್ಲಿ ಒಂದು ಬಲವಾದ ಕೋಟೆಯನ್ನು ಕಟ್ಟಿಸಿದ ವಿಷಯವು ಇದರಲ್ಲಿದೆ. ಕರ್ನಾಟಕದಲ್ಲಿ ಶಕವರ್ಷವನ್ನು ಬಳಸಿದ ಶಾಸನಗಳಲ್ಲಿ ಇದು ಮೊದಲನೆಯದು. ಬಾದಾಮಿ ಮೂರನೇ ಗುಹದೇವಾಲಯದಲ್ಲಿಯ ಒಂದನೇ ಕೀರ್ತಿವರ್ಮನ ಕಾಲದ ಶಾಸನವು ಅಲ್ಲಿಯ ಅದ್ಭುತ ಗುಹಾ ವೈಷ್ಣವ ದೇವಾಲಯವನ್ನು ಈ ಅರಸನ ತಮ್ಮ ಮಂಗಳೇಶನು ತನ್ನ ಅಣ್ಣನ ಶ್ರೇಯಸ್ಸಿಗೋಸ್ಕರ ನಿರ್ಮಿಸಿದ ವಿಷಯವನ್ನು ತಿಳಿಸುತ್ತದೆ. ಇದರ ಜೊತೆಗೆ ಒಂದು ಅಪರೂಪದ ಗಮನಾರ್ಹ ಸಂಗತಿ ಇದೆ. ಮಂಗಳೇಶನು ತಾನು ದೇವಾಲಯವನ್ನು ನಿರ್ಮಿಸಿದ ಪುಣ್ಯ ತನ್ನ ಅಣ್ಣನಿಗೆ ಹೋಗಬೇಕೆಂದು ವ್ಯಕ್ತಪಡಿಸಿದ ಸದಿಚ್ಛೆ. ಮಂಗಳೇಶನ ಮಹಾಕೂಟ ಸ್ತಂಭ ಶಾಸನದಲ್ಲಿ ಒಂದು ಶ್ಲೋಕವು ಕಾಳಿದಾಸನ ರಘುವಂಶ ಮಹಾಕಾವ್ಯದ ಒಂದು ಶ್ಲೋಕದ ಅನುಕರಣೆಯಂತಿದೆ.[೪೦] ಅತಿ ಮುಖ್ಯ ಶಾಸನವೆಂದರೆ ಐಹೊಳೆಯ 'ಮೇಗುತಿ'ಯಲ್ಲಿಯ ಚಾಲುಕ್ಯ ಪ್ರಶಸ್ತಿ ಇದನ್ನು ರಚಿಸಿದವನು

ಇಮ್ಮಡಿಪುಲಿಕೇಶಿ ಆಸ್ಥಾನದಲ್ಲಿಯ ಜೈನ ಕವಿ ರವಿಕೀರ್ತಿ. ತನ್ನ ಕಾವ್ಯ ಪ್ರತಿಭೆಯಲ್ಲಿ ಮಹಾಕವಿಗಳಾದ ಕಾಳಿದಾಸ, ಭಾರವಿ ಮೊದಲಾದ ಕವಿಗಳಿಗೆ ತಾನೇನೂ ಕಡಿಮೆಯಿಲ್ಲವೆಂದು ಯೋಗ್ಯವಾಗಿಯೇ ಆತ್ಮ ವಿಶ್ವಾಸದಿಂದ ಹೇಳಿಕೊಂಡಿದ್ದಾನೆ. ನಿಜವಾಗಿಯೂ ಈ ಪ್ರಶಸ್ತಿಯು ಒಂದು ಉತ್ತಮ ಸಂಸ್ಕೃತ ಕಾವ್ಯ. ಇಲ್ಲಿ ಇನ್ನೊಂದು ಮುಖ್ಯ ವಿಷಯವಿದೆ. ರಘುವಂಶದ ಮೊದಲಾದ ಮಹಾಕಾವ್ಯಗಳನ್ನು, ಅಭಿಜ್ಞಾನ ಶಾಕುಂತಲ ಮೊದಲಾದ ನಾಟಕಗಳನ್ನು ರಚಿಸಿದ ಮಹಾಕವಿ ಕಾಳಿದಾಸನ ಕಾಲದ ಬಗ್ಗೆ ಗಂಭೀರ ವಿವಾದವಿದೆ. ಈ ದಿಶೆಯಲ್ಲಿ ಈ ಶಾಸನವು ಈ ಕಾಲಮಾನದ ನಿರ್ಣಯ ವಿಚಾರದಲ್ಲಿ ಇವನು ೭ನೇ ಶತಮಾನಕ್ಕಿಂತ ಪೂರ್ವದವನೆಂದು ಒಂದು ಸ್ಪಷ್ಟ ಸೂಚನೆಯನ್ನು ಕೊಡುತ್ತದೆ. ಇದು ಚಾಲುಕ್ಯ ವಂಶಾವಳಿಯನ್ನು ಮತ್ತು ತನ್ನ ಪ್ರಭು ಇಮ್ಮಡಿ ಪುಲಿಕೇಶಿಯ ದಿಗ್ವಿಜಯವನ್ನು ಸ್ವಾರಸ್ಯಕರವಾಗಿ ವರ್ಣಿಸುತ್ತದೆ. ಇನ್ನೊಂದು ಸ್ವಾರಸ್ಯಕರ ಸಂಗತಿಯೆಂದರೆ ಮಹಾಭಾರತ ಯುದ್ಧವಾದ ವರ್ಷದ ಜೊತೆಗೆ ತತ್ಸಮಾನ ಶಕವರ್ಷವನ್ನು ಉಪಯೋಗಿಸಿರುವುದು. ಅಲಂಪುರದಲ್ಲಿಯ ಬಾಲಬ್ರಹ್ಮೇಶ್ವರ ದೇವಾಲಯದ ವಿಜಯಾದಿತ್ಯನ ಶಾಸನವು ಅಪರೂಪವಾಗಿದೆ. ಇದರಲ್ಲಿಯ ೭೪ ಶ್ಲೋಕಗಳಲ್ಲಿ ೨೨ ಶ್ಲೋಕಗಳು ಈ ಅರಸನ ಹುಟ್ಟು, ಬಾಲ್ಯ, ಯುವರಾಜ್ಯತ್ವ ಮತ್ತು ಉಳಿದ ಭಾಗದಲ್ಲಿ ಇವನ ಆಳ್ವಿಕೆಯನ್ನು ಮತ್ತು ಇವನು ಮಾಡಿದ ಅನೇಕ ಜನೋಪಕಾರಿ ಕಾರ್ಯಗಳನ್ನು ವರ್ಣಿಸುತ್ತದೆ. ಈ ವಂಶದ ಪ್ರಬಲ ಅರಸುಗಳಲ್ಲಿ ಕೊನೆಯವನಾದ ಇಮ್ಮಡಿ ವಿಕ್ರಮಾದಿತ್ಯನು ಪ್ರಪ್ರಥಮವಾಗಿ ಸುಮಾರು ೭೪೦-೪೨ರಲ್ಲಿ ಕಾಂಚಿಯನ್ನು ಗೆದ್ದು ರಾಜಸಿಂಹೇಶ್ವರ ದೇವಾಲಯವನ್ನು ದರ್ಶನ ಮಾಡಿ ಅದರ ಸಂಪೂರ್ಣ ಸಂಪತ್ತನ್ನು ಆ ದೇವಾಲಯದ ಧಾರ್ಮಿಕ ಕಾರ್ಯಕ್ರಮಗಳಿಗೆ ಹಿಂತಿರುಗಿಸಿಕೊಟ್ಟ ವಿಷಯವನ್ನು ಆ ದೇವಾಲಯದ ಕಂಬದ ಮೇಲಿನ ಕನ್ನಡ ಶಾಸನವು ತಿಳಿಸುತ್ತದೆ. ಪಟ್ಟದಕಲ್ಲಿನಲ್ಲಿಯ ವಿರೂಪಾಕ್ಷ ಮತ್ತು ಮಲ್ಲಿಕಾರ್ಜುನ ದೇವಾಲಯದ ಶಾಸನಗಳಲ್ಲಿ ಆ ದೇವಾಲಯವನ್ನು ಕಟ್ಟಿಸಿದ ಇಮ್ಮಡಿ ವಿಕ್ರಮಾದಿತ್ಯನ ಪಟ್ಟದ ಮಹಿಷಿಯರಾದ ಲೋಕ ಮಹಾದೇವಿ ಮತ್ತು ತ್ರೈಲೋಕ್ಯ ಮಹಾದೇವಿಯರು ಮತ್ತು ಈ ದೇವಾಲಯವನ್ನು ನಿರ್ಮಿಸಿದ ಮಹಾಶಿಲ್ಪಿಗಳು ಮತ್ತು ಅವರಿಗೆ ಮಾಡಿದ ಸನ್ಮಾನ ಮೊದಲಾದ ವಿಷಯಗಳಿವೆ.

ಇಂಥ ಪ್ರಶಸ್ತಿ ಶಾಸನಗಳಲ್ಲದೆ, ಈ ಎಲ್ಲ ಸ್ಥಳಗಳಲ್ಲಿ ಶಿಲ್ಪಿಗಳ, ದಾನಿಗಳ ಹೆಸರುಗಳನ್ನು ಸೂಚಿಸುವ ಸಣ್ಣ ಸಣ್ಣ ಶಾಸನ ಫಲಕಗಳು, ಪಟ್ಟಿಗಳು, ಇವೆ. ಇವುಗಳಲ್ಲಿ ಮಾಲಗತ್ತಿ ಶಿವಾಲಯವನ್ನು ಕಟ್ಟಿದ ಆರ್ಯಮಿಂಚಿ ಉಪಾಧ್ಯಾಯರು, ಐಹೊಳೆಯಲ್ಲಿಯ ಹುಚ್ಚಪ್ಪಯ್ಯನ ಗುಡಿಯನ್ನು ಕಟ್ಟಿದ ನರಸೊಬ್ಬ ಮೊದಲಾದ ಹೆಸರಾಂತ ವಾಸ್ತುಶಿಲ್ಪಿಗಳ ಹೆಸರುಗಳು ಗಮನಾರ್ಹ. ಕೊನೆಯದಾಗಿ ಬಾದಾಮಿಯಲ್ಲಿಯ ಕಪ್ಪೆ ಆರಭಟ್ಟ ಪ್ರಶಸ್ತಿಯನ್ನು ಗಮನಿಸಲೇಬೇಕು. ಇದು ಆ ಆದಿಯಲ್ಲಿಯ ಶ್ಲೋಕವು ಸಂಸ್ಕೃತ ಉಳಿದ ಪ್ರಧಾನ ಭಾಗ ಪೂರ್ಣ ಕನ್ನಡದಲ್ಲಿರುವುದಲ್ಲದೆ, ತ್ರಿಪದಿ ಛಂದಸ್ಸಿನಲ್ಲಿದೆ. ಇದು ತ್ರಿಪದಿ ಛಂದಸ್ಸಿನ ಬಳಕೆಯ ಪ್ರಾಚೀನ ತಮ ಉದಾಹರಣೆ ಚಾಲುಕ್ಯ ಕಾಲದ ಕನ್ನಡ ಕಾವ್ಯಕ್ಕೆ ಒಂದು ಉತ್ತಮ ಉದಾಹರಣೆ.

ಅಡಿಟಿಪ್ಪಣಿಗಳು

೧. ಮೌರ್ಯ ಮತ್ತು ಶಾತವಾಹನರ ಯುಗ, ಪ್ರೊ.ಲಕ್ಷ್ಮಣ್ ತೆಲಗಾವಿ. ಪು.೧೫.

೨. ಅದೇ ಪು.೧೮

೩. ಅದೇ ಪು.೨೮

೪. ಅದೇ ಪು. ೬೦

೫. ಕರ್ನಾಟಕ ಚರಿತ್ರೆ, ಸಂಪುಟ ೧, ಸಂಪಾದಕ ಅ.ಸುಂದರ ಪು. ೧೬

೬. ಅದೇ. ೧೭

೭. ಅದೇ. ೧೯.

೮. ಅದೇ. ೨೩.

೯. ಅದೇ. ೩೦

೧೦. ಕರ್ನಾಟಕ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ಮರು ಚಿಂತನೆ, ಸಂ. ರಮೇಶ ನಾಯಕ, ಪು.೬

೧೧. ಅದೇ ಪು.೭

೧೨. ಅದೇ ಪು.೮

೧೩. ಅದೇ ಪು.೧೦

೧೪. ಚರಿತ್ರೆ ವಿಶ್ವಕೋಶ ೪, ಸಂಪಾದಕರು ವಿಜಯ್ ತಂಬಂಡ ಪೂಣಚ್ಚ, ಪು. ೯

೧೫. ಅದೇ ಪು.೧೪

೧೬. ಅದೇ ಪು.೧೫

೧೭. ಅದೇ ಪು.೨೦

೧೮. ಅದೇ ಪುಟ.೨೩

೨೦. H.Butterfield: History of Human Relations 1951, p.160.

೨೧. ಅದೇ ಪುಟ.೧೬೪

೨೨. ಅದೇ ಪುಟ.೧೬೮

೨೩. ಅದೇ ಪುಟ.೧೮೨

೨೪. E.S.Turner: A History of courting-1955. p.No.18.

೨೩. ಅದೇ ಪುಟ.೨೫

೨೩. ಅದೇ ಪುಟ.೩೦

೨೩. ಅದೇ ಪುಟ.೩೫

೨೪. ಅದೇ ಪುಟ.೪೦

೨೫. ಅದೇ ಪುಟ.೪೫

೨೬. ಎಂ.ಬಿ.ಪದ್ಮಾ ವೆಂಕಟರತ್ನಂ, ಇತಿಹಾಸ ಸಂಶೋಧನಾ ಮಾರ್ಗ, ಮೂರ್ತಿ ಬುಕ್ ಹೌಸ್, ಪುಟ.೩೨.

೨೭. ಅದೇ ಪು.೩೫

೨೮. ಅದೇ. ೩೮

೨೯. ಅದೇ. ೪೧.

೩೦. ಅದೇ. ೪೮

೩೧.. ಕರ್ನಾಟಕ ಚರಿತ್ರೆ, ಸಂಪುಟ ೧, ಸಂಪಾದಕ ಆ.ಸುಂದರ ಪು. ೫೦

೩೨. ಅದೇ ಪು.೫೪

೩೩. ಅದೇ ಪು.೬೦

೩೪. ಅದೇ ಪು.೬೨

೩೫. ಅದೇ ಪುಟ.೬೬

೩೬. ಅದೇ ಪುಟ. ೭೦

೩೭. ಅದೇ ಪು.೭೫

೩೮. ಅದೇ ಪು.೮೦

೩೯. ಅದೇ ಪುಟ.೮೨

೪೦. ಅದೇ ಪು.೮೩

ಅಧ್ಯಾಯ ೩

ಸಾಮ್ರಾಜ್ಯ ಚರಿತ್ರೆ (ವಿಜಯನಗರ) ಲೇಖನ ಶಾಸ್ತ್ರದ ಬೆಳವಣಿಗೆ

ಸಾಮ್ರಾಜ್ಯ ಚರಿತ್ರೆ (ವಿಜಯನಗರ) ಲೇಖನ ಶಾಸ್ತ್ರದ ಬೆಳವಣಿಗೆ

ವಿಜಯನಗರ ಪೂರ್ವದಲ್ಲಿ ಉತ್ತರ ಭಾರತವು ದೆಹಲಿ ಸುಲ್ತಾನರ ಮತ್ತು ಮೊಘಲರ ಆಳ್ವಿಕೆಯಿಂದ ಕೂಡಿದ್ದಿತು. ದೆಹಲಿ ಸುಲ್ತಾನರಲ್ಲಿ ಪ್ರಧಾವಾಗಿ ಗುಲಾಮಿ ಸಂತತಿ, ಖಿಲ್ಜಿಸಂತತಿ, ತೊಘಲಕ್ ಸಂತತಿ, ಸೈಯಿದ್ ಸಂತತಿ ಮತ್ತು ಲೂದಿ ಸಂತತಿಗಳು ಆಳ್ವಿಕೆ ನಡೆಸಿವೆ. ಇವರಲ್ಲಿ ಕುತ್ಬುದ್ದೀನ್ ಐಬಕ್, ಇಲ್ತಾಮಿಶ್, ಬಲ್ಬನ್, ಅಲ್ಲಾವುದ್ದೀನ್ ಖಿಲ್ಜಿ, ಮಹಮ್ಮದ್ ಬಿನ್ ತೊಘಲಕ್ ಇಬ್ರಾಹಿಂ ಲೂದಿ, ಸಿಕಂದರ್ ಲೂದಿ ಮೊದಲಾದವರ ಹೆಸರುಗಳು ಪ್ರಮುಖವಾದವುಗಳು. ಕ್ರಿ.ಶ. ೧೨೯೦ರಲ್ಲಿ ಫಿರೋಜ್ ಎಂಬಾತನು ಜಲಾಲುದ್ದೀನ್ ಫಿರೋಜ್ ಷಹಾ ಎಂಬ ಹೆಸರಿನಿಂದ ದೆಹಲಿಯ ಸಿಂಹಾಸನಾರೋಹಣ ಮಾಡುತ್ತಾನೆ. ಅನಂತರ ದೇವಗಿರಿ, ವಾರಂಗಲ್, ದ್ವಾರಸಮುದ್ರ, ಮಧುರೆ ಮೇಲೆ ಮಲ್ಲಿಕಾಫರನ ದಾಳಿ ಭಯದ ವಾತಾವರಣವನ್ನು ಸೃಷ್ಟಿಸಿತ್ತು. ಈಗಾಗಲೇ ಭಾರತದಲ್ಲಿ ಆರ್ಯರು. ಪರ್ಶಿಯನ್ನರು, ಹೂಣರು, ಸಿಥಿಯನ್ನರು, ಮಂಗೋಲೀಯನ್ನರು, ಗ್ರೀಕರು, ಮಹಮ್ಮದೀಯರು, ಪೋರ್ಚುಗೀಸರು, ಫ್ರೆಂಚರು, ಡಚ್ಚರು ಮತ್ತು ಬ್ರಿಟಿಷರು ಬಂದು ಹೋಗಿರುವುದು ಇತಿಹಾಸ. ವಿಜಯನಗರ ಕಾಲಕ್ಕೆ ಪೋರ್ಚುಗೀಸರ ಆಗಮನವು ಸಮುದ್ರದ ಸಾರಿಗೆ ವ್ಯಾಪಾರದ ಮೂಲಕವಾದರೆ, ಅಲ್ಲಾವುದ್ದೀನನು ದಕ್ಷಿಣ ದಂಡಯಾತ್ರೆಯಿಂದ ದಕ್ಷಿಣ ಭಾರತಕ್ಕೆ ಇಲ್ಸಾಮಿನ ಪ್ರದೇಶವಾಗಲು ಕಾರಣವಾಯಿತು. ಇವೆರಡೂ ಸಂದಿಗ್ಧ ಪ್ರಸಂಗಗಳು ಏಕ ಕಾಲಕ್ಕೆ ದಕ್ಷಿಣ ಭಾರತದಲ್ಲಿ ಸಂಭವಿಸಿದವು.

ಹೊಯ್ಸಳ ಕಲ್ಯಾಣ ಚಾಲುಕ್ಯ, ಕಮ್ಮಟದುರ್ಗದ ಅರಸರು ಕರ್ನಾಟಕದಲ್ಲಿ ಆಳ್ವಿಕೆ ನಡೆಸಿರುವುದು ತಿಳಿದುಬರುತ್ತದೆ. ಕಮ್ಮಟದುರ್ಗ ರಾಜ್ಯವು ಬಳ್ಳಾರಿ, ಕೊಪ್ಪಳ, ರಾಯಚೂರು, ಚಿತ್ರದುರ್ಗ, ದಾವಣಗೆರೆ, ಹಾವೇರಿ ಮತ್ತು ಧಾರವಾಡ ಜಿಲ್ಲೆಗಳನ್ನು ಬಲಗೊಂಡಿತು. ಮುಮ್ಮಡಿ ಸಿಂಗೇಯನಾಯಕ, ವೀರಕಂಪಿರಾಯ ಮತ್ತು ಕುಮಾರರಾಮ ಈ ರಾಜ್ಯದ ಪ್ರಖ್ಯಾತ ಅರಸರು. ಆರಂಭದಲ್ಲಿ ಇವರು ಚಿತ್ರದುರ್ಗ ಜಿಲ್ಲೆ ಮೊಳಕಾಲ್ಮೂರು ಪ್ರದೇಶದಲ್ಲಿದ್ದು, ತರುವಾಯ ಬಳ್ಳಾರಿ ಜಿಲ್ಲೆಯ ಸಂಡೂರು ಪರಿಸರದ ಹೊಸಮಲೆ ದುರ್ಗದಲ್ಲಿ ಆಳ್ವಿಕೆ ನಡೆಸಿದರಲ್ಲದೆ, ಮುಂದುವರೆದು ಆನೆಗೊಂದಿ ಪರಿಸರದ ಕಮ್ಮಟದುರ್ಗವನ್ನು ರಾಜಧಾನಿಯಾಗಿ ಮಾಡಿಕೊಂಡು ಆಳ್ವಿಕೆ ನಡೆಸಿದರು. ವಿಜಯನಗರ ಪೂರ್ವದಲ್ಲಿ ಈ ರಾಜ್ಯಜಗದ್ವಿಖ್ಯಾತಿ ಪಡೆದು ಕುಮಾರರಾಮನಿಂದ ಹಾಗೂ ಅವನ 'ಪರದಾರ ಸೋದರ' ಎಂಬ ನೈತಿಕ ಸಿದ್ಧಾಂತದ ಕಾರಣದಿಂದ.

ವಿಜಯನಗರ ಸಾಮ್ರಾಜ್ಯ ಕುರಿತು ಪ್ರಕಟವಾಗಿರುವ ಕೃತಿಗಳಲ್ಲಿ ಹೆಚ್ಚಿನವು ಸಾಂಸ್ಕೃತಿಕ ಚರಿತ್ರೆಗೆ ಸಂಬಂಧಿಸಿದೆ. ಇನ್ನು ಕೆಲವು ರಾಜಕೀಯ ಚರಿತ್ರೆಗೆ ಸೀಮಿತವಾಗಿದೆ. ಈ ಬಗೆಯ ಅಧ್ಯಯನಗಳ ವ್ಯಾಪ್ತಿಗೆ ನಿಲುಕಲಾರದ ಕೆಲವು ಸಂಗತಿಗಳು ಇರುವುದು ಸಂಶೋಧಕರನ್ನು ಕಾಡದೇ ಬಿಟ್ಟಿಲ್ಲ. ವಿಜಯನಗರ ಸಾಮ್ರಾಜ್ಯವು ಇಡೀ ದಕ್ಷಿಣ ಭಾರತದಲ್ಲಿಯೇ ಏಕೆ ಏಷ್ಯಾ ಖಂಡದಲ್ಲಿಯೇ ಖ್ಯಾತಿ ಪಡೆದ ಮಹಾ ಸಾಮ್ರಾಜ್ಯವಾಗಿತ್ತು. ಆ ಕಾಲದ ಶಾಸನ ಮತ್ತು ವಿದೇಶಿ ಯಾತ್ರಿಕರ ಬರವಣಿಗೆಗಳೇ ಇದಕ್ಕೆ ಸಾಕ್ಷಿ. ವೈಭವ ಮತ್ತು ಪ್ರಭಾವಶಾಲಿಯಾಗಿದ್ದ ವಿಜಯನಗರದಲ್ಲಿ ಕುಶಲಕರ್ಮಿ, ಕೂಲಿಕಾರರು, ಶೋಷಿತರು, ಬುಡಕಟ್ಟು ಜನರು, ಎಲೆಮರೆಯ ಕಾಯಿಯಂತೆ ಇದ್ದು ಸಾಮ್ರಾಜ್ಯಕ್ಕೆ ತಮ್ಮ ಅನುಪಮ ಕಾಣಿಕೆ ಸಲ್ಲಿಸಿದವರ ಚರಿತ್ರೆ ಎಲ್ಲೂ ದಾಖಲಾಗಿಲ್ಲವೆಂದು ಹೇಳಬಹುದು.[೧]

ಈ ಅಧ್ಯಯನವನ್ನು ಅಲಕ್ಷಿತರ ಚರಿತ್ರೆಯ ಹಿನ್ನಲೆಯನ್ನು ಒಳಗೊಳ್ಳುವಂತೆ ಮಾಡಿಕೊಳ್ಳಲಾಗಿದೆ. ಮೇಲಿನ ಮೂರೂ ವೃತ್ತಿಗಳು ಕರ್ನಾಟಕದ ಮತ್ತು ವಿಜಯನಗರದ ಚರಿತ್ರೆಯಲ್ಲಿ ಸಮಗ್ರವಾಗಿ ದಾಖಲಾಗಿಲ್ಲದ ಕಾರಣ ಅಂದಿನ ರಾಜಕೀಯ, ಧಾರ್ಮಿಕ, ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ, ಶೈಕ್ಷಣಿಕ ಸಂಗತಿಗಳ ಅವಲೋಕನವು ನಡೆದಿದೆ. ಈ ಸಾಂಸ್ಕೃತಿಕ ಕ್ಷೇತ್ರವು ಬಹುವಿಸ್ತಾರವಾದದ್ದು. ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ ಅನೇಕ ಕೃತಿಗಳು ಈ ಬಗ್ಗೆ ಬೆಳಕು ಚೆಲ್ಲುತ್ತವೆ. ಮೊಟ್ಟ ಮೊದಲಿಗೆ ರಾಬರ್ಟ್ ಸಿವೆಲ್ ಬರೆದ 'ಎಫಾರ್‌ಗಾಟನ್ ಎಂಪೈರ್ ವಿಜಯನಗರ', ಗ್ಯಾಸಟಿಯರ್‌ಗಳನ್ನು ಕ್ರಿ.ಶ. ೧೮೦೦ ರಿಂದಲೇ ಈ ಬಗ್ಗೆ ಪ್ರಕಟಿಸಲಾಗಿದೆ. ಸರ್ ಥಾಮಸ್ ಮನ್ರೋನ ವರದಿಗಳು, ಜಾನ್ ಕೆಲ್‌ಹಲ್‌ನ 'ಬಳ್ಳಾರಿ ಜಿಲ್ಲಾಗ್ಯಾಸೆಟಿಯರ್', ಡಬ್ಲ್ಯೂ. ಫ್ರಾನ್ಸಿಸ್ 'ಬಳ್ಳಾರಿ ಜಿಲ್ಲಾ ಗ್ಯಾಸಟಿಟರ್', ೧೯೬೪ರಲ್ಲಿ ಬಿ.ಎನ್. ಸತ್ಯನ್‌ರು 'ಮೈಸೂರು ಸ್ಟೇಟ್ ಬಳ್ಳಾರಿ ಡಿಸ್ಟ್ರಿಕ್ಟ್ ಗ್ಯಾಸೆಟಿಯರ್, ಕೆ. ಅಭಿಶಂಕರ್‌ರು ೧೯೭೨ರಲ್ಲಿ ಬಳ್ಳಾರಿ ಡಿಸ್ಟ್ರಿಕ್ಟ್ ಗ್ಯಾಸೆಟಿಯರ್‌ಗಳಲ್ಲಿ ವಿಜಯನಗರದ ಬಗ್ಗೆ ಮಾಹಿತಿ ಕೊಟ್ಟಿದ್ದಾರೆ.[೨] ಸಿವೆಲ್‌ನ ಕೃತಿಗೆ ಪ್ರತಿರೋಧ ಒಡ್ಡಿದ ಬಿ. ಸೂರ್ಯನಾರಾಯಣ ರಾವ್ ಅವರ ಕೃತಿ 'ಮರೆಯಲಾಗದ (ಕನ್ನಡಕ್ಕೆ ೨೦೦೦)ದಲ್ಲಿ ಮಹಾಸಾಮ್ರಾಜ್ಯ ವಿಜಯನಗರ' ಈ ಕೃತಿ ಹೊಸ ಒಳನೋಟಗಳನ್ನು ತಿಳಿಸುತ್ತದೆ. ಬರ್ಟನ್ ಸ್ಟೈನ್‌ರ ದ ನ್ಯೂ ಕೇಂಬ್ರಿಡ್ಜ್ ಹಿಸ್ಟರಿ ಆಫ್ ಇಂಡಿಯಾ; ವಿಜಯನಗರ ಎಂಬ ಕೃತಿಯಲ್ಲಿ ಅನೇಕ ವಿಚಾರಗಳನ್ನು ಮಂಡಿಸಿರುತ್ತಾರೆ. ಎ.ಹೆಚ್. ಲಾಂಗ್‌ಹರ್ಸ್ಟ್‌ರ 'ಹಂಪಿರ್‍ಯೂಯಿನ್ಸ್', ಸಿ.ಟಿ.ಎಂ. ಕೊಟ್ರಯ್ಯನವರ (ವಿಜಯನಗರ ಸಾಮ್ರಾಜ್ಯದ (೨೦೦೧) ನೀರಾವರಿ ವ್ಯವಸ್ಥೆ' ಅ.ನ.ಕೃಷ್ಣರಾಯರ 'ಕೃಷ್ಣದೇವರಾಯ (೨೦೦೦)', ಜಿ.ಎಸ್. ದೀಕ್ಷಿತರ 'ಸಂಗಮರ ಕಾಲದ (೧೯೯೧) ವಿಜಯನಗರ', ಎ.ಎಸ್. ನಂಜುಂಡ ಸ್ವಾಮಿಯವರ ವಿಜಯನಗರ ಇತಿಹಾಸ (೧೯೯೯) ಪುರುಷೋತ್ತಮ ಬಿಳಿಮಲೆ ಮತ್ತು ಚೆಲುವರಾಜು ಅವರ ಹಂಪಿ ಜಾನಪದ ೧೯೯೬, ಚೆಲುವರಾಜು ಅವರ ಹಂಪಿ ಸ್ಮಾರಕಗಳಲ್ಲಿ ಜಾನಪದೀಯ ಅಂಶಗಳು ೧೯೯೯, ಡಾ.ಎಸ್. ರಾಜಶೇಖರ್ ಸಂಗ್ರಹಿಸಿದ ವಿಜಯನಗರ ಕಾಲದ ಘಟನಾವಳಿಗಳಲ್ಲಿ ಸೂಚಿ, ಬಿ. ರಾಘವೇಂದ್ರರಾವ್‌ರ (೧೯೯೫) ವಿಜಯನಗರ, ಪಿ. ರಾಮಶರ್ಮ

ಅವರ ಎ ಹಿಸ್ಟರಿ ಆಫ್ ವಿಜಯನಗರ ಎಂಫೈರ್ ೧೯೯೮, ವಸುಂಧರಾ ಪಿಲಿಯೋಜಾರ ಅಳಿದುಳಿದ ಹಂಪಿ ೧೯೮೭ ಮತ್ತು ವಿಜಯನಗರ ಕಾಲದಲ್ಲಿ ಕಲೆ, ಸಾಹಿತ್ಯ ಶಾಮರಾವ್ ಜಿ.ಎಸ್. ವಿದೇಶೀಯರು ಕಂಡ ವಿಜಯನಗರ, ವ. ಸೀತಾರಮಯ್ಯನವರ ಕೃಷ್ಣದೇವರಾಯನ ದಿನಚರಿ, ಸೂರ್ಯನಾಥ ಕಾಮತ್‌ರ ವಿಜಯನಗರ ಸಾಮ್ರಾಜ್ಯ. ಎಸ್.ಕೆ. ರಾಚಂದ್ರರಾವ್‌ರ ತಿರುಪತಿ ತಿಮ್ಮಪ್ಪ (೧೯೮೦), ಸದ್ಯೋಜಾತ ಸ್ವಾಮೀಜಿ ಅವರ ವಿಜಯನಗರ ಕಾಲದ ಧಾಮಿಕ ಸ್ಥಿತಿ-ಗತಿ ೧೯೭೧, ಆಮುಕ್ತ ಮಾಲ್ಯದ (ಅನು) ನಿರಪಮಾ ೧೯೭೯ ಇನ್ನು ಮೊದಲಾದ ಅಧ್ಯಯನಗಳು ಈ ಬಗ್ಗೆ ನಡೆದಿವೆ.[೩]

ಹಂಪೆ ಮತ್ತು ವಿಜಯನಗರ ಸಾಮ್ರಾಜ್ಯ ಕುರಿತಂತೆ ಇತ್ತೀಚೆಗೆ ಅಧ್ಯಯನ, ಸಂಶೋಧನೆಗಳು ನಡೆದ ಬಗ್ಗೆ ಸೂಕ್ಷ್ಮವಾಗಿ ಇಲ್ಲಿ ವಿಶ್ಲೇಷಿಸಲಾಗುವುದು. ಆನೆಗೊಂದಿ ಮತ್ತು ಹಂಪೆ ವಿಜಯನಗರದ ರಾಜಧಾನಿಗಳಾಗಿದ್ದ ಸ್ಥಳಗಳು, ರಾಜಕೀಯ, ಧಾರ್ಮಿಕ, ಮೋಕ್ಷ ಹಾಗೂ ತ್ಯಾಗಮಯ ಕ್ಷೇತ್ರವಾದ ಹಂಪೆ ನಾನಾ ಬಗೆಯಲ್ಲಿ ಖ್ಯಾತಿ ಪಡೆದಿರುವುದು ಗಮನಾರ್ಹ. ಹಂಪೆ ಮತ್ತು ವಿಜಯನಗರ ಸಾಮ್ರಾಜ್ಯಕ್ಕೆ ಅವಿನಾಭಾವ ಸಂಬಂಧವಿದೆ. ಹೀಗಾಗಿ ಇವರೆಡು ಕ್ಷೇತ್ರಗಳನ್ನು ಕುರಿತಂತೆ ವಿಫುಲ ಅಧ್ಯಯನಗಳು ನಡೆದಿವೆ. ವಿಜಯನಗರ ಕಾಲದಲ್ಲಿ ಹಂಪೆಯನ್ನು ಕನ್ನಡ-ತೆಲಗು ಇತರ ಭಾಷೆಗಳ ಕವಿಗಳು ಪರಿಚಯಿಸಿದ್ದು ಒಂದೆಡೆಯಾದರೆ, ವಿದೇಶಿಯಾತ್ರಿಕರು, ಸಮಕಾಲೀನ ಬರಹಗಾರರು ಮತ್ತೊಂದೆಡೆ ಪರಿಚಯಿಸಿದ್ದಾರೆ. ಶಾಸನ, ಶಿಲ್ಪ, ಸ್ಮಾರಕ, ನಾಣ್ಯ, ಕಾವಯ ಇತರ ಆಕರಗಳಲ್ಲಿ ಅಂದಿನ ಜನ-ಜೀವನದ ಚಿತ್ರಣವನ್ನು ಚಿತ್ರಿಸಿದ್ದಾರೆ. ವಿಜಯನಗರೋತ್ತರ ಹಾಗೂ ಬ್ರಿಟಿಷರ ಕಾಲದಲ್ಲಿ ಹಂಪೆ ಹಾಗೂ ವಿಜಯನಗರ ಸಾಮ್ರಾಜ್ಯವನ್ನು ಕುರಿತು ಅನೇಕ ವಿದ್ವಾಂಸರು ಪರಿಚಯಿಸಿದ್ದಾರೆ. ಈ ಬಗ್ಗೆ ಹತ್ತೊಂಬತ್ತು ಮತ್ತು ಇಪ್ಪತ್ತನೆಯ ಶತಮಾನಗಳಲ್ಲಿ ಅನೇಕ ಬಗೆಯ ಸಂಶೋಧನೆಗಳಾಗಿವೆ. ಪ್ರಮುಖವಾಗಿ ಇ.ಸಿ. ರಾವೆನ್‌ಷಾ, ಸರ್. ಥಾಮಸ್ ಮನ್ರೋ, ಎಫ್. ರಾಬರ್ಟ್‌ಸನ್, ರಾರ್ಬಟ್ ಸಿವೆಲಂ, ಲಾಂಗ್‌ಹರ್ಟ್ಸ್, ಬರ್ಟನ್ ಸ್ಟೈನ್, ಜಾರ್ಜ್‌ಮಿಳೆಲ್, ಜಾನ್‌ಫಿಡ್ಜ್, ವಸುಂಧರಾ ಫಿಲಿಯೋಜಾ, ಅನಿಲಾವರ್ಗೀಸ್ ಮೊದಲಾದವರ ಅಧ್ಯಯನಗಳು ಇಲ್ಲಿ ಪರಿಗಣನಾರ್ಹ. ಅದೇ ರೀತಿ ದಕ್ಷಿಣ ಭಾರತದ ಇತಿಹಾಸಕಾರರು ಹೊಸ ಸಂಶೋಧನೆಗಳನ್ನು ಕೈಗೊಂಡಿರುವರು. ಕರ್ನಾಟಕದಲ್ಲಿ ಡಾ.ಪಿ.ಬಿ. ದೇಸಾಯಿ, ಆರ್.ಎಸ್. ಪಂಚಮುಖಿ, ಡಾ. ಶ್ರೀನಿವಾಸರಿತ್ತಿ, ಬಿ. ಸೂರ್ಯನಾರಾಯಣರಾವ್, ಎನ್ ವೆಂಕಟರಮಣಯ್ಯ, ಎಸ್. ಶ್ರೀಕಂಠಯ್ಯ, ಟಿ.ವಿ. ಮಹಾಲಿಂಗಂ, ಓ. ರಾಮಂಚದ್ರಯ್ಯ, ಡಾ. ಜಿ.ಎಸ್. ದೀಕ್ಷಿತ್, ಡಾ. ಕೆ.ಶ್ರೀಕಂಠಶಾಸ್ತ್ರಿ, ಡಾ. ಎ.ಎಸ್. ಆಳ್ತೇಕರ್, ಕೆ.ಎ. ನೀಲಕಂಠಶಾಸ್ತ್ರಿ, ಡಾ.ಅ. ಸುಂದರ, ಡಾ. ಸೆ. ರಾಜಶೇಖರ, ಡಾ. ಕೆ.ಆರ್. ಬಸವರಾಜ ಮೊದಲಾದವರು ಸಮಗ್ಗ ಅಧ್ಯಯನ ಮಾಡಿರುವುದು ಸ್ಪಷ್ಟ ಇನ್ನು ಆವಿಲ್ಸನ್, ವಿ.ಎಸ್. ಸ್ಮಿತ್, ವಿರಂಗಾಚಾರಿ, ಫಾದರಂ ಹೆರಾಸ್, ಎನ್. ವೆಂಕಟರಮಣಯ್ಯ, ಎಸ್. ಶ್ರೀಕಂಠಯ್ಯ ಇತರರು ಸಂಶೋಧನೆ ನಡೆಸಿದ್ದಾರೆ.[೪] ವಿಜಯನಗರ ಮೂಲದ, ಸ್ಥಾಪಕರು (ತೆಲುಗು-ಕನ್ನಡಿಗರು) ಜಾತಿ, ಮತ, ಧರ್ಮ ಕುರಿತು ಅಧ್ಯಯನ ನಡೆಸಿದ್ದಾರೆ. ೧೯೦೦ರಲ್ಲಿ ರಾಬರ್ಟ್‌ಸಿವೆಲ್, ೧೯೦೫ರಲ್ಲಿ ಬಿ. ಸೂರ್ಯನಾರಾಯಣರಾವ್, ೧೯೧೯ರಲ್ಲಿ ರಾಮಸ್ವಾಮಿ ಅಯ್ಯಾಂಗಾರ್, ಕೆ. ಈಶ್ವರದತ್ತ, ಆಲೂರು

ವೆಂಕಟರಾಯ, ೧೯೧೩ರಲ್ಲಿ ಪಿ. ಕುಲಕರ್ಣಿ ಮೊದಲಾದವರ ಸಂಶೋಧನೆಗಳು ಮೂಲಭೂತ ಸಮಸ್ಯೆಗಳನ್ನು ಕುರಿತಂತವು. ಟಿ.ವಿ. ಮಹಾಲಿಂಗ ಮೊದಲಾದ ಲೇಖಕರು ಗಮನಾರ್ಹ ಸಾಧನೆ ಮಾಡಿದ್ದಾರೆ. ೧೯೬೧ರಲ್ಲಿ ಹಂಪೆ-ಆನೆಗೊಂದಿ ಪರಿಸರದ ಸ್ಮಾರಕ, ಚರಿತ್ರೆ, ಸಂಸ್ಕೃತಿಯನ್ನು ಡಾ. ಅ. ಸುಂದರ ಅವರು ಬೆಳಕಿಗೆ ತಂದರು. ಕೆ. ವೆಂಕಟರಾಮಪ್ಪ, ಡಾ. ಎ.ವಿ. ವೆಂಕಟರತ್ನಂ ನಿರುಪಮಾ, ಡಾ. ಜಿ.ಎಸ್. ದೀಕ್ಷಿತ್, ಸಿ.ಟಿ.ಎಂ. ಕೊಟ್ರಯ್ಯ, ಕೆ.ಎಸ್. ಶಿವಣ್ಣ ಮೊದಲಾದ ಇತಿಹಾಸಕಾರರು ರಾಜಕೀಯ, ಆರ್ಥಿಕ, ಸಾಂಸ್ಕೃತಿಕ, ಕಲಾ, ಸಾಹಿತ್ಯ ಮೌಖಿಕ ಇತಿಹಾಸ ಕುರಿತಂತೆ ಈ ಕ್ಷೇತ್ರದಲ್ಲಿ ಅಧ್ಯಯನ ಮಾಡಿದ್ದಾರೆ.

ಬದಲಾದ ಚರಿತ್ರೆಯ ಇಂದಿನ ಬರವಣಿಗೆಯ ಶೈಲಿ, ವಿಧಾನ, ವಿಜಯನಗರ ಮಟ್ಟಿಗೆ ತೀರಾ ಪ್ರಸ್ತುತ್ತವಾಗಿದೆ. ಇಂದು ವಾದ, ಸಿದ್ಧಾಂತ ಮತ, ಧರ್ಮ, ಸಂಸ್ಕೃತಿಗಳಷ್ಟೇ ಜೋತು ಬೀಳಲಾಗದು. ಸಬಾಲ್ಟರ್ನ್, ಮಾರ್ಕ್ಸ್‌ವಾದ, ದಲಿತ ಚಿಂತನೆ, ಬುಡಕಟ್ಟು ಚಿಂತನೆ, ಮಹಿಳಾ ಚಿಂತನೆ ಹೀಗೆ ಅಲಕ್ಷಿತ ಕ್ಷೇತ್ರವನ್ನು ಕುರಿತು ಅಧ್ಯಯನ ಮಾಡುವ ಜರೂರಿದೆ. ವಿಜಯನಗರ ಅವಧಿಯಲ್ಲಿ ತುಳಿತಕ್ಕೊಳಪಟ್ಟವರು, ಶೋಷಿತರು, ಗುಲಾಮರು, ಬಾಲಕಾರ್ಮಿಕರು, ದೇವದಾಸಿಯರು, ಸತಿ ಸಹಗಮನ, ನರಬಲಿ, ಪ್ರಾಣಿಬಲಿ ಇತರ ಸಾಮಾಜಿಕ ಅನಿಷ್ಟ ಪದ್ಧತಿ ಮತ್ತು ಲಕ್ಷಣಗಳ ಬಗ್ಗೆ ಅಧ್ಯಯನಗಳಾಗುತ್ತಿವೆ. ಜಾತ್ಯಾತೀತ ಮನೋಭಾವದಿಂದ ಯಾವುದಕ್ಕೂ ಧಕ್ಕೆಯಾಗದಂತೆ ಚರಿತ್ರೆ ರಚಿಸಲಾಗುತ್ತಿದೆ.[೫] ಕ್ರೂರ ಪದ್ಧತಿಗಳು, ಸಮಾಜ ಘಾತಶಕ್ತಿಗಳು ವಿಜಯನಗರದಲ್ಲಿ ಬಡತನ, ದಾರಿದ್ರ್ಯ ಇರುವಂತೆ ಸಂಪತ್ತಿನ ವೈಭವವು ಗಮನ ಸೆಳೆಯುವಂತಿತ್ತು. ಈ ಸಾಮ್ರಾಜ್ಯವನ್ನಾಳಿದ ಸಂಗಮ, ಸಾಳುವ, ತುಳುವ ಮತ್ತು ಅರವೀಡು ಎಂಬ ನಾಲ್ಕು ವಂಶಗಳು ಈ ನಾಡಿಗೆ ತಮ್ಮದೇ ಆದ ಕಾಣಿಕೆ ಸಲ್ಲಿಸಿವೆ. ವಿಶೇಷವೆಂದರೆ ಆಕರಗಳು ಲಭ್ಯವಿರುವ ವ್ಯಕ್ತಿ, ವಿಷಯ ಘಟನೆ, ಕಾಲ ಮತ್ತು ವಂಶಕ್ಕೆ ಇಲ್ಲಿ ಆದ್ಯತೆ ನೀಡಿರುವುದು ಗಮನಾರ್ಹ. ಹಂಪಿಯ ಪರಿಸರವು ಪುರಾತತ್ವ ಚಾರಿತ್ರಿಕ ಮತ್ತು ಧಾರ್ಮಿಕವಾಗಿ ವೈವಿಧ್ಯಮಯ ಕ್ಷೇತ್ರವಾಗಿರುವುದು ಒಂದು ವಿಸ್ಮಯ. ಇಂದಿಗೂ ಈ ಪರಿಸರದಲ್ಲಿ ಪುರಾತತ್ವ ನಿವೇಶನಗಳನ್ನು ಸರ್ವೇಕ್ಷಣೆ ಮತ್ತು ಉತ್ಖನನ ಮಾಡುತ್ತಿರುವುದು ಕಂಡುಬರುತ್ತದೆ. ಆ ಮೂಲಕ ಹೊಸ, ಹೊಸ ಸ್ಮಾರಕ, ಶಿಲ್ಪ, ಶಾಸನ, ನಿವೇಶನಗಳನ್ನು ಬೆಳಕಿಗೆ ತರಲಾಗಿದೆ.

ಕರ್ನಾಟಕ ಸರ್ಕಾರ ೧೯೮೧ರಲ್ಲಿ ಹಂಪಿ ಪುನರುತ್ಥಾನ ಯೋಜನೆ ಮೂಲಕ ಉತ್ಖನನ ಆರಂಭಿಸಿತು. ಮೊದಲು ಹಂಪೆಯ ವಿರೂಪಾಕ್ಷ ದೇವಾಲಯದ ತೇರುಬೀದಿ, ಟಂಕಸಾಲೆ ಆವರಣ, ಅರಮನೆಯ ಕಟ್ಟಡಗಳು, ಪ್ರತಿಷ್ಠಿತ ವ್ಯಕ್ತಿಗಳ ಅರಮನೆಗಳ ಸಮುಚ್ಚಯ ಜೊತೆಗೆ ಬಾವಿ ಮತ್ತು ದೇವಾಲಯಗಳನ್ನು ಹೊರ ತೆಗೆಯಲಾಯಿತು.ಹಜಾರರಾಮ ದೇವಾಲಯ, ಸಿಂಗಾರದ ಹೆಬ್ಬಾಗಿಲಿನ ಹತ್ತಿರ ಕಟ್ಟಡಗಳನ್ನು ಉತ್ಖನನ ಮಾಡಿ ರಕ್ಷಣೆ ಮಾಡಲಾಯಿತು. ಅದೇ ರೀತಿ ತೇರುಬೀದಿ ಅಹ್ಮದ್ ಖಾನ್ ಧರ್ಮಶಾಲೆ, ಸಿಂಗಾರದ ಹೆಬ್ಬಾಗಿಲು ಬೇಟೆಗಾರರ ಹೆಬ್ಬಾಗಿಲು, ಅಚ್ಯುತಾಪುರದ ಶಿಲ್ಪಗಳ ಬಗ್ಗೆ ರಕ್ಷಣಾ ಕಾರ್ಯಗಳನ್ನು ಹಾಗೂ ಅಧ್ಯಯನಗಳನ್ನು ಕೈಗೆತ್ತಿಕೊಳ್ಳಲಾಗಿದೆ.[೬]

ಇತ್ತೀಚೆಗೆ ವಿಜಯನಗರ ಕಾಲದ ಸಂಸ್ಕೃತಿ ಕುರಿತಂತೆ ಅನೇಕರು ಬೆಳಕು ಚೆಲ್ಲುವ ಕೆಲಸ ಮಾಡಿದ್ದಾರೆ. ಡಾ. ಎಂ.ಜಿ. ನಾಗರಾಜ ಅವರು ವಿಜಯನಗರ ಕಾಲದ ವೀರಭದ್ರ ಪರಂಪರೆ ಕುರಿತು ಹೊಸ ಸಂದೇಶಕೊಟ್ಟಿರುವವರು. ಇವರೇ ಇನ್ನೊಂದು ಲೇಖನದಲ್ಲಿ ಸಂಗಮರ ಮೂಲ, ಕುಮ್ಮಟ ಅರಸರು ಮತ್ತು ವಾರಂಗಲ್ಲಿನ ಕಾಕತೀಯರೊಂದಿಗೆ ಸಂಗಮರನ್ನು ಸಮೀಕರಿಸಿರುವರು. ಹರಿಹರ ಬುಕ್ಕರು ಕಾಕತೀಯರಲ್ಲಿ ಭಂಡಾರಿಗಳಾಗಿದ್ದರು.

ವಿಜಯನಗರ ಮತ್ತು ಸಮಕಾಲೀನ ಪಾಳೆಯಪಟ್ಟುಗಳೊಡನೆ ಅವಿನಾಭಾವ ಸಂಬಂಧವಿತ್ತು. ಸಾಳುವ ವಂಶದವರ ಮರುಪ್ರಯತ್ನ ಲೇಖನವನ್ನು ಡಾ. ಬಿ.ರಾಜಶೇಖರಪ್ಪ ಬರೆದಿದ್ದಾರೆ. ಇಲ್ಲಿ ಸಾಳುವ ಮತ್ತು ಕಾಮಗೇತ ವಂಶದವರ ಕೈ ಮೇಲಾದ ಬಗ್ಗೆ ವಿವರಿಸಲಾಗಿದೆ.

ವಿಜಯನಗರ ಕಾಲದ ಶಾಸನಗಳು ಸಹಸ್ರಾರು ಸಂಖ್ಯೆಯಲ್ಲಿ ಬೆಳಕಿಗೆ ಬಂದಿವೆ. ಹಂಪಿಯ ಬಳಿ ಸಿಂಗನಾಯಕನಹಳ್ಳಿ ಶಾಸನದಲ್ಲಿ ಕೃಷ್ಣದೇವರಾಯ ಪಟ್ಟಾಭಿಷೇಕವಾದ ವರ್ಷ ಕ್ರಿ.ಶ. ೧೫೦೯ ಬದಲಾಗಿ ಕ್ರಿ.ಶ. ೧೫೧೦ ಎಂದು ದಿ.ಡಾ. ಚನ್ನಬಸಪ್ಪ ಎಸ್. ಪಾಟೀಲ್ ತಿಳಿಸಿದ್ದಾರೆ. ಡಾ. ಶ್ರೀನಿವಾಸ ಪಾಡಿಗಾರ ಅವರು ಲಕ್ಷ್ಮೀಶ್ವರದ ಎರಡು ಜಯಪತ್ರಕುರಿತು ಲೇಖನ ಪಕಟ್ಟಿಸಿದ್ದಾರೆ. ಹಂಪೆಯ ಪರಿಸರದಲ್ಲಿ ನವಶೆಧಿತ ಶಾಸನಗಳಲ್ಲಿ ಸ. ೩೮ ಶಾಸನಗಳನ್ನು ಡಾ. ಟಿ.ಎಂ. ಮಂಜುನಾಥಯ್ಯನವರು ಬೆಳಕಿಗೆ ತಂದಿರುವರು. ವಿಜಯನಗರ ಕಾಲದಲ್ಲಿ ಬೇಡರು ವಹಿಸಿದ ಪಾತ್ರ ದೊಡ್ಡದು. ಬೇಟೆ, ಪಶುಪಾಲನೆ, ಕೃಷಿಯಲ್ಲಿ ತೊಡಗಿರುವಂತೆ ಇವರು ತಳವಾರರು, ಸೈನಿಕರು, ಪಾಳೆಯಗಾರರು ಆಗಿದ್ದರು. ಖಾಸಬೇಡರ ಪಡೆಯ ಮೀಸಲು ಪಡೆ, ಬೇಡಪಡೆಗಳು ವಿಜಯನಗರ ಸಾಮ್ರಾಜ್ಯದ ಅಸ್ತಿತ್ವಕ್ಕೆ ಹೆಗಲು ಕೊಟ್ಟದ್ದು ನಿಜ. ಹಂಪಿ ಪರಿಸರದಲ್ಲಿರುವ ಬೇಟೆಗಾರರ ಹೆಬ್ಬಾಗಿಲು, ತಳವಾರಗಅಪ್ಪವು ಇವರನ್ನು ಸಾಕ್ಷೀಕರಿಸುತ್ತವೆ.[೬] ಮ್ಯಾಸಬಾಡ್ಕಿ ನಾಯಕತನ ಎಂಬ ಪದವಿಯನ್ನು ವಿಜಯನಗರದವರು ಬೇಡರಿಗೆ ಕೊಟ್ಟ ಸಂಗತಿ ತಿಳಿಯುವುದು. ಕಮಲಾಪುರದ ಗುರಿಕಾರ ಕಾಟಯ್ಯನ ಬಳಿ ಇರುವ ಶಾಸನ (ಕಂಚಿನ) ಬೆಳಕು ಚೆಲ್ಲುವುದು ವಿಜಯನಗರ ಕಾಲದಲ್ಲಿ ಮೀನುಗಾರರು, ಅಂಬಿಗರು ಇದ್ದ ಬಗ್ಗೆ ಸಂಶೋಧನ ಲೇಖನಗಳನ್ನು ಡಾ. ವಿರೂಪಾಕ್ಷಿ ಪೂಜಾರಹಳ್ಳಿ, ಪ್ರಕಟಿಸಿದ್ದಾರೆ. ಒಟ್ಟಾರೆ ವಿಜಯನಗರ ಸಾಮ್ರಾಜ್ಯದಲ್ಲಿ ಬೇಡರು ನಿರ್ಣಾಯಕ ಪಾತ್ರವಹಿಸಿದ್ದರು. ತಾಳಿಕೋಟೆ ಕಾಳಗದಲ್ಲಿ ಸು. ೪೦ ಸಾವಿರ ಬೇಡ ಪಡೆ ಹತವಾಯಿತೆಂದು ಅವರ ಮಡದಿಯರು ಅನಾಥರಾದವರೆಂದು ತಿಳಿಯುತ್ತದೆ. ವಿಜಯನಗರ ಅಧ್ಯಯನ, ಇತಿಹಾಸ ದರ್ಶನ ಹಾಗೂ ಹಂಪಿ ಪರಂಪರೆ ಕೃತಿಗಳಲ್ಲಿ ಮೇಲಿನ ಸಂಗತಿಗಳಿವೆ.

ಕೆಳದಿ ಗುಂಡಾ ಜೋಯಿಸರು ವಿಜಯನಗರ ಚರಿತ್ರೆ ಮತ್ತು ಸಂಸ್ಕೃತಿಗೆ ತಮ್ಮದೇ ಆದ ಕಾಣಿಕೆ ಸಲ್ಲಿಸಿದ್ದಾರೆ. ಕೆಳದಿ ಅರಸರು ಮತ್ತು ವಿಜಯನಗರ, ರಾಯರೇಖೆ, ಹಸ್ತಪ್ರತಿ, ಕಂಚಿನ ಪತ್ರಗಳ ಬಗ್ಗೆ ಇವರು ತಿಳಿಸಿದ್ದಾರೆ. ಇತ್ತೀಚಿನ ಸಂಶೋಧನೆಗಳಲ್ಲಿ ಗಮನಾರ್ಹವಾದುದು ವಿಜಯನಗರ ಸ್ಥಾಪಕ ಗುರುಗಳು.[೭] ಈ ಬಗ್ಗೆ ೧೮೪೭ರಲ್ಲಿ ರಾಯಲ್ ಏಷಿಯಾಟಿಕ ಸೊಸೈಟಿ ಪತ್ರಿಕೆಯಲ್ಲಿ ಮಾಧವ ಮತ್ತು

ಸಾಯಣರ ಬಗ್ಗೆ ಭಾವುದಾಜಿಯವರು ಬರೆದಿದ್ದರು. ಶಾಂತರಸ ಕವಿಗಳು ಕ್ರಿಯಾಶಕ್ತಿ ಬಗ್ಗೆ ಬರೆದಿದ್ದಾರೆ. ನಂತರ ಇಂಥ ದೊಡ್ಡ ಸಂಗತಿಯನ್ನು ಹಂಪಿ ಕನ್ನಡ ವಿಶ್ವವಿದ್ಯಾಲಯ ಶಾಸನಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾದ ಡಾ. ದೇವರಕೊಂಡಾರೆಡ್ಡಿಯವರು ಮಾಧವ ವಿದ್ಯಾರಮ್ಯ, ಕ್ರಿಯಾಶಕ್ತಿ ಮತ್ತು ವಿಜಯನಗರ ಸಾಮ್ರಾಜ್ಯದ ಸಂಬಂಧ ಕುರಿತ ಲೇಖನದಲ್ಲಿ ಹೊಸ ಬೆಳಕು ಚೆಲ್ಲಿದ್ದಾರೆ.[೮] ಈ ಸಂಶೋಧನೆಯ ಫಲವಾಗಿ ಅವರು ವಿಜಯನಗರ ಸ್ಥಾಪನೆಯಲ್ಲಿ ಮಾಧವ, ಸಾಯಣ, ವಿದ್ಯಾರಣ್ಯ, ಕ್ರಿಯಾಶಕ್ತಿಯ ಪಾತ್ರವೇನು ಇಲ್ಲ ಎಂದಿದ್ದಾರೆ. ಆರಂಭದ ಪುರೋಹಿತಶಾಹಿ ಬರವಣಿಗೆಗಳಿಗೆ ತಕ್ಕ ಉತ್ತರವನ್ನು ಇವರು ಸಲ್ಲಿಸಿದ್ದು ಸರಿಯಾಗಿದೆ.

ಹಂಪಿ-ಕಮಲಾಪುರದ ಮಧ್ಯೆ ಇರುವ ಮಹನವಮಿ ದಿಬ್ಬದಿಂದ ಕಮಲಮಹಲ್‌ಗೆ ಹೋಗುವ ಕಾಲು ದಾರಿಯ ಪೂರ್ವಕ್ಕೆ ಪಟ್ಟಣದ ಎಲ್ಲಮ್ಮನ ದೇವಾಲಯವಿದೆ. ಇದನ್ನು ವಿಜಯನಗರದ ಗ್ರಾಮದೇವತೆ ಎಂದು ಗುರುತಿಸಲಾಗಿದೆ.

ಹಂಪಿ ಸ್ಮಾರಕಗಳು ವಿವಿಧ ಸಂದರ್ಭದಲ್ಲಿ ವ್ಯಕ್ತಿಗಳಿಗೆ ಪ್ರೇರಣೆ ನೀಡಿದ ಸಂಗತಿಯನ್ನು ಪ್ರೊ. ಲಕ್ಷ್ಮಣ್ ತೆಲಗಾವಿಯವರು ಅನೇಕ ಮಹಾನುಭವನ್ನು ಉದಾಹರಿಸಿದ್ದಾರೆ. ಇವರು ವಿಜಯನಗರ ಕಾಲದ ನಾಣ್ಯ, ಶಾಸನ, ಶಿಲ್ಪ ಸಾಹಿತ್ಯ ಕೃತಿಗಳ ಬಗ್ಗೆ ಅಪಾರ ಕಾಳಜಿಯಿಂದ ಶೋಧನೆ ಕಾರ್ಯದಲ್ಲಿ ತೊಡಗಿರುವರು. ವಿಜಯನಗರ ಸಾಮ್ರಾಜ್ಯ ಬಹು ವಿಸ್ತಾರವಾದುದು. ರಾಜಧಾನಿ ಹಂಪಿಯಂತೆ ಇತರ ಸ್ಥಳಗಳು ಸಹಾ ಚಾರಿತ್ರಿಕ, ಧಾರ್ಮಿಕ ಕ್ಷೇತ್ರಗಳಾಗಿದ್ದು ಇವುಗಳ ಅಧ್ಯಯನವು ಸಹಾನಡೆದಿದೆ. ಆನೆಗೊಂದಿ, ಶ್ರೀಶೈಲ, ಚಂದ್ರಗಿರಿ, ತಿರುಪತಿ, ಕಾಳಹಸ್ತಿ, ಪೆನುಗೊಂಡ, ರಾಮೇಶ್ವರ, ತಂಜಾವೂರು, ಅಹೊಬಲಂ, ಲೇಪಾಕ್ಷಿ, ಶ್ರೀರಂಗಪಟ್ಟಣ ಮೊದಲಾದ ಯಾತ್ರಾ ಮತ್ತು ಐತಿಹಾಸಿಕ ಕ್ಷೇತ್ರಗಳಲ್ಲಿ ವಿಜಯನಗರದವರ ಸ್ಮಾರಕಗಳಿವೆ ಮತ್ತು ಅವುಗಳ ಬಗ್ಗೆ ಅಧ್ಯಯನ ಆಗಿರುವುದು ಸಂತಸದ ಸಂಗತಿ. ಇತ್ತೀಚೆಗೆ ಡಾ. ಬಿ.ಎ. ವಿವೇಕ ರೈ ಸಂಪಾದಿಸಿರುವ ಪ್ರವಾಸಿ ಕಂಡ ವಿಜಯನಗರ ಕೃತಿಯಲ್ಲಿ ವಿದೇಶಿ ಪ್ರವಾಸಿಗ ಅಬ್ದುಲ್ ರಜಾಕ್ ಕಂಡ ವಿಜಯನಗರದ ವರ್ಣನೆ ಇದೆ. ಎರಡನೇ ದೇವಾರಾಯನ ಕಾಲವು ಸಮೃದ್ಧವಾಗಿತ್ತು. ಬೀದಿಗಳು, ವೇಶ್ಯೆಯರು, ಮಹಾನವಮಿ ಹಬ್ಬ ರಾಜ-ಜನರ ನಡುವೆ ಸೌಹರ್ದ ಸಂಬಂಧವಿತ್ತೆಂದು ತಿಳಿಯುವುದು.[೧೦] ಈ ಸಾಮ್ರಾಜ್ಯದ ಏಳಿಗೆ ಸುವರ್ಣಯುಗ ಆಗಿತ್ತಲ್ಲದೆ, ಕೃಷ್ಣದೇವರಾಯನ ವಿದೇಶಿ ನೀತಿ ವಿಘಟನೆಗೆ ಕಾರಣಾಯಿತೆಂಬ ಹೊಸ ಅಂಶವನ್ನು ಡಾ. ಬಿ.ಸಿ. ಮಹಾಬಲೇಶ್ವರಪ್ಪ ತಿಳಿಸಿದ್ದಾರೆ. ಮುಂದುವರೆದು ಅವರು, ವಿಜಯನಗರವು ೧೩೩೬ರಿಂದ ೧೫೬೫ರವರೆಗೆ ನಾಲ್ಕು ಅರಸು ಮನೆತನಗಳು ವೈರತ್ವವನ್ನು, ಪದಚ್ಯುತಗೊಳಿಸಲು ನಿರತವಾಗಿದ್ದವು. ಕೃಷ್ಣದೇವರಾಯನ ಯುದ್ಧನೀತಿ, ಗಡಿ ವಿಸ್ತರಣೆ, ಒರಿಸ್ಸಾಯುದ್ಧ ಮೊದಲಾದ ಸಂಗತಿಗಳು ಇಲ್ಲಿ ಚರ್ಚಿತಗೊಂಡಿವೆ. ಈ ಕಾಲವು ಸಂಗೀತ, ನೃತ್ಯಕ್ಕೆ ಹೆಚ್ಚಿನ ಒತ್ತು ನೀಡಿದ್ದು ಸ್ಪಷ್ಟ ಡಾ. ಕೆ.ಜಿ. ವಸಂತ ಮಾಧವ ವಿಜಯನಗರೋತ್ತರ ಕಾಲದ ವ್ಯಾಪಾರದ ಕುರಿತು ಶ್ರೀಮತಿ ವಿನೋದ ಪಾಟೀಲರು ವಿಜನಯನಗರ ಕಾಲದ ತಿಂಡಿ, ತಿನಸು, ಅಡಿಗೆಗಳ ಬಗ್ಗೆ ಲೇಖನ ಪ್ರಕಟಿಸಿರುವರು.

ವಿಜಯನಗರ ಕಾಲ ಮತ್ತು ಅನಂತರದಲ್ಲಿ ಏಳಿಗೆಯಾದ ಪಾಳೆಯಗಾರರ ಸಂಖ್ಯೆ ಅನೇಕ ಅವುಗಳ ಪೈಕಿ ಹಂಪೆ ಮನೆತನವು ಒಂದು. ಇವರ ಬಗ್ಗೆ ಡಾ. ಕೆ. ರವೀಂದ್ರನಾಥರು ಸಾಕಷ್ಟು ವಿವರಗಳನ್ನು ನೀಡಿದ್ದಾರೆ. ಅದೇ ರೀತಿ ಕುಮಾರರಾಮ ಮತ್ತು ವಿಜಯನಗರ ಕುರಿತು ಡಾ. ಸಿ. ಮಹದೇವ ಅವರು ಚಿಂತನೆ ನಡೆಸಿದ್ದಾರೆ. ಜೊತೆಗೆ 'ತಿರುಮಲಾದೇವಿಯರ ಪಟ್ಟಣ-ನಾಗಲಾಪುರ-ಹೊಸಪೇಟೆ ಒಂದು: ಪರೀಶಿಲನ' (೧೯೯೫ ಇ.ದ. ೧೦) ಲೇಖನದಲ್ಲಿ ಇಂದಿನ ಹೊಸಪೇಟೆ ನಗರವನ್ನು ಶೋಧಿಸುವ ಮತ್ತು ಚಾರಿತ್ರಿಕ ಬೆಳವಣಿಗೆಯನ್ನು ಗುರುತಿಸುವ ಪ್ರಯತ್ನ ಮಾಡಿದ್ದಾರೆ. ಇವು ಹಂಪಿವಿಜಯನಗರ ಇತಿಹಾಸವನ್ನು ಕುರಿತಂತವು. ಹಂಪಿ ವಿಜಯನಗರ ಹೆರಿಟೇಜ್ ಟ್ರಸ್ಟ್‌ನವರು ಇದನ್ನು ಪ್ರಕಟಿಸಿದ್ದಾರೆ. ಇದರಲ್ಲಿ ಹಂಪೆ ಚರಿತ್ರೆ, ಧರ್ಮ, ಕಲೆ, ಸ್ಮಾರಕಗಳ ರಕ್ಷಣೆ ಇತರ ವಿವರಗಳಿವೆ. ಡಾ. ಎಸ್.ವೈ. ಸೋಮಶೇಖರ ಅವರು 'ವಿಜಯನಗರ ರಾಯಭಾರತ್ವ' ಕುರಿತು ಶೋಧನೆ ನಡೆಸಿದ್ದಾರೆ. ಮುಂದುವರೆದು, ಹಂಪೆಯ ಬಜಾರುಗಳು, ವಿಜಯನಗರ ಕಾಲದ ನೌಕಾಯುದ್ಧಗಳ ಬಗ್ಗೆ ವಿವರಿಸಿದ್ದಾರೆ. ಈ ಎಲ್ಲ ಅಧ್ಯಯನಗಳು ಸಮಗ್ರ ಚರಿತ್ರೆಯನ್ನು ಪುನಾರಚನೆ ಮಾಡುವಲ್ಲಿ ಸಹಾಯಕ ಆಕರಗಳಾಗುತ್ತವೆ.

ವಿಜಯನಗನರ ಸಾಮ್ರಾಜ್ಯದಲ್ಲಿದ್ದ ವಿವಿಧ ಜಾತಿ, ಧರ್ಮ ಮತ್ತು ಸಂಸ್ಕೃತಿಯನ್ನು ಪರಿಚಯಿಸಿದ್ದಾರೆ. ಕೃಷ್ಣದೇವರಾಯನ ಕಾಲದಲ್ಲಿ ಕ್ರೈಸ್ತ ಮಿಷನರಿಗಳು ಎಂಬ ಲೇಖನದಲ್ಲಿ ಗುರುಮೂರ್ತಿ ಪಂಡಕೂರ ಅವರು ಹಿಂದೂ, ಮುಸ್ಲಿಂ ಮತ್ತು ಕ್ರೈಸ್ತ ಧರ್ಮಗಳ ಪ್ರಭಾವವನ್ನು ಗುರುತಿಸಿದ್ದಾರೆ. ಹಾಗೆಯೇ ನಿರುಪಮಾ ಅವರು ೧೯೯೮ ವಿಜಯನಗರ ಇತಿಹಾಸಕ್ಕೆ ತೆಲುಗು ಸಾಹಿತ್ಯದ ಆಕರಗಳನ್ನು ಬೆಳಕಿಗೆ ತಂದಿದ್ದಾರೆ. ಅಲ್ಲಸನಿ ಪೆದ್ದನ್ನನ ಮನುಚರಿತ್ರೆಯಲ್ಲಿ ಬೇಟೆಯ ವರ್ಣನೆ ಅತ್ಯಂತ ಸಹಜವಾಗಿ, ರಾಯನು ಬೇಟೆಗೆ ಹೋಗುತ್ತಿದ್ದ ಪ್ರಸಂಗವಿದೆ. ಕೃಷ್ಣದೇವರಾಯನ ಆಮುಕ್ತ ಮೌಲ್ಯದಲ್ಲಿ ರಾಜನೀತಿಯ ಬಗ್ಗೆ ತಿಳಿಸಿದ್ದಾರೆ. ತೆನಾಲಿ ರಾಮಕೃಷ್ಣ ಪಾಂಡುರಂಗ ಮಹಾತ್ಮ್ಯ, ವೆಂಕಟನಾಥನ ಪಂಚತಂತ್ರ, ಧೂರ್ಜಟಿಯ ಕಾಳಹಸ್ತೀಶ್ವರ ಮಹಾತ್ಮ್ಯೆ, ಎಲ್ಲನ ರಾಧಾಮಾಧವ, ರಾಮರಾಜ ಭೂಷಣನ ಸಂಗೀತ ಕಲಾ ರಹಸ್ಯನಿಧಿ, ಸಾಮ್ರಾಜ್ಯ ಲಕ್ಷ್ಮಿ ಪೀಠಿಕಾಲದಲ್ಲಿ ವಿಜಯನಗರ ಕಾಲದ ಸಾಹಿತ್ಯ ಸಂಸ್ಕೃತಿ ಬಗ್ಗೆ ಬೆಳಕು ಚೆಲ್ಲಲಾಗಿದೆ. ವಿಜಯನಗರ ಕಾಲದ ಊಟೋಪಚಾರಗಳು, ಉಡುಗೆ ತೊಡುಗೆಗಳಲ್ಲದೆ ಕನ್ನಡತಿಯರ ಸೀರೆಗಳ ಬಗ್ಗೆ ಡಾ. ಜೋತ್ಸ್ನಾಕಾಮ್ ಅಧ್ಯಯನ ಮಾಡಿದ್ದಾರೆ.[೧೧]

ವಿಜಯನಗರ ಕಾಲದ ನಾಣ್ಯಗಳ ಬಗ್ಗೆ ಶೋಧನೆ, ಸಂಶೋಧನೆಗಳಾಗಿರುವುದು ಸ್ಪಷ್ಟ. ಇಮ್ಮಡಿ ದೇವರಾಯನ ವರಹ ಮತ್ತು ಇಮ್ಮಡಿ ಸಿಂಘಣನ ಅಪರೂಪದ ಗದ್ಯಾಣ ಬಗ್ಗೆ ನಿತ್ಯಾನಂದ ಪೈ ಅವರು ಶೋಧನೆ ಮಾಡಿರುವರು. ವಿಜಯನಗರ ಸಾಮ್ರಾಜ್ಯ ಸ್ಥಾಪಕರು ವಿದ್ಯಾರಣ್ಯರಲ್ಲ ಕಾಶಿವಿಲಾಸ ಕ್ರಿಯಾಶಕ್ತಿ ದೇವರು ಎಂದು ಪ್ರಸಿದ್ಧ ಸಾಹಿತಿ ಶಾಂತರಸ ಅವರು ಅಭಿಪ್ರಾಯಪಡುತ್ತಾರೆ (೧೯೯೪ ಇ.ದ. ೧೪೧). ಹಾಗೆಯೇ ಅನಿಲವರ್ಗೀಸ್ ಮತ್ತು ಸುಗುಣಸುಗಂಧಿ ಅವರು ಹಂಪಿ. ಆನೆಗೊಂದಿ ಪರಿಸರದ ಚರಿತ್ರೆ ಪುರಾತತ್ವ ಮತ್ತು ಸಂಸ್ಕೃತಿ ಕುರಿತು ಶೋಧನೆ ಮಾಡಿದ್ದಾರೆ. ವಿಜಯನಗರ ಪ್ರಾಂತಿಯ ಧೋರಣೆ ಸ್ಥಳೀಯ ಪ್ರತಿಕ್ರಿಯೆ ಕುರಿತಂತೆ ಅನೇಕ ವಿದ್ವಾಂಸರು ಅಧ್ಯಯನ ನಡೆಸಿದ್ದಾರೆ.

ವಿಜಯನಗರ ನಿರ್ಣಾಯಕ ಯುದ್ಧದಲ್ಲಿ ರಾಮರಾಯನ ಸಾವು ಮತ್ತು ಯುದ್ಧ ನಡೆದ ಸ್ಥಳದ ಬಗ್ಗೆ ಡಾ. ಕೃಷ್ಣಕೊಲ್ಹಾರ ಕುಲಕರ್ಣಿಯವರು ವಿವರಗಳನ್ನು ಕೊಟ್ಟಿದ್ದಾರೆ ದಿ. ೨೬.೧.೧೫೬೫ರಲ್ಲಿ ರಾಮರಾಯ ಆಕಸ್ಮಿಕವಾಗಿ ನಿಜಾಮಶಹನ ಸೈನಿಕರ ಕೈಗೆಸಿಕ್ಕು ಸುರಕ್ಷಿತವಾಗಿ ನಿಜಾಮಶಹನ ಹತ್ತಿರ ಬಂದನು. ಅಲ್ಲಿ ಬಾದಶಹನ ಆದೇಶದಿಂದಾಗಿ ಅವನನ್ನು ವಧಿಸಲಾಯಿತು ಎಂಬುದು ಸದ್ಯ ದೊರೆಯುವ ದಾಖಲೆಗಳಿಂದ ಖಚಿತವಾಗಿ ಹೇಳಬಹುದು. ಯುದ್ಧ ಕೃಷ್ಣಾ ನದಿ ಆಸುಪಾಸಿನಲ್ಲಿ ನಡೆಯದೆ ಹಂಪಿ ಪರಿಸರಕ್ಕೆ ಹತ್ತಿರದಲ್ಲಿ ನಡೆದಿದ್ದರೆ ವಿಜಯನಗರಕ್ಕೆ ಜಯವಾಗುತ್ತಿತ್ತೆಂದು ಅನೇಕರು ಅಭಿಪ್ರಾಯಿಸಿದ್ದಾರೆ.

ಇತ್ತೀಚಿನ ಅಧ್ಯಯನಗಳು ವಿಜಯನಗರ ಕಾಲದ ಕಲೆ ಮತ್ತು ಶಿಲ್ಪ, ಸಾಮಾಜಿಕ ಆರ್ಥಿಕ ಸಾಂಸ್ಕೃತಿಕ ಸ್ಥಿತಿ-ಗತಿಗಳನ್ನು ಕುರಿತು ಆಸಕ್ತಿಯಿಂದ ನಡೆಯುತ್ತಲಿವೆ. ಈ ಕಾಲದ ಮರೆಯಾದ ಯಾವುದೋ ಸಂಗತಿ ಕುರಿತು ಶೋಧಿಸಿ ಕಳಚಿದಕೊಂಡಿಯಿಂದ ಸರಿಪಡಿಸುವ ಕೆಲಸದಲ್ಲಿ ಸಂಶೋಧಕರು ನಿರತರಾಗಿರುವುದು ಶ್ಲಾಘನೀಯ.

ವಿಜಯನಗರ ಅವಧಿಯ ಶಾಸನ, ಹಸ್ತಪ್ರತಿ ಹಾಗೂ ಸಾಹಿತ್ಯದ ಬಗೆಗೂ ಸಾಕಷ್ಟು ಕೃಷಿ ನಡೆದಿದೆ. ಚನ್ನಬಸಪ್ಪ ಎಸ್. ಪಾಟೀಲ್ ಅವರು, ಬಳ್ಳಾರಿ ಜಿಲ್ಲೆ ಮತ್ತು ಹಂಪೆ ಶಾಸನಗಳನ್ನು ಸಂಗ್ರಹಿಸಿ ರಾಜ್ಯ ಪುರಾತತ್ವ ಇಲಾಖೆಯಿಂದ ಪ್ರಕಟಿಸಿದ್ದಾರೆ. ಅದೇ ರೀತಿ ಕನ್ನಡ ವಿಶ್ವವಿದ್ಯಾಲಯದ ಶಾಸನಶಾಸ್ತ್ರ ವಿಭಾಗವು ಬಳ್ಳಾರಿ ಹಾಗೂ ಹಂಪೆ ಶಾಸನಗಳನ್ನು ಪರಿಷ್ಕರಿಸಿ, ಹೊಸ ಶಾಸನಗಳನ್ನು ಸಂಗ್ರಹಿಸಿ ಪ್ರಕಟಿಸಿದ್ದಾರೆ. ಬೇರೆ ಬೇರೆ ಜಿಲ್ಲೆಗಳ ಶಾಸನ ಸಂಪುಟಗಳು ಪ್ರಕಟವಾಗಿದ್ದು, ಹಂಪೆ ವಿಜಯನಗರವನ್ನು ಕುರಿತು ವಿವರಗಳು ಅದರಲ್ಲಿವೆ. ಕನ್ನಡ ವಿಶ್ವವಿದ್ಯಾಲಯವು ಕರ್ನಾಟಕ ದೇವಾಲಯ ಕೋಶಗಳನ್ನು ಹೊರ ತಂದಿವೆ. ಬಳ್ಳಾರಿ, ಕೊಪ್ಪಳ, ಹಾವೇರಿ, ಇತರ ಜಿಲ್ಲೆಗಳಲ್ಲಿ ವಿಜಯನಗರ ಕಾಲದ ದೇವಾಲಯಗಳು ವ್ಯಾಪಕವಾಗಿರುವುದನ್ನು ದಾಖಲಿಸಿದ್ದಾರೆ.[೨] ಅದೇ ರೀತಿ ಚನ್ನಬಸಪ್ಪ ಎಸ್. ಪಾಟೀಲರು ಕರ್ನಾಟಕದ ಕೋಟೆಗಳು ಎಂಬ ಪುಸ್ತಕದಲ್ಲಿ ವಿಜಯನಗರದ ಕಾಲದ ಕೋಟೆಗಳ ವಿವರಗಳಿವೆ. ಡಾ. ಎಂ.ಎಂ. ಕಲಬುರ್ಗಿ ಅವರು ಕರ್ನಾಟಕದ ನಾಡುಗಳ ಬಗ್ಗೆ ಪ್ರಕಟಿಸಿರುವ ಕೃತಿಯಲ್ಲಿ ನಾಡುನುಡಿ, ಗಡಿಪ್ರದೇಶ ಇತರ ಭೌಗೋಳಿಕ ಮತ್ತು ಚಾರಿತ್ರಿಕ ವಿವರಗಳನ್ನು ಕೊಟ್ಟಿದ್ದಾರೆ. ವಿಜಯನಗರ ಕಾಲದ ನಾಣ್ಯ ಸಂಪತ್ತಿನ ಬಗ್ಗೆ ಡಾ. ಎ.ವಿ. ನರಸಿಂಹಮೂರ್ತಿ ಕೃತಿ ರಚಿಸಿದ್ದಾರೆ. ಸಿ.ಟಿ.ಎಂ. ಕೊಟ್ರಯ್ಯ ಅವರು ವಿಜಯನಗರ ಕಾಲದ ನೀರಾವರಿ ವ್ಯವಸ್ಥೆಯನ್ನು ಕುರಿತು ಅಧ್ಯಯನ ನಡೆಸಿದ್ದಾರೆ. ಎನ್. ಸರಸ್ವತಿಯವರು ವಿಜಯನಗರ ಕಾಲದ ಮಹಿಳೆಯರ ಸ್ಥಿತಿಗತಿ ಬಗೆಗೆ, ಡಾ. ಕೆ. ಶ್ರೀಕಂಠಯ್ಯನವರು ವಿಜಯನಗರ ಕಾಲದ ಕನ್ನಡ ಸಾಹಿತ್ಯದಲ್ಲಿ ಜನಪದ ಜೀವನ, ಡಾ.ಎಸ್. ರಾಜಶೇಖರ ವಿಜಯನಗರ ಕಲೆ ಮತ್ತು ವಾಸ್ತುಶಿಲ್ಪ ಕುರಿತು, ಡಾ. ಎಂ.ಟಿ. ಕಾಂಬಳೆ ವಿಜಯನಗರ ಕಾಲದ ದೇವಾಲಯಗಳು, ಕುಂ. ವೀರಭದ್ರಪ್ಪನವರು ಶ್ರೀ ಕೃಷ್ಣದೇವರಾಯ ಮತ್ತು ಶ್ರೀ ಕೃಷ್ಣದೇವರಾಯನ ಕಾಲದ ಸಾಹಿತ್ಯ ಕುರಿತು ಸಂಶೋಧನೆ ನಡೆಸಿರುವುದು ಗಮನಾರ್ಹ. ಡಾ. ಪುರುಷೋತ್ತಮ ಬಿಳಿಮಲೆ, ಡಾ. ಚೆಲುವರಾಜು ಅವರುಗಳು ಹಂಪಿ ಜಾನಪದ ಡಾ.

ಚೆಲುವರಾಜುರವರ ಹಂಪಿ ಸ್ಮಾರಕಗಳಲ್ಲಿ ಜಾನಪದೀಯ ಅಂಶಗಳು ಎಂಬ ಕೃತಿಯನ್ನು ಪ್ರಕಟಿಸಿದ್ದಾರೆ. ವಿರೂಪಾಕ್ಷ ಪೂಜಾರಹಳ್ಳಿ ಅವರು ಚರಿತ್ರೆ ವಿಭಾಗದ ಸಾಂಸ್ಥಿಕ ಯೋಜನೆಯಾಗಿ ಕೈಗೊಂಡ ವಿಜಯನಗರ ಕಾಲದ ಸಂಸ್ಕೃತಿಯಲ್ಲಿ ಬೇಟೆ, ಪಶುಪಾಲನೆ ಮತ್ತು ಕೃಷಿಯನ್ನು ಕುರಿತು ವಿಶ್ಲೇಷಿಸಿದ್ದಾರೆ. ಹಂಪಿ ಸ್ಮಾರಕಗಳ ಅವಸಾನಕ್ಕೆ ಅನೇಕ ಕಾರಣಗಳಿವೆ. ಇಂಥ ಸಂಗತಿಯನ್ನು ಡಾ. ಎಸ್.ಎ. ಬಾರಿಯವರು ಹಂಪಿ ರಿ ವಿಸಿಟೆಡ್ ಲೇಖನದಲ್ಲಿ ವಾಸ್ತವಾಂಶಗಳನ್ನು ಚರ್ಚಿಸಿದ್ದಾರೆ.[೨೪] ಈ ಕಾಲಘಟ್ಟದ ಶಿಲ್ಪಶಾಸನ, ಚಿತ್ರಕಲೆ, ವೀರಗಲ್ಲುಗಳು ಮತ್ತು ಮಾಸ್ತಿಕಲ್ಲುಗಳ ಬಗ್ಗೆ ಅಧ್ಯಯನ ನಡೆದಿವೆ.

ವಿಜಯನಗರ ಮತ್ತು ಹಂಪಿಯನ್ನು ಕುರಿತು ಶೋಧನೆ, ಸಂಶೋಧನೆ ಮತ್ತು ಅಧ್ಯಯನಗಳು ಇತ್ತೀಚೆಗೆ ಎಡಪಂಥೀಯ ಚಿಂತನಾನೆಲೆಯಲ್ಲಿ ನಡೆಯುತ್ತಿರುವುದು ಸ್ಪಷ್ಟ ಅದೇ ರೀತಿ ಸಂಪ್ರದಾಯವಾದಿ ಬರವಣಿಗೆಗಳು ಇವೆ. ಪುಸ್ತಕ, ಲೇಖನ, ಪ್ರಬಂಧಗಳ ಮೂಲಕ ಇದರ ಚರಿತ್ರೆ ಮತ್ತು ಸಂಸ್ಕೃತಿಯನ್ನು ಅನಾವರಣಗೊಳಿಸುವ ನಿಟ್ಟಿನಲ್ಲಿ ಮರೆಯಾದ ಕ್ಷೇತ್ರಗಳಿಗೆ ನ್ಯಾಯ ಒದಗಿಸಿದಂತಾಗಿದೆ. ಈ ನಿಟ್ಟಿನಲ್ಲಿ ಡಾ. ಸಿ. ಮಹದೇವ ಅವರ ವಿಜಯನಗರದ ಗಾರೆಶಿಲ್ಪ ಕೃತಿಯು ಉಪಯುಕ್ತ ಮಾಹಿತಿಗಳನ್ನು ನೀಡುತ್ತಿದೆ. ವಿಜಯನಗರವು ಮಹಾನಗರವಾಗಿತ್ತು. ಇಲ್ಲಿನ ನೀರಾವರಿ ವ್ಯವಸ್ಥೆ, ರಕ್ಷಣೆ ಇತರ ಸಂಗತಿಗಳು ಇಲ್ಲಿ ಮುಖ್ಯ. ಡಾ. ಸಿ.ಎಸ್. ವಾಸುದೇವನ್ ಅವರ ಹೊಸಪೇಟೆ ಪರಿಸರದ ಕೆರೆಗಳ ಅಧ್ಯಯನವು ವಿಜಯನಗರ ಕಾಲದ ಕೆರೆಗಳನ್ನು ಕುರಿತು ಪರಿಚಯಿಸುತ್ತದೆ. ಡಾ. ಚಿನ್ನಸ್ವಾಮಿ ಸೋಸಲೆ ಅವರು ಸಾಮ್ರಾಜ್ಯ ಮತ್ತು ಸಂಸ್ಥಾನ ಎಂಬ ಕೃತಿಯಲ್ಲಿ ವಿಜಯನಗರ ಸಾಮ್ರಾಜ್ಯದ ಚರಿತ್ರೆ ಮತ್ತು ಸಂಸ್ಕೃತಿ ಕುರಿತು ಸಂಗತಿಗಳನ್ನು ಚರ್ಚಿಸಿದ್ದಾರೆ. ಡಾ. ಕೆ.ಎಂ. ಸುರೇಶ ಅವರು ಹಂಪಿಯ ಶೈವ ಶಿಲ್ಪಗಳನ್ನು ಕುರಿತು ಇಂಗ್ಲಿಷಿನಲ್ಲಿ ಕೃತಿ ರಚಿಸಿದ್ದಾರೆ. ಹಾಗೆಯೇ ಕೋಟೆ, ದೇವಾಲಯ ಸ್ಮಾರಕ, ವೀರಗಲ್ಲು, ಮಾಸ್ತಿ ಕಲ್ಲುಗಳು ಚರಿತ್ರೆಯನ್ನು ಪುನಾರಚಿಸಲು ಆಕರಗಳಾಗಿವೆ.

ಹಂಪೆಯ ಸುತ್ತಮುತ್ತ ಸರ್ವೇಕ್ಷಣೆ ಮತ್ತು ಉತ್ಖನನ ಕಾರ್ಯ ನಡೆಯುತ್ತಿದ್ದು ಹೊಸ ಹೊಸ ಅವಶೇಷಗಳು ಪತ್ತೆಯಾಗಿವೆ. ಟಂಕಶಾಲೆ, ಅರಮನೆ ಇತರ ಸ್ಮಾರಕಗಳನ್ನು ಇಲ್ಲಿ ದಾಖಲಿಸಲಾಗಿದೆ. ವೀರ ಹರಿಹರ, ಕೃಷ್ಣದೇವರಾಯನ ಶಾಸನಗಳು, ಯುದ್ಧ, ಗ್ರಾಮೀಣ ಜನಜೀವನ, ವೃತ್ತಿಗಳು, ಗ್ರಾಮಗಳು, ಬೇಟೆ, ಪಶು-ಪಾಲನೆ, ಕೃಷಿ, ಪುರ, ರಾಜಧಾನಿ, ಜಲ, ಗಡಿ, ಜನಸಮುದಾಯ, ನಾಣ್ಯ, ಶಂಖ, ಧರ್ಮ ಇತರ ಸಂಗತಿಗಳನ್ನು ಕುರಿತಂತೆ ಅಧ್ಯಯನಗಳು ನಡೆದಿವೆ. ಇತ್ತೀಚಿನ ಸಂಶೋಧನೆ, ಉತ್ಖನನಗಳಿಂದ ಹಂಪಿಯ ಬಳಿ ಅರಸರು, ಗಣ್ಯರು ಬಳಸುತ್ತಿದ್ದ ಶೌಚಾಲಯ ವ್ಯವಸ್ತೆ ಬೆಳಕಿಗೆ ಬಂದಿವೆ. ಇತ್ತೀಚೆಗೆ ಸುಮಾರು ೪೦ಕ್ಕೂ ಹೆಚ್ಚು ಬಂಗಾರದ ನಾಣ್ಯಗಳು ಮತ್ತು ಕುದುರೆಯ ಅಸ್ಥಿ ಪಂಜರವು ಸಿಕ್ಕಿರುವುದು ಹೆಮ್ಮೆಯ ಸಂಗತಿ. ವಿಜಯನಗರ ಹಂಪೆ ಕುರಿತ ಆರಂಭದ ಬರವಣಿಗೆಗಳು ರಾಜಕೀಯ ಚರಿತ್ರೆಗೆ ಒತ್ತುನೀಡಿದ್ದವು. ಇತ್ತೀಚಿನ ಬರಹಗಳು ಸಾಂಸ್ಕೃತಿಕ ಚರಿತ್ರೆಗೆ ಹೆಚ್ಚು ಒತ್ತು ನೀಡಿರುವುದು ನಿಜ. ಹೀಗೆ ಮರೆತಿರುವ ಅನೇಕ ಸಂಗತಿಗಳನ್ನು ಬೆಳಕಿಗೆ ತರುವ ಪ್ರಯತ್ನವನ್ನು ಕೆಲವರು ಮಾಡಿದ್ದಾರೆ. ಹಳೆಯ

[illegible]

[illegible]

[illegible]

[illegible]

ಸಿದ್ಧಾಂತ, ಬರವಣಿಗೆಗಳಿಗೆ ಜೋತು ಬಿದ್ದು ಅದೇ ಮಾದರಿಯ ಚರಿತ್ರೆ ರಚಿಸಿರುವುದನ್ನು ಬದಲಿಸಿ ಹೊಸ ವಿಧಾನ, ಸಿದ್ಧಾಂತಗಳನ್ನು ಅಳವಡಿಸಿಕೊಳ್ಳುತ್ತಿರುವುದು ಸೂಕ್ತವಾಗಿದೆ. ಆ ನಿಟ್ಟಿನಲ್ಲಿ ಬಂದಿರುವ ಲೇಖನ, ಪ್ರಬಂಧಗಳನ್ನು ವಿಜಯನಗರ ಸಾಮ್ರಾಜ್ಯದ ಇತಿಹಾಸ ಪುನಾರಚನೆಯಲ್ಲಿ ಅಳವಡಿಸಿಕೊಂಡರೆ ಸಮಗ್ರ ಸಂಶೋಧನೆ ಮತ್ತು ಅಧ್ಯಯನಕ್ಕೆ ಅವಕಾಶ ಕಲ್ಪಿಸಿದಂತಾಗುವುದು.

ಹಂಪೆ ವಿಜಯನಗರ ಕುರಿತು ಇತ್ತೀಚಿನ ಸಂಶೋಧನೆಗಳು ಸಾಂಸ್ಕೃತಿಕ ಚರಿತ್ರೆಯನ್ನು ಒಳಗೊಂಡಿವೆ. ಅಂತರ್ ಶಿಸ್ತುಗಳ ಮೂಲಕವೂ, ವಿಜಯನಗರದ ಚರಿತ್ರೆಯನ್ನು ಕಟ್ಟಿಕೊಡುವಲ್ಲಿ ಅನೇಕ ವಿದ್ವಾಂಸರು ಶ್ರಮಿಸಿರುವುದು ಗಮನಾರ್ಹ. ಆರಂಭದ ಅದ್ಯಯನಗಳು ಪೂರ್ವಗ್ರಹ ಪೀಡಿತವಾಗಿದ್ದವು. ಆದರೆ ಇತ್ತೀಚಿನ ಅಧ್ಯಯನಗಳು ಯಾವುದೇ ಸಂಕೋಲೆಗಳಿಗೆ ಒಳಗಾಗದೆ ವಸ್ತುನಿಷ್ಠ ಪರಿದಿಯಲ್ಲಿವೆ ಎಂದು ಹೇಳಬಹುದು.

ಹಂಪೆಯನ್ನು ಒಂದು ಗ್ರಾಮವಾಗಿ ನೋಡುವುದರ ಮೂಲಕ ಇಲ್ಲಿನ ಐತಿಹಾಸಿಕ ಕುರುಹುಗಳನ್ನು ಪಟ್ಟಿಮಾಡಹುದಾಗಿದೆ. ವಾಸ್ತುಶಿಲ್ಪವನ್ನು ಜನಜೀವನದೊಡನೆ ಹೋಲಿಸಿ ನೋಡಬಹುದಾಗಿದೆ. ಅಂಥ ಕೆಲಸವನ್ನು ದೇಶಿ ಮತ್ತು ವಿದೇಶಿ ವಿದ್ವಾಂಸರು ಅಧ್ಯಯನ ಮಾಡಿರುತ್ತಾರೆ. ಇಲ್ಲಿ ವ್ಯಕ್ತಿ ಕೇಂದ್ರಿತ ಅಧ್ಯಯನಗಳಿಗಿಂತ ಸಾಮೂಹಿಕ ಸಂಗತಿಗಳ ಬಗ್ಗೆ ಆದ್ಯತೆ ನೀಡಲಾಗಿದೆ. ಇಂದು ವಿಜಯನಗರ ಚರಿತ್ರೆ ಮತ್ತು ಸಂಸ್ಕೃತಿಯನ್ನು ಕೇವಲ ವಿವರಿಸುವುದಾಗಲಿ, ನಿರೂಪಿಸುವುದಾಗಲಿ ಅಲ್ಲ. ಚರಿತ್ರೆಯ ಚರಿತ್ರೆಯನ್ನು ಕಟ್ಟುವ ಕೆಲಸ ಆಗಬೇಕಾಗಿದೆ. ಅಂದರೆ ವಿಮರ್ಶಾತ್ಮಕ ಮತ್ತು ವೈಜ್ಞಾನಿಕವಾಗಿ ಸಂಶೋಧನೆಗಳು ಇಂದು ಬಹುತೇಕ ಚರಿತ್ರೆ ನಿರ್ಮಾಣದಲ್ಲಿ ಸಿದ್ಧಾಂತವಾದ ಹಾಗೂ ವೈಧಾನಿಕತೆಗೆ ಒತ್ತು ನೀಡಿದ್ದಾರೆ. ಸಾಹಿತ್ಯನೆಲೆಯ ರಾಜಮನೆತನಕ್ಕಿಂತಲೂ ವಿಜಯನಗರದ ಬಗ್ಗೆ ವ್ಯಾಪಕ ಅಧ್ಯಯನಗಳಾಗಿವೆ. ಒಟ್ಟಾರೆ ಈ ಅಧ್ಯಯನಗಳು ಸರ್ವಕ್ಷೇತ್ರಗಳಿಗೂ ಸಂಬಂಧಿಸಿದ್ದು, ಇಂದು ಹೊಸ ದಿಗಂತವನ್ನು ಪರಿಚಯಿಸುತ್ತಿರುವುದು ಸ್ಮರಣೀಯ.

[illegible]

[illegible]

ಅಡಿಟಿಪ್ಪಣಿಗಳು

೧. ವಿಜಯನಗರ ಸಂಸ್ಕೃತಿ, (ಬೇಟೆ ಮತ್ತು ಪಶುಪಾಲನೆ), ಡಾ.ವಿರೂಪಾಕ್ಷಿ ಪೂಜಾರಹಳ್ಳಿ, ಪು.೬.

೨. ಅದೆ ಪು.೮

೩. ಅದೇ ಪು.೧೦

೪. ಅದೇ ಪು.೧೫

೫. ಅದೇ ಪು.೨೦

೬. ಅದೇ ಪು.೩

೭. ಅದೇ ಪು.೭

೮. ಕರ್ನಾಟಕ ಚರಿತ್ರೆ, ಸಂಪುಟ ೬, ಸೆಬಾಸ್ಟಿಯನ್ ಜೋಸೇಫ್ (ಸಂ), ಪು.೧೦೩

೯. ಅದೇ ಪು.೧೦೬

೧೦. ಅದೇ ಪು.೧೦೭

೧೧. ಅದೇ ಪು.೧೦೮

೧೨. ಸಾಮ್ರಾಜ್ಯ ಮತ್ತು ಸಂಸ್ಥಾನ, ಡಾ.ಎನ್.ಚಿನ್ನಸ್ವಾಮಿ ಸೋಸಲೆ, ಪು.೨೦

೧೩. ಅದೇ ಪುಟ.೨೩.

೧೪. ಅದೇ ಪುಟ.೨೫

೧೫. ಅದೇ ಪುಟ. ೨೮.

೧೬. ಅದೇ ಪುಟ. ೩೧

೧೭. ಅದೇ ಪು.೩೮

ಅಧ್ಯಾಯ ೪

ಉಪ ಸಂಹಾರ

ಉಪ ಸಂಹಾರ

ಪ್ರಾಚೀನ ಕಾಲದಿಂದಲೂ ಚರಿತ್ರೆಯ ಭಿನ್ನ ಘಟನೆಗಳು ಹಾಗೂ ಅದರ ಕೆಲ ಮಾದರಿಗಳು ಕರ್ನಾಟಕದಲ್ಲಿ ದೊರೆಯುವ ಕೆಲವು ಕೃತಿಗಳ ಅವಲೋಕನದಿಂದ ವ್ಯಕ್ತವಾಗುತ್ತದೆ. ಆದರೆ ಇದುವರೆಗೂ ಪ್ರಕಟಗೊಂಡಿರುವ ಕೃತಿಗಳಲ್ಲಿ ರಾಜನ ಚರಿತ್ರೆ ಅಥವಾ ಬೃಹತ್ ರಾಜವಂಶಗಳ ಚರಿತ್ರೆಯನ್ನು ವ್ಯಕ್ತಪಡಿಸುವಂತಹುದೇ ಹೆಚ್ಚಾಗಿವೆ ಹೊರತು, ಆ ಚರಿತ್ರೆಗಳಲ್ಲಿ ಕನ್ನಡ ನಾಡಿಗಿರುವ ಸ್ಥಾನ ಮಹತ್ವಗಳ ಬಗ್ಗೆ ವಿವರಗಳಿಲ್ಲ ಎನ್ನುವುದು ಅಪವಾದ ಎಂಬಂತೆ ಕಂಡರೂ, ಅದು ಆ ಕಾಲಘಟ್ಟದ ಮಿತಿಯಾಗಿದೆ. ಹೀಗೆ ಬಹುತೇಕವಾಗಿ ಕಂಡು ಬಂದಿರುವ ಈ ಬಗೆಯ ಕೃತಿಗಳು ಅಲ್ಲಲ್ಲಿ ಬಿಡಿ ವಿವರಗಳನ್ನು ತಿಳಿಸುವಷ್ಟು ಮಟ್ಟಿಗೆ ಸಫಲವಾಗಿವೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಯನವು ಇದುವರೆಗೂ ಕನ್ನಡ ಪ್ರದೇಶದ ಮೇಲೆ ಇದುವರೆಗೆ ಪ್ರಕಟಣೆಗೊಂಡಿರುವ ಕೃತಿಗಳ ಹಿನ್ನೆಲೆಯಲ್ಲಿ ಸೈದ್ಧಾಂತಿಕವಾಗಿ ವಸಾಹತುಶಾಹಿಪೂರ್ವ ಚರಿತ್ರೆ ಕೃತಿಗಳ, ವಸಾಹತುಕಾಲದ ಚರಿತ್ರೆ ಕೃತಿಗಳ, ವಸಾಹತೆತ್ತರ ಕಾಲದ ಚರಿತ್ರೆ ಕೃತಿಗಳ ಹಾಗೂ ಅನಂತರ ಕಾಲದ ಚರಿತ್ರೆ ಕೃತಿಗಳು ಎಂಬುದಾಗಿ ಅಭ್ಯಾಸ ಮಾಡಿರುವ ಬಗ್ಗೆ ಹಿಂದಿನ ಅಧ್ಯಾಯಗಳಲ್ಲಿ ವಿವರಿಸಲಾಗಿದೆ.

ಕರ್ನಾಟಕ ಪ್ರದೇಶದ ಪ್ರಾಚೀನ ಮತ್ತು ಮಧ್ಯಕಾಲೀನ ಚರಿತ್ರೆಯನ್ನು ವ್ಯಕ್ತಪಡಿಸುವ ಕೃತಿಗಳು ವಸಾಹತುಶಾಹಿ ಕಾಲದಲ್ಲಿ ನಿರ್ದಿಷ್ಟವಾಗಿ ಪ್ರಕಟಣೆಯಾಗಿವೆ. ಈ ಪ್ರಯತ್ನದಲ್ಲಿ ಬಿ.ಎಲ್.ರೈಸ್, ಆರ್.ಎ.ಕೋರ್ ಮುಂತಾದವರು ಪ್ರಮುಖರಾಗಿದ್ದಾರೆ. ಇವರ ಪ್ರಮುಖ ಉದ್ದೇಶ ಕನ್ನಡ ಪ್ರದೇಶದ ಚರಿತ್ರೆ ತಿಳಿಸಿರುವುದ ಆದರು, ಅದರ ಮೂಲಕ ಸ್ಥಳೀಯ ಜನತೆಯ ಬೆಂಬಲ ಪಡೆಯಲು ಪ್ರಯತ್ನಿಸಿದ್ದಾರೆ. ಇದು ಒಂದು ರೀತಿಯಲ್ಲಿ ಬ್ರಿಟಿಷ್ ವಸಾಹತು ಆಡಳಿತಕ್ಕೆ ಅನುಕೂಲವಾಗಿದ್ದರು,ಪರೋಕ್ಷವಾಗಿ ಸ್ಥಳೀಯ ಚರಿತ್ರೆ ರಚನೆಯು ಭಾಗಶಃವಾಗಿ ತಿಳಿಸಲು ಸಾಧ್ಯವಾಗಿದ. ನಂತರ ಕೆ.ಅಭಿಸಂಕರ ಅವರು ಕರ್ನಾಟಕ ರಾಜ್ಯ ಗೆಜಿಟಿಯರ್, ಎಂ.ಶೇಷಾದ್ರಿಯವರ ಶಾಸನ ಸಂಪುಟಗಳು ಈ ಪ್ರದೇಶದ ಚರಿತ್ರೆಯನ್ನು ಸಮಗ್ರವಾಗಿ ವಿವರಿಸಲು ಪ್ರಯತ್ನಿಸಲಾಗಿದೆ. ಆದರೆ ಕೆ.ಅಭಿಸಂಕರ ಅವರ ಚರಿತ್ರೆ ಬರವಣಿಗೆ ದಾಖಲಾತಿಯಷ್ಟಕ್ಕೆ ಮಾತ್ರ ಮೀಸಲಾಗಿದೆ. ಎಂ.ಶೇಷಾದ್ರಿಯವರು ಬಿ.ಎಲ್.ರೈಸ್‌ರಂತೆ ಆಯಾ ಕಾಲದ ವಂಶಗಳು, ಶಾಸನಗಳನ್ನು ದಾಖಲಿಸುವಷ್ಟಕ್ಕೆ ಮಾತ್ರ ಸೀಮಿತಗೊಂಡಿದೆ. ನಂತರ ಬಂದ ಅನೇಕ ಕೃತಿಗಳು ಮೆಲ್ಕಂಡವರ

ಗೆಜೆಟಿಯರ್‌ಗಳು, ಶಾಸನ ಸಂಪುಟಗಳನ್ನು ಅವಲಂಬಿಸಿಯೇ ಪ್ರಕಟಣೆ ಮಾಡಿರುವುದು ಕಂಡುಬರುತ್ತದೆ. ಇವುಗಳಲ್ಲಿ ಕೆಲವು ಕರ್ನಾಟಕ ಪ್ರದೇಶ ಚರಿತ್ರೆಯಲ್ಲಿನ ವಿವಿಧ ಮುಖಗಳನ್ನು ತಿಳಿಸಲು ಪ್ರಯತ್ನಿಸಲಾಗಿದೆ. ಅಂದರೆ ಶಾಸನಗಳಲ್ಲಿ ಸಂಸ್ಕೃತಿ, ರಾಜಕೀಯ, ಶೈಕ್ಷಣಿಕವಾಗಿ ಚರಿತ್ರೆಯ ದಾಖಲಾತಿಗಳನ್ನು ಗುರುತಿಸುವುದು, ಸಾಹಿತ್ಯ ಕ್ಷೇತ್ರದಲ್ಲಿ ಬೆಳವಣಿಗೆ, ರಾಜಕೀಯ ಬೆಳವಣಿಗೆ, ಸಾಧನಕಾರರ ಸಾಧನೆಗಳು ಗುರುತಿಸಿರುವುದು ಮುಂತಾಗಿ ಕಂಡುಬರುತ್ತದೆ. ಈ ಪ್ರಯತ್ನದಲ್ಲಿ ಇತ್ತೀಚೆಗೆ ಕರ್ನಾಟಕ ಇತಿಹಾಸ ಅಕಾಡೆಮಿ, ಕರ್ನಾಟಕ ಇತಿಹಾಸ ಕಾಂಗ್ರೆಸ್, ಕನ್ನಡ ಸಾಹಿತ್ಯ ಪರಿಷತ್, ಕರ್ನಾಟಕ ರಾಜ್ಯ ಪ್ರಾಚ್ಯವಸ್ತು ಸಂಗ್ರಹಾಲಯ, ಇಲಾಖೆ ಮುಂತಾದ ವಿಭಾಗಗಳು ಇತ್ತೀಚಿನ ಸ್ಥಳೀಯ, ಪ್ರಾಚೀನ ಹಾಗೂ ವಸಾಹತುಪೂರ್ವ ಚರಿತ್ರೆಯನ್ನು ಕಟ್ಟಲು ಯತ್ನಿಸುತ್ತಿದ್ದೇವೆ.

ಪ್ರಾಚೀನ ಕಾಲದಿಂದ ಮಧ್ಯಕಾಲದವರೆಗೆ ಕನ್ನಡ ನಾಡಿನ ಪ್ರದೇಶದ ಚರಿತ್ರೆಯನ್ನು ವಿವಿಧ ಕೃತಿಗಳ ಮೂಲಕ ಅವಲೋಕಿಸುವ ಪ್ರಯತ್ನ ಮಾಡಲಾಗಿದೆ. ಅದರ ಆರಂಭದಲ್ಲಿ ಬಾಣ ಅರಸರ ಆಡಳಿತದಿಂದ ಪ್ರಾರಂಭವಾಗಿ ನೆರೆರಾಜ್ಯದ ಆಡಳಿತ ಮತ್ತು ಸಂಬಂಧ ಹೊಂದಿದೆ. ಇವರ ಕಾಲದಲ್ಲಿಯೇ ಬೆಳಕಿಗೆ ಬಂದ ಪ್ರಬಲ ರಾಜವಂಶದ ಗಂಗರು ಕರ್ನಾಟಕದ ತಲಕಾಡು ಮತ್ತು ಕೋಲಾರ ಪ್ರದೇಶವನ್ನು ತಮ್ಮ ಪ್ರಥಮ ರಾಜಧಾನಿಯಾಗಿ ಮಾಕೊಂಡಿದ್ದರು. ಇದರಿಂದ ಈ ಪ್ರದೇಶದ ರಾಜಕೀಯ ಚರಿತ್ರೆಗೆ ಹೊಸ ಆಯಾಮವನ್ನು ಒದಗಿಸಿದೆ. ಅವರ ಆಡಳಿತ ಸಂಸ್ಕೃತಿ ಹಾಗೂ ಸಾಮಾಜಿಕ ಪದ್ಧತಿಗಳು ಚರಿತ್ರೆಯಲ್ಲಿ ಸ್ಥಿರಗೊಂಡಿವೆ. ನಂತರ ೧೧ನೇ ಶತಮಾನ ಅಂದರೆ ಮಧ್ಯಕಾಲೀನ ಆರಂಭದ ಹೊತ್ತಿಗೆ ರಾಷ್ಟ್ರಕೂಟರು, ಚಾಲುಕ್ಯರು, ವೈಡುಂಬರು, ನೊಳಂಬರು ಕ್ರಮವಾಗಿ ಕಾಲಾನುಗತದಲ್ಲಿ ಆಡಳಿತ ಮಾಡಿದ್ದು, ಕನ್ನಡ ಪ್ರದೇಶದ ಚರಿತ್ರೆಯ ನಿರ್ಮಾಣದಲ್ಲಿ ಮಹತ್ವಕಂಡುಬಂದಿದೆ. ಪ್ರಾಚೀನ ಮತ್ತು ಮಧ್ಯಕಾಲೀನ ಕರ್ನಾಟಕದಲ್ಲಿ ರಾಜಕೀಯ ಚರಿತ್ರೆ ಗಣನೀಯ ಪಾತ್ರವಹಿಸಿತ್ತು ಎಂಬುದಕ್ಕೆ ಹಲವು ರಾಜವಂಶಗಳ ಆಡಳಿತಕ್ಕೆ ಒಳಪಟ್ಟಿದ್ದೆ ಕಾರಣೀಭೂತವಾಗಿದೆ. ಸಿಂಧು ಬಯಲಿನ ನಾಗರಿಕತೆ ಕಾಲದಿಂದ ಕನ್ನಡ ನಾಡು ತನ್ನ ಚರಿತ್ರೆಯನ್ನು ಗುರುತಿಸಿಕೊಂಡಿದೆ.

ಹೊಯ್ಸಳರ ಪ್ರಸಿದ್ಧ ರಾಜವಿಷ್ಣುವರ್ಧನ ರಾಜ್ಯವನ್ನು ಕನ್ನಡ ಪ್ರದೇಶದ ಪೂರ್ವವರೆಗೆ ವಿಸ್ತರಿಸಿ, ಪ್ರಖ್ಯಾತ ಚೋಳರನ್ನು ದಕ್ಷಿಣದ ಪ್ರದೇಶದಿಂದ ಓಡಿಸಿ ಕನ್ನಡದ ಸಂಸ್ಕೃತಿ, ಸಂಪ್ರದಾಯಗಳನ್ನು ಅವಲಂಬಿಸಿದರು. ನಂತರ ಅವರ ಅನೇಕ ನಾಡಪ್ರಭುಗಳು ಆಳ್ವಿಕೆ ನಡೆಸಿದರು. ಅನಂತರ ಅದರಂತೆ ಇನ್ನಷ್ಟು ಪ್ರಸಿದ್ಧತೆ ಪಡೆದಿರುವ ವಿಜಯನಗರ ಆಡಳಿತದ ಕಾಲದಲ್ಲಿ ದಕ್ಷಿಣದ ಮುಳಬಾಗಿಲು ವಿಜಯನಗರ ಉಪರಾಜಧಾನಿ ಎಂದೇ ಖ್ಯಾತಿಗಳಿಸಿದೆ. ಇದರಿಂದ ಕರ್ನಾಟಕದ ಮಧ್ಯಕಾಲೀನ ಚರಿತ್ರೆಯಲ್ಲಿ ಹೊಸ ಆಯಮವನ್ನುಂಟು ಮಾಡಿದೆ ಎಂಬುದು ಎಂ.ವಿ.ಶ್ರೀನಿವಾಸ ಹಾಗೂ ಮುಂತಾದವರ ಬರವಣಿಗೆಗಳಿಂದ ವ್ಯಕ್ತವಾಗುತ್ತದೆ. ಇದಾದನಂತರ ಸ್ಥಳೀಯ ಪಾಳೆಗಾರರ ಪ್ರಬಲಗೊಂಡು ವಸಾಹತುಶಾಹಿ ಆಡಳಿತ ಪ್ರಾರಂಭದವರೆಗೂ ಅದರದೇ ಆದ ಚರಿತ್ರೆ ನಿರ್ಮಿತವಾಗಿದೆ. ಅವರ ಸಾಹಸ, ಹೋರಾಟಗಳ ಪ್ರಬಲ

ಹಾಗೂ ರಾಜವಂಶಗಳಿಗೆ ನೀಡಿದ ನಿಷ್ಠತೆಯಿಂದ ಸ್ವಾತಂತ್ರ್ಯತೆ ಉಳಿಸಿಕೊಳ್ಳಲು ಯತ್ನಿಸಿರುವುದು ಪಿ.ವಿ.ಕೃಷ್ಣಮೂರ್ತಿ, ಷೇಕ್‌ಮಸ್ತಾನ್ ಮುಂತಾದವರ ಲೇಖನಗಳಲ್ಲಿ ವ್ಯಕ್ತವಾಗುತ್ತದೆ. ಚಿಕ್ಕಬಳ್ಳಾಪುರದ ಪಾಳೆಯಗಾರರು, ಗುಮ್ಮನಾಯಕನ ಪಾಳೆಗಾರರು ಸುಗಟೂರು ಪಾಳೆಗಾರರು, ಮಾಸ್ತಿ ಪಾಳೆಗಾರ ಪಾಳೆಗಾರಿಕೆ ವಿಜಯನಗರೋತ್ತರ ಕಾಲದಲ್ಲಿ ಕನ್ನಡ ನಾಡಿನ ಚರಿತ್ರೆಯಲ್ಲಿ ಶ್ರೇಷ್ಠತೆಯನ್ನು ಹೊಂದಿರುವುದು ವ್ಯಕ್ತವಾಗುತ್ತದೆ. ಈ ಪಾಳೆಯಗಾರಿಕೆಯವರು ತಮ್ಮ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಲು ಹೇಗೆ ಮೊಗಲರು, ಮರಾಠರೊಂದಿಗೆ ಹೋರಾಟದ ಮುಖ ಹೊಂದಿದ್ದರು, ಅದೇ ರೀ ಆಂಗ್ಲ ಕುತಂತ್ರದ ನೀತಿಗಳಿಗೆ ಬಲಿಯಾಗಿ ಪುನಃ ಸ್ವಾಭಿಮಾನ ಸ್ವಾತಂತ್ರ್ಯವನ್ನು ಗಳಿಸಲು ಸೆಣಸಾಡುವ ಪರಿಸ್ಥಿತಿಯನ್ನು ತಂದುಕೊಂಡರು ಎಂಬುದು ಗಮನಾರ್ಹವಾಗಿದೆ. ಎಸ್.ಚಂದ್ರಶೇಖರ್, ಎನ್.ಪಿ.ಶಂಕರನಾರಾಯಣರಾವ್, ಸೂರ್ಯನಾಥ ಕಾಮತ ಮುಂತಾದವರು ಇದನ್ನು ಗಮನಿಸಿದ್ದಾರೆ. ಆದರೆ, ವಿಮರ್ಶಾತ್ಮಕವಾದ ಗುಣಗಳನ್ನು ಆ ಬರವಣಿಗೆಗಳು ಹೊಂದಿಲ್ಲದಿರುವುದನ್ನು ನಾವು ಗಮನಿಸಲಾಗಿದೆ. ಗೆಜೆಟಿಯಿರ್‌ಗಳು ಮುಂತಾದ ಸರ್ಕಾರಿ ದಾಖಲೆಗಳಲ್ಲಿ ಈ ಕುರಿತಾಗಿ ಅಷ್ಟೊಂದು ಸೂಕ್ಷ್ಮವಾಗಿ ಹೇಳಿರುವುದು ಕಂಡುಬಂದಿಲ್ಲ. ಪ್ರಾಯಶಃ ಕರ್ನಾಟಕ ಪ್ರದೇಶದ ಪ್ರಾಚೀನ ಹಾಗೂ ಮಧ್ಯಕಾಲೀನ ಚರಿತ್ರೆಯನ್ನು ನಿರ್ಲಕ್ಷಿತವಾಗಿರುವುದು ಇದರಿಂದಲೇ ವ್ಯಕ್ತವಾಗುತ್ತದೆ. ಆದರೂ, ಕೆ.ಅಭಿಸಂಕರ, ಎಂ.ಶೇಷಾದ್ರಿ, ಆರ್.ಎಸ್.ಶರ್ಮ, ಪಿ.ವಿ.ಕೃಷ್ಣಮೂರ್ತಿ ಮುಂತಾದವರ ಕೃತಿಗಳು ಮತ್ತು ಲೇಖನಗಳು ಸೂಕ್ಷ್ಮವಾಗಿ ಚರಿತ್ರೆಯ ಹಿನ್ನೆಲೆಯನ್ನು ತಿಳಿಸಲು ಯತ್ನಿಸಿರುವುದನ್ನು ಅಲ್ಲಗಳೆಯುವಂತಿಲ್ಲ. ಅಲ್ಲದೆ, ಸ್ಥಳೀಯ ಚರಿತ್ರೆಗಾರರ ಕೊರತೆಯಿಂದಾಗಿ ಮತ್ತು ಬಹುತೇಕ ಈ ಪ್ರದೇಶದ ಚರಿತ್ರೆ ಬೃಹತ್ ರಾಜ್ಯಗಳು ಮತ್ತು ರಾಜವಂಶಗಳೊಂದಿಗೆ ಸಂಶೋಧನೆಗೊಂಡಿರುವುದರಿಂದ ಸ್ಥಳೀಯ ಚರಿತ್ರೆಯನ್ನು ಪ್ರತ್ಯೇಕವಾಗಿ ವಿವರಿಸಲು ಹಿಮ್ಮುಖ ಪ್ರಯತ್ನಗಳು ಮಾಡಿರುವುದು ವ್ಯಕ್ತವಾಗುತ್ತದೆ ಎಂಬುದು ಈ ಸಂದರ್ಭದಲ್ಲಿ ಗಮನಿಸುವಂತಹುದಾಗಿದೆ.

ಕರ್ನಾಟಕದಲ್ಲಿ ೨೦ನೇ ಶತಮಾನದ ಚರಿತ್ರೆ ಅಧ್ಯಯನವು ಹೆಚ್ಚಾಗಿ ವಸಾಹತುಶಾಹಿಗಳ ಆಡಳಿತ ಪ್ರಾರಂಭವಾಗಿರುವುದು ಅನುಲಕ್ಷಿಸಿ ಬಂದ ಕೃತಿಗಳು ಅಲ್ಪ. ಆದರೆ, ೧೮೦೦ರ ನಂತರ ಚರಿತ್ರೆಯನ್ನು ವ್ಯಕ್ತಪಡಿಸಲು ಗೆಜೆಟಿಯರುಗಳು, ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು, ಜಿಲ್ಲಾ ಸ್ವಾತಂತ್ರ್ಯ ಹೋರಾಟಗಾರರ ಕೃತಿಗಳನ್ನು ಗಣನೆಗೆ ಎಳೆಯಲಾಗಿದೆ. ಈ ಕುರಿತಾಗಿ ಎಂ.ಗೋವಿಂದಪ್ಪನವರ ಮೈಸೂರು ರಾಜ್ಯದಿಂದ ಹೊಸ ಸುಧಾರಣೆಗಳು ಮೇಲಿನ ಸಂಶೋಧನೆಯ ಕೃತಿ, ಜಾನಕಿನಾಯರರವರ ಮಿನರ್ ಅಂಡ್ ಮಿಲ್‌ಹ್ಯಾಂಡ್ಸ್ ಕೃತಿಗಳು, ತಿರುಮಲೆ ಶ್ರೀ ರಂಗಾಚಾರಿ ಅವರ ಸ್ವಾತಂತ್ರ್ಯ ಹೋರಾಟ ಎಂಬ ಲೇಖನಗಳು ಈ ಹಿನ್ನೆಲೆಯನ್ನು ತಿಳಿಸುತ್ತವೆ.

ವಸಾಹತೋತ್ತರ ಚರಿತ್ರೆಯಲ್ಲಿ ಇದನ್ನು ಕಾಣಲಾಗುತ್ತದೆ. ಈ ಚರಿತ್ರೆಯು ಸಹ ಗೆಜೆಟಿಯರ್‌ಗಳನ್ನೇ ಬಹುತೇಕವಾಗಿ ಅವಲಂಬಿಸಿವೆ. ಆರ್.ಆರ್.ದಿವಾಕರ, ಎಚ್.ಎಸ್.ಗೋಪಾಲರಾವ್ ಮುಂತಾದವರ ಕೃತಿಗಳು ಮತ್ತು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸಂಸ್ಥೆ ವತಿಯಿಂದ ಪ್ರಕಟಿಸಿರುವ ಗಡಿನಾಡು ಅಧ್ಯಯನದ

ಆಯೋಗ ವರದಿಗಳು, ಕರ್ನಾಟಕ ಏಕೀಕರಣೋತ್ತರ ಕಾಲಘಟ್ಟದಲ್ಲಿ ಕಂಡುಬರುವ ವಿವರಗಳನ್ನು ಅಲ್ಪ ಪ್ರಮಾಣದಲ್ಲಿ ತಿಳಿಸುತ್ತವೆ. ಬಾಂಬೆ ಕರ್ನಾಟಕ, ಹೈದ್ರಾಬಾದ್ ಕರ್ನಾಟಕ, ಮೈಸೂರು ಸಂಸ್ಥಾನಗಳಂತಹ ಪ್ರದೇಶದ ಕೆಲವು ಹಳ್ಳಿಗಳು ನೆರೆಯ ಆಂಧ್ರಪ್ರದೇಶ ಮತ್ತು ತಮಿಳುನಾಡು ರಾಜ್ಯಗಳಿಗೆ ಸೇರ್ಪಡೆಗೊಂಡಿವೆ. ಭಾರತದಲ್ಲಿ ಅತಿ ಹೆಚ್ಚು ಚಿನ್ನವನ್ನು ಪಡೆಯುವ ಪ್ರದೇಶ ಎಂಬ ಹೆಸರಿಗೆ ಪಾತ್ರವಾದ ಕೋಲಾರ ಜಿಲ್ಲೆ. ಇದರಿಂದ ಕರ್ನಾಟಕವನ್ನು ಹೈದಾರಾಬಾದಿನಿಂದ ಬೇರ್ಪಡಿಸಲು ಸಾಧ್ಯವಾಯಿತು. ಆದರೂ ನೆರೆಯ ಎರಡು ರಾಜ್ಯಗಳ ಸಂಸ್ಕೃತಿ ಭಾಷೆಯ ಪ್ರಭಾವದಿಂದ ಉಂಟಾಗುತ್ತಿದ್ದ ಸಮಸ್ಯೆಗಳು ಇಂದಿಗೂ ಕಾಣಲಾಗುತ್ತದೆ.

ಇತ್ತೀಚಿನ ದಿನಗಳಲ್ಲಿ ಹೈದ್ರಾಬಾದ್ ಕರ್ನಾಟಕ ಪ್ರದೇಶವನ್ನು ಅನುಲಕ್ಷಿಸಿಕೊಂಡೆ, ಅನೇಕ ಕೃತಿಗಳು ರಚನೆಯಾಗಿರುವುದು ಕಂಡುಬರುತ್ತದೆ. ಇದು ಈ ಪ್ರದೇಶದ ವಿವಿಧ ಮುಖಗಳನ್ನು ಪರಿಚಯಿಸಲು ಪ್ರಯತ್ನಿಸಿವೆ. ರಾಯಚೂರು, ಗುಲ್ಬರ್ಗಾ, ಬೀದರ್, ಬಳ್ಳಾರಿ, ಕೊಪ್ಪಳ ಪ್ರದೇಶದ ಸಂಸ್ಕೃತಿ, ಚಟುವಟಿಕೆಗಳು ಆರ್ಥಿಕ ಅಭಿವೃದ್ಧಿ ಮುಂತಾದ ವಿಷಯಗಳ ಮೇಲೆ ಬಿ.ಸಿ.ಮಹಾಬಲೇಶ್ವರಪ್ಪ, ಡಾ.ಅಮರೇಶ ನುಗಡೋಣಿ ಮುಂತಾದವರು ಅಧ್ಯಯನ ಮಾಡಿದ್ದಾರೆ.

ಹದಿನೆಂಟನೆಯ ಶತಮಾನದ ಉತ್ತರಾರ್ಧ ಹಾಗೂ ಹತ್ತೊಂಬತ್ತನೆಯ ಶತಮಾನದ ಪೂರ್ವಾರ್ಧ ಕಾಲದಲ್ಲಿದ್ದ "ಜ್ಞಾನೋದಯ ಚಳವಳಿಯು" ಬೌದ್ಧಿಕ ಕ್ರಾಂತಿಯ ಪರಾಕಾಷ್ಠೆಯನ್ನು ಪ್ರತಿನಿಧಿಸುತ್ತಿತ್ತು. ಈ ಚಳವಳಿಯು ಚಿಂತನೆ ಮತ್ತು ಜೀವನದ ಪ್ರತಿಕ್ಷೇತ್ರವನ್ನು ಲೌಕಿಕಗೊಳಿಸುವ ಗುರಿಯನ್ನು ಹೊಂದಿದ್ದಿತು. ಈ ಯುಗದ ಬರಹಗಾರರಲ್ಲಿ ಡೇವಿಡ್ ಹ್ಯೂಂ (೧೭೧೧-೧೭೭೬)(, ವಾಲ್ಟೈರ್ (೧೬೯೪-೧೭೭೮), ಮತ್ತು ಎಡ್ವರ್ಡ್ ಗಿಬ್ಬನ್ (೧೭೩೭-೧೭೯೪) ಪ್ರಮುಖರು. ಇತಿಹಾಸವು ಕೇವಲ ಕತನವಾಗಿರವ ಮಾನವನ ವಿಶಿಷ್ಟಕಾರ್ಯ ಚಟುವಟಿಕೆಗಳನ್ನು ಅರಿತುಕೊಳ್ಳುವ ಒಂದು ವ್ಯವಸ್ಥಿತ ಕ್ರಮವೆಂದು ಸಾರಿದರು. ಈ ದೃಷ್ಟಿಯಿಂದ ಅವರು ಆಧುನಿಕ ಇತಿಹಾಸ ಚಿಂತನದ ಸ್ಥಾಪಕರಾಗಿದ್ದಾರೆ. ಇತಿಹಾಸದ ವಿಚಾರಣೆಗೆ ಒಳಪಡಬೇಕಾದ ವಿಷಯಗಳಲ್ಲಿ ನಡತೆಗಳು, ಸಂಪ್ರದಾಯಗಳು, ನಂಬಿಕೆಗಳು,ಕಟ್ಟಳೆಗಳು, ವಿಜ್ಞಾನ, ದರ್ಶನ, ಕಲೆ, ತಂತ್ರಜ್ಞಾನ, ವ್ಯಾಪಾರ, ಕೈಗಾರಿಕೆ ಯುದ್ಧ ಮುಂತಾದ ಮಾನವನ ಚಿಂತನೆ ಹಾಗೂ ಕಾರ್ಯ ಚಟುವಟಿಕೆಗಳು ಸೇರಿಸಲ್ಪಟ್ಟವು. ನಾಗರಿಕತೆಗಳ ಕ್ರಮಾನುಗತಿಯನ್ನು ಚಿತ್ರಿಸುವ ಹಾಗೂ ಪ್ರಾಚೀನ ಇತಿಹಾಸವನ್ನು ತಿಳಿಯುವ ಹೊಸ ವಿಧಾನದ ಕಲ್ಪನೆಯು ಬೆಳಕಿಗೆ ಬಂದಿತು.

ಜ್ಞಾನೋದಯ ಯುಗದ ಆದರ್ಶ ಸ್ವರೂಪದ ಇತಿಹಾಸಕಾರ ಎಡ್ವರ್ಡ್ ಗಿಬ್ಬನ್ ಪೂರ್ವ ಜಗತ್ತು ಮತ್ತು ನೂತನ ಜಗತ್ತುಗಳ ನಡುವೆ ಒಂದು ಭವ್ಯ ಸೇತುವೆಯನ್ನು ಅವರು ನಿರ್ಮಿಸಿದರು. ಆ ಕಾಲದಲ್ಲಿ ನಿರ್ಮಿತವಾದ ಎಲ್ಲ ಕಟ್ಟಡಗಳು ನಾಶಗೊಂಡರೂ ಈ ಸೇತುವೆ ನೇರವಾಗಿ ನಿಂತಿದೆ ಎಂದು ಗೂಚ್ ಅಭಿಪ್ರಾಯಪಟ್ಟಿದ್ದಾರೆ. ಡಿಕ್ಲೈನ್ ಅಂಡ್ ಫಾಲ್ ಆಫ್ ದಿ ರೋಮನ್ ಎಂಪೈರ್ ಅವರ ಮೇರು ಕೃತಿ.

ಜ್ಞಾನೋದಯದ ಲೇಖಕರು ಇತಿಹಾಸದ ಆಳವನ್ನು ಹೆಚ್ಚಿಸಿದುದರ ಪರಿಣಾಮವಾಗಿ ಇತಿಹಾಸ ಕೇವಲ ಘಟನೆಗಳ ಕಣಜವಾಗಿರದೆ ಚಿಂತನೆಗಳ, ಕಲ್ಪನೆಗಳ, ಮತ್ತು ಚೈತನ್ಯದ ಅಭಿವೃದ್ಧಿಯ ಸರಣಿಯಾಗಿ ಪರಿಣಮಿಸಿತು. ಈ ಯುಗದಲ್ಲಿ ಇತಿಹಾಸ ರಚನಾಕಲೆಯಲ್ಲಿ ಹೊಸತನ ಕಂಡುಬಂದಿತಲ್ಲದೆ, ಇತಿಹಾಸದ ಪೂರ್ಣ ಭಾವನೆಯಲ್ಲಿ ಕ್ರಾಂತಿಕಾರಿ ಬದಲಾವಣೆಗಳು ಉಂಟಾದವು.

ಇತಿಹಾಸದ ಮುಂದಿನ ಬೆಳವಣಿಗೆಗೆ ಎರಡು ವಿಷಯಗಳು ಅಗತ್ಯವಾಗಿದ್ದವು. ಒಂದು, ಇತಿಹಾಸದ ಕ್ಷೇತ್ರವನ್ನು ವಿಸ್ತರಿಸಿ ಗತಕಾಲದ ಘಟನೆಗಳನ್ನು ಅನುಕಂಪದಿಂದ ವಿಚಾರಣೆ ಮಾಡುವುದು ಎರಡು, ಮಾನವನ ಸ್ವಭಾವವು ಏಕರೀತಿಯದು ಮತ್ತು ಬದಲಾವಣೆಯಾಗದಿರುವುದು ಎಂಬ ಭಾವನೆಯನ್ನು ವಿರೋಧಿಸುವುದು. ಈ ಎರಡು ವಿಷಯಗಳು ಭಾವನಾ ಸ್ವಾತಂತ್ರ್ಯಯುಗದ ಇತಿಹಾಸಕಾರರ ಗಮನವನ್ನು ಆಕರ್ಷಿಸಿದವು. ಈ ಎರಡು ನಿಲುವುಗಳ ಪ್ರಸಿದ್ಧ ಪ್ರತಿಪಾದಕ ಹರ್ಡರ್ ಅವರು ಅಸದೃಶ ಇತಿಹಾಸದ ರೂಪಗಳ ಮತ್ತು ಬೆಳವಣಿಗೆಯತ್ತ ಗಮನಹರಿಸಬೇಕೆಂದು ಪ್ರತಿಪಾದಿಸಿದರು. ಗತಕಾಲವನ್ನು ವರ್ತಮಾನ ಕಾಲದಿಂದ ಪ್ರತ್ಯೇಕಿಸಬೇಕೆಂಬುದು ಅವರ ವಾದವಾಗಿತ್ತು. ಪ್ರತಿಯೊಂದು ಕಾಲ ಮತ್ತು ಸಂಸ್ಕೃತಿಯ ಸ್ಪಷ್ಟ ತಿಳುವಳಿಕೆ ಹೊಂದಿರುವುದು ಅವಶ್ಯಕವೆಂದು ತಿಳಿಸಿದರು. ಜ್ಞಾನೋದಯದ ಶಿಶುವಾದ ರೂಸೋ (೧೭೧೨-೭೮) ಭಾವನಾ ಸ್ವಾತಂತ್ರ್ಯಯುಗದ ತತ್ವಗಳನ್ನು ಪುನರ್ವಿವೇಚಿಸಿ ಆ ಚಳವಳಿಯ ಪಿತರಾದರು. ಜನರು ತರ್ಕಕ್ಕೆ ಬದಲಾಗಿ ಸಹಜ ಪ್ರವೃತ್ತಿಗಳನ್ನು ಅನುಸರಿಸಬೇಕು. ಏಕೆಂದರೆ ಅವು ಪ್ರಕೃತಿಯ ಮಾರ್ಗಗಳು ರಾಜರು ತಾವು ಸಮ್ಮತಿಸಲು ಸಿದ್ಧರಾಗಿರುವುದನ್ನು ಜನತೆಗೆ ಕರುಣಿಸಬೇಕು. ಜ್ಞಾನೋದಯ ಹೊಂದಿದ ಅರಸರು ಜ್ಞಾನೋದಯ ಹೊಂದಿರುವ ಪ್ರಜೆಗಳನ್ನು ಹೊಂದಿರಬೇಕೆಂಬುದು ಪೂರ್ವಸೂಚಿತವಾಗುತ್ತದೆಂದು ತಿಳಿಸಿದರು. ನಿರಂಕುಶ ಪ್ರಭುತ್ವವು ತನ್ನ ನಿರ್ಧಾರವನ್ನು ಬಡಜನತೆಯ ಮೇಲೆ ಹೇರುವುದನ್ನು ರೂಸೋ ಸಹಿಸಲಿಲ್ಲ. ಅದಕ್ಕೆ ಬದಲಾಗಿ ಗುಂಪಿನ ಸಾಮಾನ್ಯ ನಿರ್ಧಾರ (ಜನರಲ್ ವಿಲ್)ದ ಕಲ್ಪನೆಯನ್ನು ಮುಂದಕ್ಕೆ ತಂದರು. 'ಪ್ರಕೃತಿಗೆ ಮರಳಿ' ಎಂಬ ರೂಸೊ ಅವರ ಘೋಷಣೆ ಈ ಯುಗದ ಅಡಿಪಾಯವಾಯಿತು.

ಪುರಾತನ ಕಾಲಗಳನ್ನು ಕುರಿತ ಹಿನ್ನೋಟ ಭಾವನಾ ಸ್ವಾತಂತ್ರ್ಯಯುಗದ ಇತಿಹಾಸಕಾರರಿಗೆ ಒಂದು ಅಭ್ಯಾಸವಾಗಿ ಪರಿಣಮಿಸಿತು.. ಅವರ ಪ್ರಕಾರ, ಆ ಕಾಲಗಳಲ್ಲಿ ತಮ್ಮದೇ ಆದ ಮೌಲ್ಯಗಳುಳ್ಳ ಸಮಾಜಗಳು ಪ್ರತಿನಿಧಿತವಾಗಿದ್ದವು. ನಾಗರಿಕತೆಯ ಬೆಳವಣಿಗೆಯಲ್ಲಿ ಈ ಮೌಲ್ಯಗಳು ಕಾಣೆಯಾದವು. ಈ ಕಾರಣಕ್ಕಾಗಿ ಆ ಯುಗಗಳನ್ನು ಬರ್ಬರಯುಗ ಅಥವ ಅಂಧಾಕಾರಯುಗ ಎಂದು ಕರೆಯುವುದು ಸರಿತೋರದೆಂದು ಈ ಯುಗದ ಇತಿಹಾಸಕಾರರು ಪ್ರತಿಪಾದಿಸಿದರು. ಈ ಪ್ರವೃತ್ತಿಯು ಇತಿಹಾಸದ ಹೊರನೋಟವನ್ನು ಶ್ರೀಮಂತಗೊಳಿಸಿತು. ಈ ಭಾವನೆಗೆ ದೃಢವಾದ ಬೆಂಬಲ ಇಮಾನ್ಯೂಯಲ್‌ಕಾಂಟ್ ಅವರ ಅನ್ ಐಡಿಯಾ ಫಾರ್ ಎ ಯೂನಿವರ್ಸಲ್ ಹಿಸ್ಟರಿ ಫ್ರಂ ದಿ ಕಾಸ್ಮೊಪಾಲಿಟನ್ ವ್ಯೂನಲ್ಲಿ ದೊರೆಯಿತು.

ಈ ಬೆಳವಣಿಗೆಗಳಿಂದ ಆಧುನಿಕ ಇತಿಹಾಸ ಲೇಖನ ಪರಂಪರೆ ರೂಪುಗೊಂಡಿತು. ಈ ಪರಂಪರೆಯ ಪ್ರಥಮ ಪ್ರಸಕ್ತ ವ್ಯಕ್ತಿ ಜರ್ಮನಿಯ ನೆಬರ್. ಪ್ರತಿಯೊಂದು ರಾಷ್ಟ್ರದ ಪ್ರಾಚೀನ ಇತಿಹಾಸವು ಘಟನೆಗಳಿಗಿಂತ ಸಂಸ್ಥೆಗಳ, ವ್ಯಕ್ತಿಗಳಿಗಿಂತ ವರ್ಗಗಳ, ನಿಯಮಗಳಿಗಿಂತ ಪದ್ಧತಿಗಳ ಅಥವ ಸಂಪ್ರದಾಯಗಳ ಇತಿಹಾಸವಾಗಿರಬೇಕೆಂಬ ಸತ್ಯವನ್ನು ಅವರು ಗ್ರಹಿಸಿದರು ಮತ್ತು ಅದರ ವ್ಯವಸಾಯಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ವಿಚಾರಿಸಿದರು. ಅವರ ಚಟುವಟಿಕೆಗಳು ಭಾಷಾಶಾಸ್ತ್ರದ ಎಲ್ಲ ವಿಭಾಗಗಳಿಗೂ ವಿಸ್ತರಿಸಿತಲ್ಲದೆ, ಅದರ ವಿಮರ್ಶೆಗೆ ಒಂದು ವಿಧಾನವನ್ನು ರೂಪಿಸಿದರು. ಈ ವಿಧಾನ ಎರಡು ಕಾರ್ಯಾಚರಣೆಗಳನ್ನು ಒಳಗೊಂಡಿತ್ತು. ೧. ಆಧಾರಗಳನ್ನು ಅವುಗಳ ಅಂಗ ಭಾಗಗಳೊಂದಿಗೆ ವಿಶ್ಲೇಷಿಸಿ ನಿಷ್ಪತ್ತೆಯನ್ನು ಕಂಡುಹಿಡಿಯುವುದು ಮತ್ತು ೨. ವಿಶ್ವಾಸಾರ್ಹವಾದ ಭಾಗಗಳನ್ನು ಆಂತರಿಕ ವಿಮರ್ಶೆಗೆ ಒಳಪಡಿಸಿ ಹೇಗೆ ಕರ್ತೃವಿನ ಸಂಗತಿಗಳ ಹೇಳಿಕೆಗಳು ಅವರ ಅಭಿಪ್ರಾಯವನ್ನು ಬಾಧಿಸಿತೆಂಬುದನ್ನು ತೋರಿಸುವುದು. ಈ ರೀತಿಯ ರೂಪವಿಕಾರಗಳಿಗೆ ಸ್ವಲ್ಪ ಅವಕಾಶ ನೀಡಲು ಈ ವಿಧಾನ ಇತಿಹಾಸಕಾರರಿಗೆ ನೆರವಾಗುತ್ತದೆ.

ಮಾಂಸೆನ್ ತಿಳಿಸಿರುವಂತೆ ನೆಬರ್ ಅವರ ಪ್ರಭಾವಕ್ಕೆ ಎಲ್ಲ ಹೆಸರಾಂತ ಇತಿಹಾಸಕಾರು ಒಳಗಾಗಿದ್ದರು. ಅವರಲ್ಲಿ ರಾಂಕೆ ಪ್ರಮುಖರು. ಇತಿಹಾಸದ ಬದಲಾವಣೆ ಭಾವಕ್ಕೆ ಅನುಗುಣವಾಗಿ ಮೂಲಾಧಾರಗಳನ್ನು ವಿಮರ್ಶಾತ್ಮಕವಾಗಿ ಉಪಯೋಗಿಸುವಲ್ಲಿ ರಾಂಕೆಯವರು ಇತಿಹಾಸ ಅಧ್ಯಯನಕ್ಕೆ ಎಣಿಸಲಾಗದ ಸೇವೆಯನ್ನು ಸಲ್ಲಿಸಿದ್ದಾರೆ. ಈ ಕಾರಣಕ್ಕಾಗಿ ಅವರನ್ನು ಆಧುನಿಕ ಇತಿಹಾಸದ ಶಿಸ್ತಿನ ಸ್ಥಾಪಕ, ಪ್ರಖ್ಯಾತ ಶುದ್ಧ ಇತಿಹಾಸಕಾರ ಎಂದು ಹೆಸರಿಸಲಾಗಿದೆ. ಜಗತ್ತಿನ ಇತಿಹಾಸ ಕುರಿತು ರಾಂಕೆಯವರು ೫೪ ಸಂಪುಟಗಳನ್ನು ರಚಿಸಿದರು. ಇತಿಹಾಸ ಕಥನವನ್ನು ರಚಿಸುವಾಗ ಪಕ್ಷಪಾತವಿಲ್ಲದೆ, ನೆಮ್ಮದಿಯ ವಾಸ್ತವಿಕ ಸಂಶೋಧನೆಯಲ್ಲಿ ತೊಡಗಿದ್ದರು. ಈ ಉದ್ದೇಶದ ಈಡೇರಿಕೆಗಾಗಿ "ಸಂಗತಿಗಳು ಎಷ್ಟೇ ನಿರುಪಾಧಿಕವಾದುದು ಮತ್ತು ಸುಂದರವಲ್ಲದುದು ಆಗಿದ್ದರೂ ಅವುಗಳನ್ನು ನಿಷ್ಠುರವಾಗಿ ಪರಿಚಯಿಸಬೇಕೆಂಬ ಶ್ರೇಷ್ಠ ನಿಯಮವನ್ನು" ಸೇರಿಸಿದರು. ಇತಿಹಾಸದ ಆಧಾರಗಳ ವಿಮರ್ಶೆಯನ್ನು ಅಭಿವೃದ್ಧಿಗೊಳಿಸಿ ಆಧುನಿಕ ವಿಮರ್ಶಾತ್ಮಕ ಇತಿಹಾಸ ಲೇಖನ ಪರಂಪರೆಯನ್ನು ಪ್ರಾರಂಭಿಸಿದರು. ಸಾರ್ವತ್ರಿಕ ಇತಿಹಾಸಗಳು ಆಧಾರಗಳಾಗಿ ಉಪಯುಕ್ತವಾಗಿಲ್ಲವೆಂಬುದನ್ನು ತೋರಿಸಿದರು. ಇಂತಹ ಜವಾಬ್ದಾರಿಯುತವಲ್ಲದ ದತ್ತಾಂಶಗಳನ್ನು ನಿರಾಕರಿಸಿ ಇತಿಹಾಸಕಾರರು ಪತ್ರಾಗಾರಗಳು ಮತ್ತು ದಾಖಲೆಗಳನ್ನು ಬಳಸಬೇಕೆಂದು ಕರೆಯಿತ್ತರು. ಪತ್ರಾಗಾರಗಳಲ್ಲಿನ ಆಧಾರಗಳನ್ನು ಉಪಯೋಗಿಸಿಕೊಂಡ ಇತಿಹಾಸಕಾರರಲ್ಲಿ ರಾಂಕೆ ಮೊದಲಿಗರು. ಬರವಣಿಗೆಯಲ್ಲಿ ರಕ್ಷಿಸಿರುವ ಆಧಾರಗಳ ಮೇಲೆಯೇ ಇತಿಹಾಸವನ್ನು ರಚಿಸಬೇಕೆಂದು ಪ್ರತಿಪಾದಿಸಿದರು. ಸಂಪ್ರದಾಯ, ಹೇಳಿಕೇಳಿದ್ದು, ಬೀದಿಮಾತು, ಪ್ರಮಾಣಕೊಟ್ಟು ದೃಢೀಕರಿಸಲಾಗದ ಯಾವುದರಲ್ಲೂ ಅವರಿಗೆ ನಂಬಿಕೆಯಿರಲಿಲ್ಲ. ಸಮರ್ಥನೀಯವಾದುದನ್ನು ಮಾತ್ರ ಅವರು ಅರಸುತ್ತಿದ್ದರು ಮತ್ತು ಇತಿಹಾಸಕಾರರಿಂದ ಇದನ್ನು ಅಪೇಕ್ಷಿಸುತ್ತಿದ್ದರು.

ರಾಂಕೆಯ ಮುನ್ನುಡಿ ಅವರ ಪಂಥದ 'ವಾಸ್ತವಿಕ' ಹಾಗೂ 'ವೈಜ್ಞಾನಿಕ' ಇತಿಹಾಸದ ವಿರುದ್ಧ ಅನೇಕ ಟೀಕೆಗಳಿವೆ. ವೈಜ್ಞಾನಿಕವಾಗಿರುವುದಕ್ಕಿಂತ ರಾಂಕೆಯವರು ತೀವ್ರವಾಗಿ ಪಕ್ಷಪಾತಿಯಾಗಿದ್ದರೆಂದು ಕೆಲವರು ವಾದಿಸಿದ್ದಾರೆ. ರಾಂಕೆಯವರ ಬರವಣಿಗೆಯಲ್ಲಿ ಕೆಲವು ಮಿತಿಗಳಿವೆಯೆಂಬುದನ್ನು ಅಲ್ಲಗಳೆಯಲಾಗುವುದಿಲ್ಲ. ಆದರೆ ಅವರು ರೂಪಿಸಿದ ವಿಧಾನವು ಹೆಚ್ಚಿನ ನಿಷ್ಪಕ್ಷಪಾತ, ಉತ್ತಮ ಗುಣವಾದ ಸಮಸ್ಥಾಯಿತ್ವ ಮತ್ತು ವಿಶಾಲವಾದ ಹೊರನೋಟಕ್ಕೆ ಎಡೆಮಾಡಿಕೊಟ್ಟಿತೆಂಬುದು ನಿಜ.

ರಾಂಕೆಯವರ ನಂತರ ಇತಿಹಾಸ ಲೇಖನ ಶಾಸ್ತ್ರದಲ್ಲಿ ಪ್ರಮುಖ ಬದಲಾವಣೆಗಳುಂಟಾದವು. ಈ ಬದಲಾವಣೆಗಳು ಇತಿಹಾಸ ಸಂಶೋಧನಾ ವಿಧಾನಕ್ಕೆ ಸಮೀತವಾಗಿರದೆ ಇತಿಹಾಸದ ಮತ್ತು ಅರ್ಥವಿವರಗಳಿಗೆ ಸಂಬಂಧಿಸಿದುದಾಗಿತ್ತು. ಈ ಪರಂಪರೆಯಲ್ಲಿ ನಾಲ್ಕು ಪ್ರಮುಖ ಇತಿಹಾಸಕಾರರನ್ನು ಗುರುತಿಸಬಹುದು. ಅವರೆಂದರೆ ಆಗಸ್ಟ್ ಕಾಮ್ಟ್ (೧೭೯೮-೧೮೫೭), ಕಾರ್ಲ್‌ಮಾರ್ಕ್ಸ್ (೧೮೧೮-೧೮೮೩), ಸ್ಪೆಂಗ್ಲರ್ (೧೮೮೦-೧೯೩೬) ಮತ್ತು ಟಾಯನ್‌ಬಿ (೧೮೮೯-೧೯೭೬) ಕಾಮ್ಟ್ ಅವರು ನಿಶ್ಚಿತತಾ ವಾದವನ್ನು, ಮಾರ್ಕ್ಸ್ ಅವರು ಇತಿಹಾಸವು ವರ್ಗ ಹೋರಾಟದ ಕಥನ ಎಂಬ ನಿಲುವನ್ನು ಮತ್ತು ಸ್ಪೆಂಗ್ಲರ್ ಹಾಗೂ ಟಾಯನ್‌ಬಿ ಅವರು ಜೀವ ವಿಜ್ಞಾನ ಅನುರೂಪಿತ ವಿಧಾನವನ್ನು ಮುಂದಿಟ್ಟರು.

ಕಾಮ್ಟ್ ಅವರನ್ನು ಸಮಾಜಶಾಸ್ತ್ರದ ಶಿಸ್ತಿನ ಸ್ಥಾಪಕರೆಂದು ಪರಿಗಣಿಸಲಾಗಿದೆ. ಸಮಾಜದ ಅಧ್ಯಯನಕ್ಕೆ ಪ್ರಾಕೃತಿಕ ಅಥವ ನಿಶ್ಚಿತ ವಿಜ್ಞಾನಗಳ ವಿಧಿಗಳನ್ನು ಅಳವಡಿಸಿಕೊಳ್ಳುವುದು ಅವರ ಉದ್ದೇಶವಾಗಿತ್ತು. ಸಮಾಜದ ಅಧ್ಯಯನಕ್ಕೆ ಇತಿಹಾಸವು ಅವಶ್ಯಕವಾದ ಕಚ್ಚಾ ಸಾಮಗ್ರಿಗಳನ್ನು ಒದಗಿಸುತ್ತೇವೆಂಬುದು ಅವರ ಅಭಿಪ್ರಾಯವಾಗಿತ್ತು. ಈ ಉದ್ದೇಶದಿಂದ ಅವರು ಇತಿಹಾಸದ ಅಧ್ಯಯನವನ್ನು ಪ್ರಾರಂಭಿಸಿದರು. ಇತಿಹಾಸದ ಬೆಳವಣಿಗೆಯಲ್ಲಿ ಅಡಕವಾಗಿರುವ ನಿಯಮಗಳ ಅವರು ಅರಸುತ್ತಿದ್ದರು. ಈ ನಿಯಮಗಳು ಮುಂಬರುವ ಘಟನೆಗಳ ಗತಿಯನ್ನು ನಿರ್ಧರಿಸಲು ಮಾನವನಿಗೆ ನೆರವಾಗುತ್ತದೆಂದು ಅವರು ಭಾವಿಸಿದ್ದರು. ಅವರ ಪ್ರಮುಖ ಕೃತಿಗಳಲ್ಲಿ ದಿ ಕೋರ್ಸ್ ಆಫ್ ಪಾಸಿಟಿವಿಸ್ಟ್ ಫಿಲಾಸಫಿ ಮತ್ತು ಸಿಸ್ಟಂ ಆಫ್ ಪಾಸಿಟಿವಿಸ್ಟ್ ಫಿಲಾಸಫಿ ಮತ್ತು ಸಿಸ್ಟಂ ಆಫ್ ಪಾಸಿಟಿವಿಸ್ಟ್ ಪಾಲಿಟಿಕ್ಸ್ ಇವುಗಳನ್ನು ಹೆಸರಿಸಬಹುದು. ಮಾನವ ಸಮಾಜವನ್ನು ವೈಜ್ಞಾನಿಕವಾಗಿ ಅಧ್ಯಯನ ಮಾಡಬಹುದೆಂದು ಈ ಗ್ರಂಥಗಳಲ್ಲಿ ಪ್ರತಿಪಾದಿಸಿದ್ದಾರೆ. ಈ ನಿಶ್ಚಿತತೆ (ಪಾಸಿಟಿವಿಸಂ)ಯಿಂದ ಆಧುನಿಕ ಸಮಾಜಶಾಸ್ತ್ರ ಉದಯಿಸಿತು.

ಮಾರ್ಕ್ಸ್ ಅವರ ಇತಿಹಾಸ ಸಿದ್ಧಾಂತವು ಪ್ರಸಿದ್ಧ ಶಾಸ್ತ್ರಾನುಸರಣೆಯೂ ಮತ್ತು ಪ್ರಸಿದ್ಧವಾದ ನಾಸ್ತಿಕತೆಯೂ ಆಗಿದೆ. ಮಾರ್ಕ್ಸ್ ಅವರ ಮಾತಿನಲ್ಲಿಯೇ ಹೇಳುವುದಾದರೆ "ಅಸ್ತಿತ್ವದಲ್ಲಿರುವ ಎಲ್ಲ ಸಮಾಜದ ಇತಿಹಾಸವು ವರ್ಗಹೋರಾಟಗಳ ಇತಿಹಾಸವಾಗಿದೆ". ಈ ವರ್ಗ ಹೋರಾಟವನ್ನು ಗುರುತಿಸಿದವರಲ್ಲಿ ಮಾರ್ಕ್ಸ್ ಮೊದಲಿಗರಲ್ಲ. "ಆಧುನಿಕ ಸಮಾಜದಲ್ಲಿ ವರ್ಗಗಳ ಅಸ್ತಿತ್ವ ಮತ್ತು ವರ್ಗಗಳ ನಡುವಣ ಹೋರಾಟಗಳನ್ನು ಗುರುತಿಸಿದುದರ ಕೀರ್ತಿ ನನಗೆ ಸಲ್ಲಬೇಕಾಗಿಲ್ಲ. ಬಹಳ ಹಿಂದೆ ಮಧ್ಯಮ ವರ್ಗದ (ಸಮಾನಾಭಿಪ್ರಾಯವುಳ್ಳ) ಇತಿಹಾಸಕಾರರು ಈ ಹೋರಾಟದ ಐತಿಹಾಸಿಕ

ಬೆಳವಣಿಗೆಗಳನ್ನು ಮತ್ತು ಮಧ್ಯಮ ವರ್ಗದ ಅರ್ಥಶಾಸ್ತ್ರಜ್ಞರು ವರ್ಗಗಳ ಆರ್ಥಿಕ ಸ್ವರೂಪವನ್ನು ವಿವರಿಸಿದ್ದಾರೆ. ನಾನು ಸಮರ್ಥಿಸುವುದೇನೆಂದರೆ ೧. ವರ್ಗಗಳ ಅಸ್ತಿತ್ವವು ಒಂದು ವಿಶಿಷ್ಟ ಐತಿಹಾಸಿಕ ಹಂತಗಳ ಉತ್ಪಾದನೆಯ ಬೆಳವಣಿಗೆಗಳಲ್ಲಿ ಸೇರಿಕೊಂಡಿದೆ. ೨. ವರ್ಗಹೋರಾಟವು ಶ್ರಮಜೀವಿಗಳ ನಿರಂಕುಶ ಪ್ರಭುತ್ವಕೆ ಅವಶ್ಯಕವಾಗಿ ಎಡೆಮಾಡಿಕೊಡುತ್ತದೆ. ೩. ಈ ನಿರಂಕುಶಪ್ರಭುತ್ವವು ಸಮಸ್ತ ವರ್ಗಗಳ ರದ್ದಿಗೆ ಮತ್ತು ವರ್ಗರಹಿತ ಸಮಾಜದ ಸಂಕ್ರಮಣದ ವ್ಯವಸ್ಥೆಯಾಗಿದೆ" ಎಂದು ಕಾರ್ಲ್‌ಮಾರ್ಕ್ಸ್ ಹೇಳಿದ್ದಾರೆ. ಸಮಾಜದ ಉತ್ಪಾದಕ ಶಕ್ತಿಗಳು ಮತ್ತು ಪ್ರಚಲಿತ ಉತ್ಪಾದನೆಯ ಸಂಬಂಧಗಳೊಡನೆ ಘರ್ಷಣೆಯ ಹಂತ ತಲುಪಿದಾಗ 'ಸಾಮಾಜಿಕ ಕ್ರಾಂತಿಯ ಯುಗ' ಪ್ರಾರಂಭವಾಗುತ್ತದೆ. ಈ ತಾರ್ಕಿಕ ವಿಧಾನ (ಡಯಲೆಟಿಕಲ್ ಪ್ರಾಸೆಸ್) ಮಾರ್ಕ್ಸ್‌ವಾದದ ಬೆನ್ನೆಲುಬಾಗಿದೆ.

ಮೊದಲನೆ ಜಾಗತಿಕ ಯುದ್ಧದಲ್ಲಿ ಸಂಭವಿಸಿದ ಅನರ್ತಗಳ ನಂತರ ಸಾಂಪ್ರದಾಯಿಕ ಪಾರಮಾರ್ಥಿಕತೆಯ ಮಾನದಂಡದಿಂದ ಹೊಸ ಜೀವನವನ್ನು ನಿಭಾಯಿಸಿಬೇಕಾಗಿರುವುದರ ಅನಿವಾರ್ಯದ ಅರಿವು ಯುರೋಪಿನಾದ್ಯಂತ ನಿರಾಶಾಭಾವನೆಯನ್ನು ಮಾಡಿತು. ಯುರೋಪಿನ ಇತಿಹಾಸದ ಈ ಸಂದಿಗ್ಧ ಕಾಲದಲ್ಲಿ ಸಂಸತಿಯ ಮೇಲೆ ತಮ್ಮ ವಿನೂತನ ವಿಚಾರ ಸರಣಿಯೊಂದಿಗೆ ಓಸ್ವಾಲ್ಡ್ ಸ್ಪೆಂಗ್ಲರ್ ಇತಿಹಾಸ ರಂಗವನ್ನು ಪ್ರವೇಶಿಸಿದರು. ಅವರ ಮೇರು ಕೃತಿ ದಿ ಡಿಕ್ಲೈನ್ ಆಫ್ ದಿ ವೆಸ್ಟ್ ಪಶ್ಚಿಮ ಯುರೋಪಿನ ಇತಿಹಾಸವನ್ನು ಪ್ರಾಚೀನ, ಮಧ್ಯಕಾಲೀನ ಮತ್ತು ಆಧುನಿಕ ಯುಗಗಳಾಗಿ ಅಧ್ಯಯಿಸುವ ವಿಭಜಿತ ಯೋಜನೆಯನ್ನು ಅವರು ವಿರೋಧಿಸಿದರು. ಈ ವಿಭಜನೆಯು ಸಂಸತಿಯ ದೃಷ್ಟಿ ಯಿಂದ ಅರ್ಥಹೀನ ಹಾಗು ಉತ್ಕೃಷ್ಟವಾದ ಸಂಸತಿಯನ್ನು ಪಡೆದಿದ್ದ ಭಾರತ, ಬೆಬಿಲೋನ್, ಚೀನಾ, ಈಜಿಪ್ಟ್ ಮೊದಲಾದುವನ್ನೂ ಕಡೆಗಣಿಸಿ ಪಾಶ್ಚಿಮಾತ್ಯ ಸಂಸತಿಗೆ ಗಣ್ಯಸ್ಥಾನವನ್ನು ನೀಡುವುದಾಗಿದೆ. ಇದಕ್ಕೆ ಬದಲಾಗಿ ಚಕ್ರಗತಿಯ ವಿಧಾನವು ಸೂಕ್ತವೆಂದು ಪ್ರತಿಪಾದಿಸಿದರು.

ಇತಿಹಾಸವು ಜೈವಿಕ ಏಕತೆಯನ್ನು ಸೂಚಿಸುತ್ತದೆ. "ಸಂಸತಿಗಳು ಜೀವಿಗಳಾಗಿದ್ದು ಜಗತ್ತಿನ ಇತಿಹಾಸ ಅವುಗಳ ಸಂಯುಕ್ತ ಜೀವನ ಚರಿತ್ರೆ, ಅವು ಜನ್ಮತಾಳಿ, ಬೆಳೆದು, ತಮ್ಮ ನಿಯತಿಗಳನ್ನು ಪೂರೈಸಿ ಮರಣವನ್ನಪ್ಪುತ್ತವೆ. ಪ್ರತಿಯೊಬ್ಬ ಮಾನವನ ಜೀವನದಲ್ಲಿ ಕಾಣುವ ನಾಲ್ಕು ಹಂತಗಳ ಹಾದಿಯಲ್ಲಿ ಸಂಸತಿಯೂ ಮುನ್ನಡೆಯುತ್ತದೆ. ಪ್ರತಿಯೊಂದು ಸಂಸತಿಯೂ ಬಾಲ್ಯಾವಸ್ಥೆ, ಯೌವನ, ಪ್ರಾಯ ಮತ್ತು ಮುಪ್ಪು ಈ ಅವಸ್ಥೆಗಳನ್ನು ಹೊಂದಿರುತ್ತದೆ". ಸಂಸತಿಯ ಜೀವ ಜ್ವಾಲೆಯು ನಶಿಸಿದಾಗ ತನ್ನ ಅಂತಿಮ ಹಂತವಾದ ನಾಗರಿಕತೆಯನ್ನು ತಲುಪುತ್ತದೆ. ನಾಗರಿಕತೆಯು ಸಂಸತಿಯ ಅನಿವಾರ್ಯವಾದ ವಿಧಿ ನಾಗರೀಕತೆಯ ಹಂತವು ಕೆಲವು ವೈಯಕ್ತಿಕ ವೈಲಕ್ಷಣ್ಯಗಳಿಂದ ಕೂಡಿರುತ್ತದೆ. ಕೊನೆಯಲ್ಲಿ ನಾಗರಿಕತೆಯು ಉತ್ಸಾಹಹೊಂದಿ, ಹೆಣಗಾಡುತ್ತಾ, ವಿಶ್ವಾಸಹೀನವಾಗಿ, ಶಿಥಿಲಗೊಳ್ಳುತ್ತಾ, ಇತಿಹಾಸವಲ್ಲದ ನಿರಾಕಾಶ ಸ್ಥಿತಿಗೆ ಮರಳುತ್ತದೆ. ಇದು ಸ್ಪೆಂಗ್ಲರ್ ಪ್ರಕಾರ ಸಂಸತಿ ನಾಗರಿಕೆಯ ಜೀವನ ಚಕ್ರದ ಅವಶ್ಯಕವಾದ ಅಂಶಗಳು. ಈ ಜೀವನ ಚಕ್ರಕ್ಕೆ ಬೆಂಬಲವಾಗಿ "ವಿಶ್ವದ ಚೈತನ್ಯ" ಇರುತ್ತದೆ. ಈ ಚೈತನ್ಯ ನಮ್ಮನ್ನು

ಪ್ರೇರೇಪಿಸುತ್ತಲ್ಲದೆ ಸಂಸತಿಯನ್ನು ಚೈತನ್ಯಗೊಳಿಸಿ ಅದರ ಜೀವನ ಚಕ್ರವನ್ನು ನಿರ್ಣಯಿಸುತ್ತದೆ. ಅವರು ತಮ್ಮ ನಿಲುವಿಗೆ ನೀಡುವ ಸಮರ್ಥನೆಗಳು ಅತಿ ನಿಷ್ಠುರವಾಗಿ ತೋರುತ್ತವೆ.

ಟಾಯನ್‌ಬಿ ಅವರು ನಾಗರಿಕತೆಗಳ ಸೃಷ್ಟಿಯ ಸಮಸ್ಯೆಗಳ ಬಗ್ಗೆ ಆಲೋಚಿಸುತ್ತಿರುವಾಗ ಸ್ವಾಭಾವಿಕವಾಗಿ ಸ್ಪೆಂಗ್ಲರ್ ಅವರ ಇತಿಹಾಸ ದರ್ಶನದಲ್ಲಿ ಆಕರ್ಷಿತರಾದರು. ಆದರೆ ಅವರ ಅತಿ ನಿಷ್ಠುರ ಕಾರಣಪೂರ್ವಕ ತರ್ಕ ಹೆಚ್ಚು ಮೌಲ್ಯವುಳ್ಳದ್ದಾಗಿಲ್ಲವೆಂದು ನಿರ್ಧರಿಸಿ ತಮ್ಮದೇ ವಿಧಾನವನ್ನು ಅವರ ಇತಿಹಾಸ ಅಧ್ಯಯನದಲ್ಲಿ ಪ್ರಕಟಗೊಂಡಿದೆ.

ಟಾಯನ್‌ಬಿ ಅವರು ತಮ್ಮ ವಿಚಾರ ಸರಣಿಯನ್ನು ಹೀಗೆ ಪ್ರಾರಂಭಿಸುತ್ತಾರೆ. ಅನಂತ ರೂಪದ ಅಥವ ವಿಸ್ತಾರದ ಅಪೂರ್ವ ಸಂಭವವನ್ನು ವಿವರಿಸುವುದಾಗಲೀ ಅಥವಾ ಮಾನವ ಜನಾಂಗದ ರಾಜ್ಯಾಂಗಗಳ ಇತಿಹಾಸವನ್ನು ಒಂದು ಐಕ್ಯತೆಯೆಂದು ಭಾವಿಸುವುದಾಗಲಿ ಇತಿಹಾಸ ಅಧ್ಯಯನದ ಸಮಂಜಸವಾದ ಕ್ಷೇತ್ರವಾಗಲಾರದು. ಸಮಾಜ ಒಂದು ಅರ್ಥಪೂರ್ಣವಾದ ಕ್ಷೇತ್ರ. ಇದು ಸ್ವರೂಪ ಹಾಗೂ ವಿಸ್ತಾರದಲ್ಲಿ ನಗರ ರಾಜ್ಯಗಳು, ರಾಷ್ಟ್ರೀಯತೆ ರಾಜ್ಯಗಳು, ಸೈನ್ಯ ಮತ್ತು ಇತರ ರಾಜಕೀಯ ಬಣಗಳಿಂದ ಹೆಚ್ಚು ವಿಸ್ತಾರವುಳ್ಳದ್ದಾಗಿದೆ. ರಾಜ್ಯ ಮತ್ತು ಸಮಾಜ ಸಾಮಾಜಿಕ ಅಣುಗಳು. ಇವೇ ಇತಿಹಾಸ ಅಧ್ಯಯನದ ಪ್ರಧಾನವಸ್ತುಗಳು. ಈ ಮೇರೆಗೆ ಅವರು ಇಪ್ಪತ್ತಾರು ಸಂಸತಿಗಳನ್ನು ಕೂಲಂಕುಶ ವಿವರಣೆಗೆ ಒಳಪಡಿಸಿದ್ದಾರೆ. ಅವರ ಪ್ರಕಾರ ಪ್ರಸಿದ್ಧ ನಾಗರಿಕತೆಗಳ ಉದಯಕ್ಕೆ ಮೂರು ಅಂಶಗಳು ಕಾರಣ. ೧. ಹೆಚ್ಚು ಆದರಣೀಯ ಅಥವ ಹೆಚ್ಚು ಅನಾದರಣೀಯವಲ್ಲದ ಭೌಗೋಳಿಕ ವಾತಾವರಣ, ೨. ಸಮಾಜದಲ್ಲಿನ ಸೃಷ್ಟಿಕಾರಕ ಅಥವ ರಚನಾತ್ಮಕ ಅಲ್ಪ ಸಂಖ್ಯಾತರು, ೩. ಸವಾಲು (ಪ್ರತಿಭಟನೆ) ಹಾಗೂ ಜವಾಬು (ಪ್ರತ್ಯುತ್ತರ) ಮತ್ತು ಹಿಂಜರಿಯುವುದು ಹಾಗೂ ಮರಳುವಿಕೆ ಇವುಗಳ ನಿರಂತರ ಪ್ರಕ್ರಿಯೆ ಇವೇ ಆ ಮೂರು ಅಂಶಗಳು. ಸೃಷ್ಟಿಕಾರಕ ಅಲ್ಪ ಸಂಖ್ಯಾತರು ಮತ್ತು ಹೆಚ್ಚು ಆದರಣೀಯವು ಅಥವ ಹೆಚ್ಚು ಅನಾದರಣೀಯವಲ್ಲದೆ ಪರಿಸ್ಥಿತಿಯಲ್ಲಿರುವ ಪಂಗಡಗಳು ಮಾತ್ರ ನಾಗರಿಕತೆಯ ಹೊಸ್ತಿಲನ್ನು ಮೆಟ್ಟಿದವು. ಇವುಗಳಿಗೆ ಹೊರತಾದ ಪಂಗಡಗಳು ನಾಗರಿಕತೆಯ ಕೆಳಸ್ತರದಲ್ಲಿ ಉಳಿದವೆಂದು ಅವರು ತಿಳಿಸುತ್ತಾರೆ. ಅವರ ಪ್ರಕಾರ ೨೬ ನಾಗರಿಕತೆಗಳಲ್ಲಿ ಒಂದು ಮಾತ್ರ ಪಾಶ್ಚಾತ್ಯ ನಾಗಿರಕೆಯು ಇಂದಿಗೂ ಜೀವಂತವಾಗಿದೆ. ಆದರೆ ಅವನತಿಯ ಹಾದಿಯಲ್ಲಿದೆ. ಇತರೆ ನಾಗರಿಕತೆಗಳು ಮರಣವನ್ನಪ್ಪಿವೆ ಅಥವ ಅರೆಜೀವ ಹೊಂದಿವೆ. ಇದು ಟಾಯನ್‌ಬಿ ಅವರ ಇತಿಹಾಸ ಅಧ್ಯಯನದ ಮುಖ. ಇದು ಟೀಕೆಗೂ ತುತ್ತಾಗಿದೆ.

ಈ ಸಂಕ್ಷಿಪ್ತ ಸಮೀಕ್ಷೆ ಇತಿಹಾಸ ಸಂಶೋಧನ ಮತುನಿತಿಹಾಸ ಲೇಖನ ನಡೆದುಬಂದ ಗತಿಯ ಮೈಲುಗಲ್ಲುಗಳನ್ನು ಸೂಚಿಸುತ್ತದೆ. ಆದರೆ ಇತಿಹಾಸ ರಚನೆಯಲ್ಲಿ ಸಾಧಿಸಬೇಕಾಗಿರುವ ಆದರ್ಶ ಧ್ಯೇಯವೆಂದರೆ ವಿಜ್ಞಾನ ಮತ್ತು ಸಾಹಿತ್ಯವನ್ನು ಸಂಯೋಜಿಸುವುದು. ಇತಿಹಾಸಕಾರನ ಕಲೆ ಅತ್ಯುನ್ನತ ಸ್ಥಿತಿಗೆ ಏರಿರುವ ಕುರುಹಾದ ವೈಜ್ಞಾನಿಕ ಸಾಹಿತ್ಯದ ಇತಿಹಾಸವನ್ನು ಮುಂಬರುವ ದಿನಗಳು ಎದಿರುನೋಡುತ್ತಿವೆ. ವೈಜ್ಞಾನಿಕ ವಿಧಾನ ಮತ್ತು ಸಾಹಿತ್ಯ ರೂಪ ಇತಿಹಾಸದಲ್ಲಿ ಪರಸ್ಪರ ಪ್ರತ್ಯೇಕವಾಗಿರದೆ

ಕೆಲವು ವೇಳೆ ಜೊತೆಯಾಗಿರುವುದು ಕಂಡುಬರುತ್ತದೆ. ಇದೇ ಸಮಯದಲ್ಲಿ ಸಂಶೋಧನೆಯೇ ಸರ್ವಸ್ವ ಮತ್ತು ಸಂಗತಿಗಳನ್ನು ಸಂಗ್ರಹಿಸುವುದೇ ಮುಖ್ಯವಾದದ್ದು ಎಂಬ ನಂಬಿಕೆಗೆ ದೊರೆಯುತ್ತಿರುವ ಪ್ರತಿಕ್ರಿಯೆ ನೀರಸವಾಗಿದೆ. ಪ್ರಸಿದ್ಧ ಇತಿಹಾಸಕಾರನು ವೈಜ್ಞಾನಿಕ ಭಾವನೆಯನ್ನು ಹೊಂದಿರಬೇಕಾದುದು ಅವಶ್ಯಕ. ಅಂತೆಯೇ ಅನೆಲ್ಸ್ ಸಂಪ್ರದಾಯದವರು ತಿಳಿಸುವಂತೆ ವಿಭಿನ್ನ ವಸ್ತುಗಳ ಹಾಗೂ ವಿಭಿನ್ನ ವಿಶೇಷತೆಗಳ ಫಲಿತಾಂಶಗಳ ಲಾಭವನ್ನು ಪಡೆಯುವುದು ಮುಖ್ಯ. ಈ ಕ್ರಮ ಸಂಶೋಧನೆಗೆ ಸಾಮಾರ್ಥ್ಯ ನೀಡುತ್ತದೆ ಮತ್ತು ಸಂಗತಿಗಳನ್ನು ಉಚಿತ ಕ್ರಮದಲ್ಲಿ ಕೂಡಿಸಲು, ತೂಗಿನೋಡಲು, ಮತ್ತು ಎಲ್ಲಕ್ಕಿಂತ ಮಿಗಿಲಾಗಿ ಅರ್ಥವಿವರಣೆ ನೀಡಲು ಸಹಾಯಕವಾಗುತ್ತದೆ ಇದು ಭಾರತ ಇತಿಹಾಸ ಲೇಖನಕ್ಕೂ ಅನ್ವಯಿಸುತ್ತದೆ.

ಭಾರತೀಯರ ಐತಿಹಾಸಿಕ ಭಾವನೆಗಳು ಪೂರ್ಣವಾಗದ ವಸ್ತುವಿನ ರೂಪದಲ್ಲಿ ವೈದಿಕ ಯುಗದ ವಿವಿಧ ಸಾಹಿತ್ಯಕ ರೂಪಗಳಲ್ಲಿ ಕಂಡುಬರುತ್ತದೆ. ಅವುಗಳಲ್ಲಿ ಅತಿ ಮುಖ್ಯವಾದವುಗಳೆಂದರೆ ಗಾಥಾಗಳು, ನಾರಶಂಸಿ, ಅಖ್ಯಾನ ಮತ್ತು ಪುರಾಣಗಳು. ಪುರೋಹಿತರಿಂದ ರಚಿಸಲ್ಪಟ್ಟು ಈ ಸಾಹಿತ್ಯದ ರೂಪಕಗಳು ವಿಭಿನ್ನ ಬುಡಕಟ್ಟುಗಳ ಒಳಸಂಚುಗಳನ್ನು ಒಳಗೊಂಡಿದ್ದವು. ವಾಚಿಕವಾಗಿದ್ದ ಈ ಸಾಹಿತ್ಯ ರೂಪಕಗಳನ್ನು ಸಭೆ ಅಥವ ಕೂಟಗಳಲ್ಲಿ ಹಾಡುತ್ತಿದ್ದರು. ನಂತರ ಅವುಗಳ ಲಿಖಿತ ಸಂಪ್ರದಾಯದಲ್ಲಿ ಸೇರ್ಪಡೆಯಾದವು. ಮಹಾಕಾವ್ಯಗಳು ಇತಿಹಾಸ, ಪುರಾಣ, ಸಂಪ್ರದಾಯವನ್ನು ಮುಂದುವರಿಸಿದವು. ಜೈನರು ಮತ್ತು ಬೌದ್ಧರು ಪವಿತ್ರ ಜೀವನ ಚರಿತ್ರೆಗಳು ಮತ್ತು ತಮ್ಮ ಸಂಘಕ್ಕೆ ಸಂಬಂಧಿಸಿದಂತೆ ಮಠದ ಇತಿಹಾಸವನ್ನು ರಚಿಸಿದರು. ಇತಿಹಾಸ, ಪುರಾಣ, ಸಂಬಂಧಕಗಳು ಶ್ರೀಲಂಕಾದ ವೃತ್ತಾಂತಗಳಾದ ದೀಪವಂಶ ಮತ್ತು ಮಹಾವಂಶಗಳಲ್ಲಿ ವ್ಯಕ್ತವಾಗಿದೆ. ಕ್ರಿ.ಶ.ಏಳನೆಯ ಶತಮಾನದಲ್ಲಿ ಇತಿಹಾಸ, ಪುರಾಣ ಭಾವದಲ್ಲಿ ವ್ಯಕ್ತವಾಗಿರುವ ಐತಿಹಾಸಿಕ ಸಂಪ್ರದಾಯವು ವಿಸ್ತರಣ ಪ್ರಕ್ರಿಯೆಗೆ ಒಳಗಾಯಿತು. ಸಂಪ್ರದಾಯದಲ್ಲಿನ ವಂಶಾವಳಿಯ ರೂಪವನ್ನು ರಕ್ಷಿಸಲಾಯಿತಲ್ಲದೆ ಅದನ್ನು ವಿಭಿನ್ನ ವಂಶಾವಳಿಗಳಲ್ಲಿ ಅತಿಶಯಿಸಲಾಯಿತು. ಸಣ್ಣ ಪ್ರಾದೇಶಿಕ ರಾಜ್ಯಗಳ ಉದಯವು ಸ್ಥಳೀಯ ನಿಷ್ಠೆ ಹಾಗೂ ಇತಿಹಾಸಕ್ಕೆ ಈ ಪ್ರದೇಶದ ಸಂಬಂಧಕ್ಕೆ ಎಡೆಮಾಡಿಕೊಟ್ಟಿತು. ಇತಿಹಾಸ ಕೇಂದ್ರದ ಆಸಕ್ತಿಯು ಬುಡಕಟ್ಟಿನಿಂದ ರಾಜ ಮತ್ತು ಆತನ ಆಸ್ಥಾನಕ್ಕೆ ಚಲಿಸಿತು. ಇದರಿಂದಾಗಿ ವಿರೋಧ ಸಂಪ್ರದಾಯವು ರಾಜ ಮತ್ತು ಆತನ ಆಸ್ಥಾನ, ಮತ್ತು ಸೂತರು ಆಸ್ಥಾನ ಕವಿಗೆ ಸ್ಥಳಾಂತರವಾಯಿತು. ಆಸ್ಥಾನ ಕವಿಗಳು ಧರ್ಮನಿರಪೇಕ್ಷೆ ಅಧಿಕಾರಕ್ಕೆ ಹೆಚ್ಚಿನ ಆಸಕ್ತಿ ತೋರಿದರು ನಿಜ. ಆದರೆ ಅವರು ಇತಿಹಾಸ ಸತ್ಯತೆಯನ್ನು ನಾಟಕೀಯ ಸಾದೃಶ್ಯಗಳಿಗಾಗಿ ಆಹುತಿಕೊಟ್ಟರು. ಹೀಗಾಗಿ ಅವರ ಬಿಂದುವು ಸಂಕುಚಿತವಾಗಿತ್ತು. ಆದಾಗ್ಯೂ ಇತಿಹಾಸ, ಪುರಾಣ ಸಂಪ್ರದಾಯದೊಂದಿಗೆ ಸಂಬಂಧಿಕವನ್ನು ತಪ್ಪದೆ ಉಳಿಸಿಕೊಂಡು ಬಂದರು. ಈ ಇತಿಹಾಸ ಜೀವನ ಚರಿತ್ರೆಗಳಲ್ಲಿ ಹರ್ಷಚರಿತ, ವಿಕ್ರಮಾಂಕದೇವ ಚರಿತ, ಕುಮಾರಪಾಲ ಚರಿತೆ ಮೊದಲಾದವುಗಳನ್ನು ಹೆಸರಿಸಬಹುದಾಗಿದೆ. ಸಾಂಪ್ರದಾಯಿಕ ಶೈಲಿಯಲ್ಲಿ ರಚಿತವಾಗಿರುವ ಈ ಕೃತಿಗಳು ಶ್ರೇಷ್ಠ ಸ್ತುತಿಗಳಾಗಿವೆ.

ಭಾರತೀಯರ ಮುಂದುವರಿದ ಇತಿಹಾಸ ಕಲ್ಪನೆ ಕಲ್ಹಣನ ರಾಜತರಂಗಣಿಯಲ್ಲಿ ವ್ಯಕ್ತವಾಗುತ್ತದೆ. ಆತನನ್ನು ಭಾರತೀಯ ಇತಿಹಾಸ ರಚನಕಾರರಲ್ಲಿ ಕಡೆಯವನೂ ಮತ್ತು ಆಧುನಿಕ ಇತಿಹಾಸಕಾರರಲ್ಲಿ

ಪ್ರಥಮನೆಂದು ಪರಿಗಣಿಸಲಾಗಿದೆ. ಆಧುನಿಕ ಇತಿಹಾಸ ಪ್ರಜ್ಞೆ, ಸಂಶಯಾತ್ಮಕ ಹಾಗೂ ವಿಮರ್ಶಾತ್ಮಕ ದೃಷ್ಟಿಯನ್ನು ಹೊಂದಿದ್ದರೆಂಬುದು ಅವರ ಈ ಮಾತುಗಳಿಂದ ವ್ಯಕ್ತವಾಗುತ್ತದೆ. "ಸಂದ ಯುಗದ ಚಿತ್ರಣಗಳನ್ನು ಓದುಗರ ಕಣ್ಣು ಮುಂದೆ ಸಜೀವವಾಗಿ ಮೂಡಿಸುವುದು ಇತಿಹಾಸಕಾರನ ಉದ್ದೇಶ. ಹೀಗೆ ಮೂಡಿಸುವುದರಿಂದ ಇತಿಹಾಸವು ದೃಢವಾಗುತ್ತದೆ. ಪ್ರಾಮಾಣಿಕವಾದ ಇತಿಹಾಸವು ಅನೇಕ ಪ್ರಸಿದ್ಧ ಪುರುಷರು ಮತ್ತು ಇತಿಹಾಸಕಾರರನ್ನು ಅಮರವಾಗಿಸುತ್ತದೆ". ಅವರು ಇತಿಹಾಸ ರಚನೆಯಲ್ಲಿ ತೋರಿದ ಉತ್ಸುಕತೆ ಇಪ್ಪತ್ತನೆಯ ಶತಮಾನದ ಇತಿಹಾಸಕಾರನಿಗೆ ಆದರ್ಶವಾಯಿತು. ಇತಿಹಾಸದ ಘಟನೆಗಳನ್ನು ವಕೀಲನಂತಲ್ಲದೆ ನ್ಯಾಯಾಧೀಶನಂತೆ ಪಕ್ಷಪಾತ ತೋರದೆ ಪರಿಶೀಲಿಸಿಬೇಕೆಂಬುದು ಅವರ ಬರವಣಿಗೆಯ ಪ್ರಮುಖ ಅಂಶವಾಗಿದೆ.

ಮಧ್ಯಕಾಲೀನ ಭಾರತದಲ್ಲಿ ಇತಿಹಾಸ ರಚನಾಕಾರ್ಯವನ್ನು ದೆಹಲಿ ಸುಲ್ತಾನರ ಹಾಗೂ ಮೊಗಲರ ಆಸ್ಥಾನದಲ್ಲಿ ನೇಮಕಗೊಂಡ ವಿದ್ವಾಂಸರು ಕೈಗೆತ್ತಿಕೊಂಡರು. ಈ ಯುಗದಲ್ಲಿ ಇತಿಹಾಸವು ಒಂದು ಗಣನೀಯ ಪ್ರಮಾಣದಲ್ಲಿ ರಚಿಸಲ್ಪಟ್ಟಿತು. ಇದು ಪೂರ್ವ ಸಂಪ್ರದಾಯವನ್ನು ಉತ್ತಮಪಡಿಸುವ ಹಾಗೂ ಕೆಲವು ನೂತನ ಮೂಲತತ್ವಗಳನ್ನು ಅಳವಡಿಸಿಕೊಳ್ಳುವ ಉದ್ದೇಶವನ್ನು ಹೊಂದಿದ್ದರೂ ಸಹ ಅದು ಸಂಪೂರ್ಣವಾಗಿ ಹೊಸ ವಿಕಾಸನಕ್ಕೆ ಕಾರಣವಾಯಿತೆಂದು ಹೇಳಲಾಗುವುದಿಲ್ಲ. ಈ ಯುಗದಲ್ಲಿ ನಮಗೆ ಕಂಡುಬರುವುದು ಜೀವನ ಚರಿತ್ರೆಗಳು, ರಾಜಕೀಯ ವಿಷಯಗಲನ್ನೊಳಗೊಂಡ ಕೃತಿಗಳು, ಸಾರ್ವತ್ರಿಕ ಇತಿಹಾಸಗಳು, ವಿಶೇಷ ಆಳ್ವಿಕೆಗಳಿಗೆ ಸಂಬಂಧಿಸಿದ ಕಾಲಕ್ರಮಾಗತ ದಾಖಲೆಗಳು, ಸ್ಥಳೀಯ ಹಾಗೂ ಪ್ರಾದೇಶಿಕ ಕಾಲಕ್ರಮಾಗತ ದಾಖಲೆಗಳು, ಮಧ್ಯಕಾಲೀನ ಇತಿಹಾಸ ಲೇಖನ ಪರಂಪರೆಯು ಪ್ರಾಚೀನ ಭಾರತೀಯ ನಿರರ್ಥಕತೆಗಳು ಮತ್ತು ಆಧುನಿಕ ಭಾರತೀಯ ಪರಿಪೂರ್ಣ ಇತಿಹಾಸಗಳ ನಡುವೆ ಅರ್ಧಮಾರ್ಗದ ಮನೆಯಿದ್ದಂತೆ ಎಂದು ಎನ್.ಸುಬ್ರಮಣಿಯನ್ ಅಭಿಪ್ರಾಯಪಟ್ಟಿದ್ದಾರೆ.

ಆಧುನಿಕ ಭಾರತ ಇತಿಹಾಸ ಲೇಖನ ಪರಂಪರೆಯು ಯೂರೋಪಿಯನ್ ಇತಿಹಾಸ ಲೇಖನ ಪರಂಪರೆಯ ಉತ್ತಮ ಸಂಪ್ರದಾಯಗಳ ಶ್ರೇಷ್ಠವಾದ ಭಾವನೆಗಳನ್ನು ಗ್ರಹಿಸಿತ್ತು. ಆದರೆ ಕಾರ್ಯತಃ ಯೂರೋಪಿನವರು ಪಡೆದ ಉತ್ತಮ ಪರಿಣಾಮಗಳನ್ನು ಪಡೆಯಲಾಗದಿದ್ದರೂ ಅವರ ಸಾಧನೆಯು ಸುಮಾರಾಗಿತ್ತು. ಈ ಪ್ರಭಾವದ ಪರಿಣಾಮಗಳಿಂದಾಗಿ ಭಾರತ ಇತಿಹಾಸ ಪರಂಪರೆಯ ನೋಟ, ವಿಧಾನ, ಕೌಶಲ್ಯ, ಮತ್ತು ಇತಿಹಾಸ ಸಾಹಿತ್ಯದ ಪರಿಣಾಮದಲ್ಲಿ ಪರಿಣಾಮಕಾರವಾದ ಬದಲಾವಣೆಗಳು ಉಂಟಾಯಿತು. ಈ ಬೆಳವಣಿಗೆಗೆ ಅವಶ್ಯಕವಾದ ಆರಂಭದ ಅತಿಕಷ್ಟದ ಕಾರ್ಯವನ್ನು ನಿರ್ವಹಿಸಿದವರು ಪಾಶ್ಚಾತ್ಯ ಆಡಳಿತಗಾರ ಇತಿಹಾಸಕಾರರಾದಾರ್ ವಿಲಿಯಂ ಜೋನ್ಸ್, ಕೊಲ್ ಬ್ರೂಕ್, ಎಚ್.ಎಚ್.ವಿಲ್ಸನ್, ಬರ್ನಾಪ್ ಮುಂತಾದವರು. ಜೇಮ್ಸ್ ಪ್ರಿನ್ಸೆಪ್ ಬ್ರಾಹ್ಮಿಲಿಪಿಯನ್ನು ಅರ್ಥಮಾಡಿದರು. ಅಲೆಗ್ಸಾಂಡರ್ ಕನ್ನಿಂಗ್ ಹ್ಯಾಂ ನಿರ್ದೇಶನದಲ್ಲಿ ಪುರಾತತ್ವ ಶೋಧನಾ ವಿಭಾಗ ಪ್ರಾರಂಭಗೊಂಡು ಪ್ರಾಚೀನ ಸ್ಮಾರಕಗಳು ಮತ್ತು ನಾಗರಿಕತೆ ಬೆಳಕಿಗೆ ಬಂದವು.

ಯೂರೋಪಿಯನ್ ವಿದ್ವಾಂಸರ ಈ ಉದಾಹರಣೆಯನ್ನು ಆರ್.ಜಿ.ಭಂಡಾರ್‌ಕರ್ ಮೊದಲಾದ ಭಾರತೀಯ ವಿದ್ವಾಂಸರು ಅನುಸರಿಸಿದರು. ಸಾಮ್ರಾಜ್ಯಶಾಹಿ ಇತಿಸಕಾರರ ಧೋರಣೆಗಳನ್ನು ಖಂಡಿಸಿ ಸಮರ್ಪಕವಾದ ಉತ್ತರವನ್ನು ಈ ವಿದ್ವಾಂಸರು ನೀಡಿದರು. ರಾಷ್ಟ್ರೀಯವಾದಿ ಇತಿಹಾಸಕಾರರು ರಾಷ್ಟ್ರೀಯ ಭಾವನೆ ಮತ್ತು ಸ್ವದೇಶ ಪ್ರೇಮದ ಅನುರಾಗದಿಂದ ಪ್ರೇರಿತರಾಗಿದ್ದರು. ಹೀಗಿದ್ದರೂ ಅವರು ಪಾಶ್ಚಿಮಾತ್ಯ ಮಾದರಿಯನ್ನೇ ಅನುಸರಿಸಿದರು ಮತ್ತು ಅವರಂತೆಯೇ ಈ ಬಣದ ಇತಿಹಾಸಕಾರರ ಗಮನವು ರಾಜ ಸಂತತಿಯ ಇತಿಹಾಸದ ಮೇಲೆ ಕೇಂದ್ರಿಕೃತವಾಗಿತ್ತು. ಅವರು ರಾಷ್ಟ್ರೀಯತೆಗೆ ಸೇವೆಸಲ್ಲಿಸಿದರೇ ವಿನಃ ಇತಿಹಾಸಕ್ಕಲ್ಲ.

ಭಾರತವು ಬ್ರಿಟಿಷರ ಆಳ್ವಿಕೆಯಿಂದ ವಿಮುಕ್ತಿ ಹೊಂದಿದ ಮೇಲೆ ಪ್ರತಿಯೊಂದು ಕ್ಷೇತ್ರದಲ್ಲಿಯೂ ಆರೋಗ್ಯಕರವಾದ ಬೆಳವಣಿಗೆಗಳನ್ನು ನಿರೀಕ್ಷಿಸಲಾಗಿತ್ತು. ಈ ನಿರೀಕ್ಷೆ ಹುಸಿಯಾಗಿಲ್ಲ. ಮಾರ್ಕ್ಸ್ ಅವರ ಇತಿಹಾಸ ಸಿದ್ಧಾಂತಕ್ಕೆ ಮಾರುಹೋದ ಒಂದು ಪಂಥದವರು ಪ್ರಾಚೀನ, ಮಧ್ಯಕಾಲೀನ, ಹಾಗೂ ಆಧುನಿಕ ಕಾಲದ ಪ್ರತಿಯೊಂದು ಬೆಳವಣಿಗೆಯನ್ನು ಆ ಸಿದ್ಧಾಂತದ ಬೆಳಕಿನಲ್ಲಿ ಅರ್ಥೈಸುತ್ತಾರೆ. ಈ ಸಿದ್ಧಾಂತವನ್ನು ಅನುಸರಿಸಿ ಇತಿಹಾಸಕಾರದವರಲ್ಲಿ ಡಿ.ಡಿ.ಕೋಸಾಂಬಿಯವರು ಮೊದಲಿಗರು. ಪ್ರಾಚೀನ ಭಾರತ ಇತಿಹಾಸ ಅಧ್ಯಯನಕ್ಕೆ ಒಂದು ನೂತನ ಮಾರ್ಗವನ್ನು ಸೂಚಿಸಿದರಲ್ಲದೆ ತನಿಖೆಗೆ ಹೊಸ ಪಥವನ್ನು ಹಾಕಿಕೊಟ್ಟರು. ಅವರ ಪ್ರಭಾವದಿಂದ ಇತಿಹಾಸ ಸಂಶೋಧನೆ ಮತ್ತು ರಚನೆಯಲ್ಲಿ ಚೈತನ್ಯ ಕಂಡು ಬಂದಿದೆ ಎಂದರೆ ಅತಿಶಯೋಕ್ತಿಯಾಗಲಾರದು. 'ತತ್ವ ಅಥವ ಸಿದ್ಧಾಂತವಿಲ್ಲದೆ ಇತಿಹಾಸವಿಲ್ಲ' ಎಂಬ ಘೋಷಣೆ ಭಾರತದಲ್ಲಿ ಸ್ಪಷ್ಟವಾಗಿ ಕೇಳಿಬರುತ್ತಿದೆ.

ಗ್ರಂಥಋಣ

ಗ್ರಂಥಗಳು

೧. ಅಣ್ಣಿಗೇರಿ ಎ.ಎಂ, ಭಾರತದ ಪ್ರಾಚೀನ ನಾಣ್ಯಗಳು, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೮೭.

೨. ಅಣ್ಣಿಗೇರಿ ಎ.ಎಂ, ಆರ್.ಶೇಷಶಾಸ್ತ್ರಿ (ಸಂ), ಶಾಸನ ಸಂಗ್ರಹ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೭೫.

೩. ಅಣ್ಣಿಗೇರಿ ಎ.ಎಂ, ಪಟ್ಟದಕಲ್ಲು ಗುಡಿಗಳು, ಕನ್ನಡ ಸಂಶೋಧನೆ ಸಂಸ್ಥೆ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೬೦.

೪. ಅಣ್ಣಿಗೇರಿ ಎ.ಎಂ, ಐಹೊಳೆ ಕಲೆ ಮತ್ತು ಸಂಸ್ಕೃತಿ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೫. ಅಭಿಶಂಕರ ಕೆ, ಮೈಸೂರು ಸ್ಟೇಟ್ ಬಳ್ಳಾರಿ ಡಿಸ್ಟ್ರಿಕ್ಟ್ ಗೆಜೆಟಿಯರ್, ಗವರ್ನ್‌ಮೆಂಟ್ ಪ್ರೆಸ್, ಬೆಂಗಳೂರು, ೧೯೭೨.

೬. Alteker A.S: The rastrakutas and Their tomes, Poona, 1934.

೭. ಇಂಡಿಯನ್ ಆರ್ಕಿಯಾಲಜಿ, ಎರಿವ್ಯೂ, ಕೇಂದ್ರ ಸರ್ಕಾರ ಪುರಾತತ್ವ ಸರ್ವೇಕ್ಷಣ ಇಲಾಖೆ, ೧೯೭೦-೭೧.

೮. ಕರ್ನಾಟಕ ರಾಜ್ಯ ಗೆಸೆಟಿಯರ್, ಸೂರ್ಯನಾಥ ಕಾಮತ್ (ಸಂ), ಕರ್ನಾಟಕ ರಾಜ್ಯ ಸರಕಾರ, ೧೯೮೪.

೯. ಕರ್ನಾಟಕ ರಾಜ್ಯ ಗ್ಯಾಸೆಟಿಯರ್ ಭಾಗ, ಸೂಯನಾಥ ಯು.ಕಾಮತ್ (ಸಂ), ಕರ್ನಾಟಕ ರಾಜ್ಯ ಸರಕಾರ, ೧೯೮೬.

೧೦. ಕರ್ನಾಟಕದ ವೀರಗಲ್ಲುಗಳು, ಶೇಷಶಾಸ್ತ್ರಿ ಆರ್., ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೮೨.

೧೧. ಕರ್ನಾಟಕ ಶಾಸನಗಳು ಸಂಪುಟ-I, ವಿಜಯನಗರದ (ಹಂಪೆಯ) ಶಾಸನಗಳು, ಚನ್ನಬಸಪ್ಪ ಎಸ್.ಪಾಟೀಲ, ವಿನೋದಾ ಪಾಟೀಲ ಸಂ, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, ೧೯೯೬.

೧೨. ಕೆರೇಲ್ ಇ, ರಡಕ್ಲಿಫ್, ಅರ್ಲಿ ಚಾಲುಕ್ಯನ್ ಸ್ಕಲ್ಪ್‌ಚರ್, (ಸಂ.೧), ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ, ನ್ಯೂಯಾರ್ಕ್ ವಿಶ್ವವಿದ್ಯಾಲಯ, ೧೯೮೧.

೧೩. ಕರ್ನಾಟಕ ಶಾಸನಗಳು ಸಂಪುಟ-II, ಬಳ್ಳಾರಿ ಜಿಲ್ಲೆಯ ಶಾಸನಗಳ, ಚನ್ನಬಸಪ್ಪ ಎಸ್ ಪಾಟೀಲ, ವಿನೋದಾ ಪಾಟೀಲ (ಸಂ), ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, ೧೯೯೭.

೧೪. ಕರ್ನಾಟಕ ಸರ್ಕಾರದ ಪ್ರಾಚ್ಯವಸ್ತು ಸಂಗ್ರಹಾಲಯ ನಿರ್ದೇಶನಾಲಯ ವಾರ್ಷಿಕ ವರದಿಗಳು, ಮೈಸೂರು, ೧೯೨೬.

೧೫. ಗೋಪಾಲ್ .ಬಾ.ರಾ. ಅವರನ್ನು ಕನ್ನಡ ಲೇಖನಗಳು ಭಾಗ ೧, ಸರಿತಾ ಜ್ಞಾನಾನಂದ ಸಂ, ಕೋಲಾರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಕೆ.ಜಿ.ಎಫ್, ೨೦೦೧.

೧೬. ಗೋಪಾಲ ಬಿ.ಆರ್, ಗುಡ್ನಾಪುರ ಇನ್‌ಸ್ಕ್ರಿಪ್ಶನ್ಸ್ ಆಫ್ ಕದಂಬ ರವಿವರ್ಮ, ಶ್ರೀಕಂಠಿಕಾ (ಡಾ.ಎಸ್.ಶ್ರೀಕಂಠಶಾಸ್ತ್ರಿ ಅಭಿನಂದನ ಗ್ರಂಥ), ಮೈಸೂರು, ೧೯೭೩.

೧೭. ಗೋಪಾಲ ಬಿ.ಆರ್, ಕರ್ನಾಟಕದ ಕಲೆಗಳು, ವಾಸ್ತು, (ಸಂ.೪), ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೯೩.

೧೮. ಚಂದ್ರಪೂಜಾರಿ ಎಂ, ಸಂಶೋಧಕರು ಮತ್ತು ಕ್ಷೇತ್ರಕಾರ್ಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೫.

೧೯. ಚಂದ್ರಪೂಜಾರಿ ಎಂ, ಸಂಶೋಧನೆ ಪ್ರಸ್ತಾವ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, ೨೦೦೮.

೨೦. ಚಿದಾನಂದಮೂರ್ತಿ ಎಂ, ಸಂಶೋಧನೆ, ಡಿವಿಕೆಮೂರ್ತಿ, ಪ್ರಕಾಶಕರು, ಮೈಸೂರು, ೧೯೬೭.

೨೧. ಚಿದಾನಂದಮೂರ್ತಿ ಎಂ, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೨೧. ಚಿನ್ನಸ್ವಾಮಿ ಸೋಸಲೆ ಎನ್., ರಮೇಶ ನಾಯಕ, ಎಂ.ಕೋಟ್ರೇಶ್ (ಸಂ), ಬಾದಾಮಿ ಚಾಲುಕ್ಯರು ಲೇಖನ ಸಂಪುಟ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೯.

೨೨. ತಿಪ್ಪೇರುದ್ರಸ್ವಾಮಿ ಎಚ್, ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಡಿ.ವಿ.ಕೆ.ಮೂರ್ತಿ, ಪ್ರಕಾಶಕರು, ಮೈಸೂರು, ೧೯೯೧.

೨೩. ದೀಕ್ಷಿತ್ ಡಿ.ಪಿ, ಪೊಲಿಟಿಕಲ್ ಹಿಸ್ಟ್ರಿ ಆಫ್ ದಿ ಬಾದಾಮಿ ಚಾಲುಕ್ಯಾಸ್, ಅಭಿನವ್ ಪಬ್ಲಿಕೇಶನ್ಸ್, ದೆಹಲಿ, ೧೯೮೦.

೨೪. ದೀಕ್ಷಿತ್ ಜಿ.ಎಸ್, ಸಂಗಮರ ಕಾಲದ ವಿಜಯನಗರ, ಬಿ.ಎಂ.ಶ್ರೀ.ಸ್ಮಾರಕ ಪ್ರತಿಷ್ಠಾ, ಬೆಂಗಳೂರು, ೧೯೯೧.

೨೫. ದೇಸಾಯಿ ಪಿ.ಬಿ ಮತ್ತು ಇತರರು, ಎ ಹಿಸ್ಟರಿ ಆಫ್ ಕರ್ನಾಟಕ, ಕನ್ನಡ ಸಂಶೋಧನ ಸಂಸ್ಥೆ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೦.

೨೬. ದೇವರಕೊಂಡಾರೆಡ್ಡಿ (ಸಂ), ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೧ ಮತ್ತು ೩, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೮.

೨೭. ದೇಸಾಯಿ ಪಿ.ಬಿ, ಕನ್ನಡ ನಾಡಿನ ಶಾಸನಗಳು, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೮೭.

೨೮. ನರಸಿಂಹಮೂರ್ತಿ ಎ.ವಿ, ವಿಜಯನಗರ ನಾಣ್ಯ ಸಂಪತ್ತು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೯೬.

೨೯. Nagarajarao (Ed), The Mythic Society, Bangalore, 1983.

೩೦. ನರಸಿಂಹಮೂರ್ತಿ ಎ.ವಿ, ಕರ್ನಾಟಕ ಸಂಪತ್ತು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೮೩.

೩೧. ನಾಗರಾಜು ಎಸ್, ದಿ ಅರ್ಲಿ ಹಿಸ್ಟಾರಿಕ್ ಫೇಜ್ ಇನ್ ದಿ ಹಿಸ್ಟರಿ ಅಂಡ್ ಆರ್ಕಿಯಾಲಾಜಿ ಆಫ್ ಕರ್ನಾಟಕ, ಆರ್ಕಿಯಾಲಜಿ ಇನ್ ಕರ್ನಾಟಕ (ಎ.ಸುಂದರ, ಡೈರಕ್ಟೋರೇಟ್ ಆಫ್ ಆರ್ಕಿಯಾಲಾಜಿ ಅಂಡ್ ಮ್ಯೂಜಿಯಮ್ಸ್, ಮೈಸೂರು, ೧೯೯೦)

೩೨. ನರಸಿಂಹಮೂರ್ತಿ ಎ.ವಿ, ಕಾಯಿನ್ಸ್ ಆಫ್ ಕರ್ನಾಟಕ, ಗೀತಾ ಬುಕ್ ಹೌಸ್, ಮೈಸೂರು, ೧೯೭೫.

೩೩. ನರಸಿಂಹಮೂರ್ತಿ ಎ.ವಿ, ನ್ಯೂಮಿಸ್ಮಾಟಿಕ್ ಡ್ಯಾಟಾ ಇನ್ ಬನವಾಸಿ, ಶ್ರೀಕಂಠಿಕಾ, ಮೈಸೂರು, ೧೯೭೩.

೩೪. ನಾಗರಾಜರಾವ್ ಎಂ.ಎಸ್, ಪ್ರೊಗ್ರೆಸ್ ಆಫ್ ಆರ್ಕಿಯಾಲಜಿ ಇನ್ ಕರ್ನಾಟಕ (೧೯೫೬ - ೧೯೭೨), ಪ್ರಾ.ಸಂ.ನಿ, ಮೈಸೂರು, ೧೯೮೫.

೩೫. ನಾಗರಾಜರಾವ್ ಎಂ.ಎಸ್, ಬ್ರಾಹ್ಮಿ ಇನ್‌ಸ್ಕ್ರಿಪ್ಷನ್ಸ್ ಅಂಡ್ ದರ್ ಜೀರಿಂಗ್ ಆನ್ ದಿ ಗ್ರೇಟ್ ಸ್ತೂಪ ಅಟ್ ಸನ್ನತಿ, ಇಂಡಿಯನ್ ಎಪಿಗ್ರಫಿ ಇಟ್ಸ್ ಜೀರಿಂಗ್ ಆನ್ ದಿ ಹಿಸ್ಟರಿ ಆರ್ಟ್, ಅಮೇರಿಕನ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯನ್ ಸ್ಟಡೀಸ್, ವಾರಣಾಸಿ, ೧೯೮೩.

೩೬. Nilakantasastri KA.: A History of south India, From Pre-Historic times to the fall of Vijayanagara, OXford University press, New Delhi, 1955.

೩೭. Narashimhacharya: History of kannada literature, Mysore, 1940.

೩೮. ಪ್ರಾಚೀನ ಕನ್ನಡ ಶಾಸನಗಳ ಭಾಷಿಕ ಅಧ್ಯಯನ, ಎಂ.ಬಿ, ನೇಗಿನಹಾಳ, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೮೨.

೩೯. Percy Brown: Indian Architecture, Vols I and II, Bombay.

೪೦. ಪಂಚಮುಖಿ ಆರ್.ಎಸ್, ಕರ್ನಾಟಕದ ಇತಿಹಾಸ, ಕರ್ನಾಟಕ ಇತಿಹಾಸ ಸಂಶೋಧನ ಮಂಡಲಿ, ಧಾರವಾಡ, ೧೯೪೬-೫೧. ಪದ್ದಯ್ಯ ಕೆ, ಪ್ರೀ ಅಂಡ್ ಪ್ರೋಟೋಹಿಸ್ಟಾರಿಕ್ ಇನ್ ವೆಸ್ಟಿಗೇಷನ್ಸ್ ಇನ್ ಸುಪುರ ದೋಅಬ್, ಲೇಡನ್. ಈ.ಜೆ.ಬ್ರಿಲ್ಸ್, ೧೯೬೮.

೪೧. ಪುರಾತತ್ವ ಸರ್ವೇಕ್ಷಣ ಇಲಾಖೆ ಕೇಂದ್ರ ಸರ್ಕಾರ, ಏನ್ಷಿಯೆಂಟ್ ಇಂಡಿಯಾ, ಸಂಪುಟ ೪.

೪೨. ಫ್ರಾನ್ಸಿಸ್ ಡಬ್ಲು, ಮದ್ರಾಸ್ ಡಿಸ್ಟ್ರಿಕ್ಟ್ ಗೆಜೆಟೆಯಿರ್ ಬಳ್ಳಾರಿ, ಗವರ್ನಮೆಂಟ್ ಪ್ರೆಸ್, ಮದ್ರಾಸ್,

೪೩. Benjamin lewis Rice: Epigrophia Coenatica, (12 VOLUMES) DIRECTOR, MYSORE ARCAEOLOGY DEPARTMENT, MYSORE, 1898.

೪೪. ಬ್ರೂಸ್‌ಫೂಟ್ ಆರ್, ದಿ ಇಂಡಿಯನ್ ಪ್ರೀಹಿಸ್ಟಾರಿಕ್ ಅಂಡ್ ಪ್ರೋಟೋ ಹಿಸ್ಟಾರಿಕ್ ಅಂಟಿಕ್ವಿಟಿಸ್, ದೇರ್ ಏಜಸ್ ಅಂಡ್ ಡಿಸ್ಟ್ರಿಬ್ಯುಶನ್ ಸರ್ಕಾರಿ ವಸ್ತುಸಂಗ್ರಹಾಲಯ, ಮದ್ರಾಸ್, ೧೯೧೬.

೪೫. Burton Stein: Vijayanagara, Cambridge University press, Newyork 10011, USA, 1989.

೪೬. Mahalingam TV: Administratation and Social Life Under Vijayanagara, Madras, 1940.

೪೭. ಮಹದೇವ ಸಿ. ಕರ್ನಾಟಕದ ಪುರಾತತ್ವ ಶೋಧ, ಹಂಪಿ ಕನ್ನಡ ವಿಶ್ವವಿದ್ಯಾಲಯ, ೨೦೦೦.

೪೮. ರಮೇಶ ನಾಯಕ ಸಂ, ಕರ್ನಾಟಕ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನಗಳ ಮರುಚಿಂತನೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭.

೪೯. ರಮೇಶ ಕೊ.ವ್ಯಾ, ಕರ್ನಾಟಕ ಶಾಸನ ಸಮೀಕ್ಷೆ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೧೯೭೧.

೫೦. ರಾಜಶೇಖರ ಸಿಂದಗಿ, ಕರ್ನಾಟಕದ ವಾಸ್ತುಶಿಲ್ಪ ಮತ್ತು ಚಿತ್ರಕಲೆ, ಸುಜಾತಾ ಪಬ್ಲಿಕೇಷನ್, ಧಾರವಾಡ, ೧೯೯೮.

೫೧. ರಾಮಚಂದ್ರ ಎಸ್.ಕೆ, ಮೂರ್ತಿಶಿಲ್ಪ ನೆಲೆ ಹಿನ್ನೆಲೆ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೧೯೭೫.

೫೨. ರಮೇಶ ಕೆ.ವಿ, ದಿ ಚಾಲುಕ್ಯಾಸ್ ಆಫ್ ವಾತಾಪಿ, ಆಗಮ್ ಕಲಾ ಪ್ರಕಾಶನ, ದೆಹಲಿ.

೫೩. ರಾಜಶೇಖರಪ್ಪ ಬಿ, ಚಂದ್ರವಳ್ಳಿ ಶಾಸನದ ಮೇಲೆ ಹೊಸ ಬೆಳಕು, ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ, ಸಂ.೬೯, ಸಂಚಿಕೆ ೨, ಬೆಂಗಳೂರು, ೧೯೮೪.

೫೪. Robert Sewell: A Forgotten Empire (Vijayanagara) A Contribution to the History of India, published by J.Jetley for Asian Educational Services, New Delhi, 1878.

೫೫. ರಾಜಶೇಖರ್ ಎಸ್, ಅರ್ಲಿ ಚಾಲುಕ್ಯನ್ ಆರ್ಕಿಟೆಕ್ಚರ್ (ಐಹೊಳೆ), ಅಭಿನವ ಪ್ರಕಾಶನ, ದೆಹಲಿ, ೧೯೮೫.

೫೬. ರಾಜಶೇಖರ್ ಎಸ್, ಕರ್ನಾಟಕ ಆರ್ಕಿಟೆಕ್ಚರ್, ಸುಜಾತ ಪಬ್ಲಿಕೇಶನ್ಸ್, ಧಾರವಾಡ, ೧೯೮೫.

೫೭. ಲಕ್ಷ್ಮಣ ತೆಲಗಾವಿ, ಮೌರ್ಯ ಮತ್ತು ಶಾತವಾಹನಯುಗ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪.

೫೮. ವ್ಹೀಲರ್, ಆರ್.ಇ.ಎಂ, ಬ್ರಿಹ್ಮಗಿರಿ, ಅಂಡ್ ಚಂದ್ರವಳ್ಳಿ ೧೯೪೭, ಮೆಗಲಿಥಿಕ್ ಅಂಡ್ ಅದರ್ ಕಲ್ಚರ್ಸ್ ಇನ್ ಮೈಸೂರು ಸ್ಟೇಟ್ ಏನ್ಸಿಯೆಂಟ್ ಇಂಡಿಯಾ, ೪, ೧೯೪೮.

೫೯. Venkataramayya: Studies in the History of the third Dynasty of Vijayanagara, Madras, 1935.

೬೦. ವಾಸುದೇವ ಬಡಿಗೇರ, ಸಂಡೂರು ಪರಿಸರದ ಕಾರ್ತಿಕೇಯ ತಪೋವನ, ಮಾಯ ಪ್ರಕಾಶನ, ಕಮಲಾಪುರ, ೧೯೯೭.

೬೧. ವಸುಂಧರ ಫಿಲಿಯೋಜಾ, ಅಳಿದುಳಿದ ಹಂಪೆ, ಮಾನಸೋಲ್ಲಾಸ ಪ್ರಕಾಶನ, ಬೆಂಗಳೂರು, ೧೯೮೭.

೬೨. ವಿರೂಪಾಕ್ಷಿ ಪೂಜಾರಹಳ್ಳಿ, ವಿಜಯನಗರ ಕಾಲದ ಸಂಸ್ಕೃತಿ, ಬೇಟೆ ಪಶುಪಾಲನೆ ಮತ್ತು ಕೃಷಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೮.

೬೩. ಶ್ರೀಕಂಠಶಾಸ್ತ್ರೀ ಎಸ್, ಪುರಾತತ್ವ ಶೋಧನೆ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೭೫.

೬೪. ಶಿವತಾರಕ್ ಕೆ.ಬಿ., ಕರ್ನಾಟಕದ ಪುರಾತತ್ವ ನೆಲೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧.

೬೫. ಶ್ರೀನಿವಾಸ ಪಾಡಿಗಾರ, ಪುರಾತತ್ವ ಪರಿಚಯ, ಗಾಯಿತ್ರಿ ಪ್ರಕಾಶನ, ಧಾರವಾಡ, ೧೯೮೭.

೬೬. ಶೀಲಾಕಾಂತ ಪತ್ತಾರ, ಬಾದಾಮಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬.

೬೭. ಶೆಟ್ಟರ್ ಎಸ್.ಎಸ್ ಮತ್ತು ರಾಜಶೇಖರ್ ಎಸ್, ನಿಟ್ಟೂರಿನ ಅಶೋಕ ಶಿಲಾಶಾಸನಗಳು, ಕರ್ನಾಟಕ ಭಾರತಿ, ಸಂ-೧೦ ಸಂಚಿಕೆ-೧, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೭.

೬೮. ಶೇಷಶಾಸ್ತ್ರಿ ಆರ್, ಶಾಸನ ಪರಿಚಯ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೧೯೮೨.

೬೯. ಶೇಕ ಅಲಿ ಬಿ, ಕರ್ನಾಟಕ ಚರಿತ್ರೆ ಸಂಪುಟ-೩, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭.

೭೦. ಸುಂದರ ಅ, ಕರ್ನಾಟಕ ಪ್ರಾಗಿತಿಹಾಸ ಕಾಲದ ಕಲೆ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು, ೧೯೯೪.

೭೧. ಸೋಮಶೇಖರ್ ಎಸ್.ವೈ., ಹಂಪೆಯ ಬಜಾರಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭.

೭೨. ಸುರೇಶ ಕೆ.ಎಂ ಮತ್ತು ಇತರರು, ಕರ್ನಾಟಕ ದೇವಾಲಯ ಕೋಶ, ಬಳ್ಳಾರಿ ಜಿಲ್ಲೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯.

೭೩. Suryanath kamat (Ed), Histiogrophy of Karnataka, The Mythic Society, Bangalore, 1991.

೭೪. ಸುಂದರ ಅ (ಸಂ), ಕರ್ನಾಟಕ ಚರಿತ್ರೆ ಸಂಪುಟ ೧, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭.

೭೫. ಸಾಂಕಾಲಿಯಾ ಎಚ್.ಡಿ., ಮೆಸೋಲಿಥಿಕ್ ಅಂಡ್ ಪ್ರಿ ಮೆಸೋಲಿಥಿಕ್ ಇಂಡಸ್ಟ್ರೀಜ್ ಫ್ರಾಮ್ ದಿ ಎಕ್ಸಕವೇಷನ್ಸ್ ಅಟ್ ಸಂಗನಕಲ್ಲು, ಬಳ್ಳಾರಿ ಡೆಕ್ಕನ್ ಕಾಲೇಜು, ಪ್ರೊ.ಗಾ.ರಿ.ಇ.ಪುಣೆ, ೧೯೬೯.

೭೬. ಸುಂದರ ಎ, ಜಟ್ಟಿಂಗ ರಾಮೇಶ್ವರದಲ್ಲಿಯ ಪ್ರಾಗಿತಿಹಾಸಿಕ ಪುರಾತತ್ವ ಅವಶೇಷಗಳು ಮತ್ತು ಐತಿಹ್ಯ, ಇತಿಹಾಸ ದರ್ಶನ, ೧೯೮೬.

೭೭. ಸುಂದರ ಎ, ಹಂಪಿ ದಿ ಏನ್ಷಿಯಂಟ್ ಕಿಷ್ಕಿಂಧ

೭೮. ಸುಬ್ಬರಾವ್ ಬಿ, ಸ್ಟೋನ್ ಏಜ್ ಕಲ್ಚರ್ಸ್ ಆಫ್ ಬಳ್ಳಾರಿ, ಡೆ.ಕಾ.ಪೊ.ಗ್ರಾ.ರಿ.ಇ, ಪುಣೆ, ೧೯೪೮.

೭೯. ಸುಂದರ ಅ, ಬನವಾಸಿ ಕದಂಬರ ಕಾಲದ ಕೆಲವು ಶಿಲಾಮೂರ್ತಿಗಳು, ಕರ್ನಾಟಕ ಭಾರತಿ ಸಂಪುಟ-೪, ಭಾಗ-೩, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೧.

೮೦. ಸುಂದರ ಅ, ಬನವಾಸಿ ವಾಸ್ತು ಮತ್ತು ಮೂರ್ತಿಶಿಲ್ಪ, ನವಾಸಿ ಸಮಗ್ರ ಪರಿಚಯ, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೬.

೮೧. ಸುಂದರ ಅ. ಇತಿಹಾಸ ಪೂರ್ವ ಕರ್ನಾಟಕ ಅಥವ ಕರ್ನಾಟಕದ ಪ್ರಾಗೈತಿಹಾಸ, ಐಬಿಎಚ್ ಪ್ರಕಾಶನ, ಬೆಂಗಳೂರು, ೧೯೭೧.

೮೨. ಸರ್ಕಾರ್ ಡಿ.ಸಿ, ಸಕ್ಸೆಸರ್ಸ್ ಆಫ್ ದಿ ಶಾತವಾಹನಾಸ್, ಮುನ್ಷಿರಾಮ್ ಮನೋಹರ್‌ಲಾಲ್ ಪಬ್ಲಿಷರ್ಸ್, ದೆಹಲಿ, ೧೯೩೯.

೮೩. ಹಂಪ ನಾಗರಾಜಯ್ಯ, ಕೊಪ್ಪಳ ಶಾಸನಗಳು, ರತ್ನತ್ರಯ ಪ್ರಕಾಶನ, ಮೈಸೂರು, ೧೯೯೮.

೮೪. ಹಿರೇಮಠ ಆರ್.ಸಿ, ಕಲಬುರ್ಗಿ, ಎಂ.ಎಂ. (ಸಂ), ಕನ್ನಡ ಶಾಸನ ಸಂಪದ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ೧೯೬೮.

೮೫. ಜ್ಞಾನಾನಂದ ಜಿ, ಶಿಲ್ಪಾದರ್ಶ (ಸಂಪುಟ-೨), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨.